॥ ಶ್ರೀಃ ॥

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣ ವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯ ನಮಃ

ಶ್ರೀ ಗುರುಭ್ಯೋ ನಮಃ

ಅಥ ಸಪ್ತಮೋಧ್ಯಾಯಃ

೧೭ನೇ ಅಧ್ಯಾಯವು

ಗತೇಽಥ ಚೇದಿಪೇ ಸ್ವಕಂ ಪುರಂ ಜನಾರ್ದನೋಶೃಣೋತ್ ।
ರಮ್ಯೈವ ರುಗ್ಮಿಣೇತಿ ಯೋದ್ಯತಾಂ ಸ್ವಯಂವರಾಯತಾಮ್ ॥ ೧ ॥

ಶ್ರೀಕೃಷ್ಣನು ವಂಧುರಾ ಪಟ್ಟಣಕ್ಕೆ ಹೋಗುವಾಗ ನಡೆದ ಕಥೆಯನ್ನು ಹೇಳುತ್ತಾರೆ.

ಚೇದಿಪೇ=ಚೇದಿ ದೇಶಕ್ಕೆ ರಾಜನಾದವಮಘೋಷನು ಸ್ವಕಂಪುರಂ=ತನ್ನ ಪಟ್ಟಣವನ್ನು ಕುರಿತು ಗತೇಸತಿ=ಹೋಗುತ್ತಿರಲು ಜನಾರ್ದನಃ=ಉತ್ಪತ್ತಿರಹಿತನಾದ ಸಂಸಾರವನ್ನು ನಾಶಮಾಡುವ ಶ್ರೀಕೃಷ್ಣನು ರುಗ್ಮಿಣೇತಿ=ರುಗ್ಮಿಣಿ ಎಂಬುದಾಗಿ ಯಾ=ಯಾವ ರಮ್ಯೈವ=ಲಕ್ಷ್ಮೀದೇವಿಯೋ ತಾಂ=ಆ ರುಗ್ಮಿಣಿಯನ್ನು ಸ್ವಯಂವರಾಯ=ಸ್ವಯಂವರಕ್ಕೋಸ್ಕರ ಉದ್ಯತಾಂ=ಉದ್ಯುಕ್ತಳಾದವಳನ್ನಾಗಿ ಅಶೃಣೋತ್=ಕೇಳಿದನು. ॥ ೧ ॥

ಸರುಗ್ಮಿನಾಮಕೋಽಗ್ರಜಃ ಶ್ರಿಯೋ ದ್ವಿಷನ್ರಮಾಪತಿಂ ॥
ಹರೇಃ ಪ್ರದಾತುಮುದ್ಯತಾಂನ್ಯವಾರಯದ್ಧರಿಪ್ರಿಯಾಂ ॥ ೨ ॥

ಶ್ರಿಯಃ=ಲಕ್ಷ್ಮೀರೂಪಳಾದ ರುಗ್ಮಿಣಿಯ ಅಗ್ರಜಃ=ಅಣ್ಣನಾದ ರುಗ್ಮಿನಾಮಕಃ=ರುಗ್ಮಿ ಎಂದು ಹೆಸರುಳ್ಳ ಸಃ=ಆ ದೈತ್ಯನು ರಮಾಪತಿಂ=ಸಂಪದಭಿಮಾನಿಯಾದ ಲಕ್ಷ್ಮೀಪತಿಯಾದ ಶ್ರೀಕೃಷ್ಣನನ್ನು ದ್ವಿಷನ್=ಸಂಪದ್ರಹಿತನೆಂದು ದ್ವೇಷಿಸತಕ್ಕವನಾಗಿ ಹರಿಪ್ರಿಯಾಂ=ಶ್ರೀಕೃಷ್ಣನಿಗೆ ಪತ್ನಿಯಾದ ರುಗ್ಮಿಣಿಯನ್ನು ಹರೇಃ=ಶ್ರೀಕೃಷ್ಣನಿಗೆ ಪ್ರದಾತುಂ=ದಾನ ಮಾಡಲು ಉದ್ಯತಾನ್=ಉದ್ಯುಕ್ತರಾದ ಭೀಷ್ಮಕಾದಿ ಸದ್ಬಂಧುಗಳನ್ನು ನ್ಯವಾರಯತ್=ತಡೆದನು. ॥ ೨ ॥

ಪ್ರಘೋಷಿತೇ ಸ್ವಯಂವರೇಽಥ ತೇನ ಮಾಗಧಾದಯಃ ।
ಸಮೀಯು ರುಗ್ರಪೌರುಷಾಃ ಸಸಾಲ್ವಪೌಂಡ್ರಚೇದಿಪಾಃ ॥ ೩ ॥

ಅಥ=ಬಂಧುಗಳನ್ನು ತಡೆದ ಮೇಲೆ ತೇನ=ಆ ರುಗ್ಮಿಯಿಂದ ಸ್ವಯಂವರೇ=ಸ್ವಯಂವರವು ಪ್ರಘೋಷಿತೇ ಸತಿ=ಭೇರಿತಾಡನಾದಿಗಳಿಂದ ಘೋಷಿಸಲ್ಪಡುತ್ತಿರಲು ಉಗ್ರಪೌರುಷಾಃ=ಕ್ರೂರವಾದ ಪರಾಕ್ರಮವುಳ್ಳ ಸಸಾಲ್ವಪೌಂಡ್ರ ಚೇದಿಪಾಃ=ಸಾಲ್ವ, ಪೌಂಡ್ರ, ಶಿಶುಪಾಲ ಇವರಿಂದ ಕೂಡಿದ ಮಾಗಧಾದಯಃ=ಜರಾಸಂಧನೇ ಮೊದಲಾದವರು ಸಮೀಯುಃ=ಬಂದರು. ॥ ೩ ॥

ತದಾ ಜಗಾಮ ಕೇಶವೋಜವೇನಕುಂಡಿನಂಪುರಂ ।
ಸ್ಮೃತೋಽಥ ತೇನ ಪಕ್ಷಿರಾಟ್ ಸಮಾಜಗಾಮ ಕೇಶವಂ ॥ ೪ ॥

ತದಾ = ರಾಜರು ಬರುವ ಸಮಯದಲ್ಲಿ ತೇನ=ಆ ಶ್ರೀಕೃಷ್ಣನಿಂದ ಸ್ಮೃತಃ=ಸ್ಮರಿಸಿಕೊಳ್ಳಲ್ಪಟ್ಟ ಪಕ್ಷಿರಾಟ್=ಪಕ್ಷಿಗಳಿಗೆ ರಾಜನಾದ ಗರುಡನು ಕೇಶವಂ=ಶ್ರೀಕೃಷ್ಣನನ್ನು ಕುರಿತಂ ಸಮಾಜಗಾಮ=ಬಂದನು ಅಥ = ಗರುಡನು ಬಂದ ನಂತರ ಕೇಶವಃ=ಬ್ರಹ್ಮರುದ್ರ ಪ್ರೇರಕನಾದ ಶ್ರೀಕೃಷ್ಣನು ಕುಂಡಿನಂಪುರಂ=ಗರುಡನನ್ನು ಏರಿಕುಂಡಿನ ನಗರವನ್ನು ಕುರಿತಂ ಜವೇನ=ವೇಗದಿಂದ ಜಗಾಮ=ಹೋದನು. ॥ ೪ ॥

ಪತತ್ರವಾಯುನಾಸ್ಯತೇ ವರೇಶ್ವರಾಃ ಪ್ರಪಾತಿತಾಃ ।
ಯದೇದೃಶಂ ಪತತ್ರಿಣೋ ಬಲಂ ಹರೇಃ ಕಿಮುಚ್ಯತೇ ॥ ೫ ॥

ಅಸ್ಯ=ಈ ಗರುಡನ ಪತತ್ರವಾಯುನಾ=ರೆಕ್ಕೆಗಳ ಗಾಳಿಯಿಂದ ತೇ=ಆ ಜರಾಸಂಧನೇ ಮೊದಲಾದ ನರೇಶ್ವರಾಃ=ರಾಜಶ್ರೇಷ್ಠರು ಪ್ರಪಾತಿತಾಃ = ಬಿದ್ದರು ಯದಾ=ಯಾವಾಗ ಪತತ್ರಿಣಃ=ಶ್ರೀಕೃಷ್ಣನ ವಾಹನನಾದ ಗರುಡನ ಬಲಂ=ಸಾಮರ್ಥ್ಯವು ಈದೃಶಂ=ಹಿಂದೆ ಹೇಳಿದ ರೀತಿಯಿಂದ ಉತ್ತಮವೆಂದು ಉಚ್ಯತೇ=ಜನರಿಂದ ಹೇಳಲ್ಪಡುತ್ತದೋ ತದಾ=ಆಗ ಹರೇಃ=ಶ್ರೀಕೃಷ್ಣನ ಬಲಂ=ಸಾಮರ್ಥ್ಯವು ಉತ್ತಮಮಿತಿ=ಶ್ರೇಷ್ಠವಾದದ್ದೆಂದು ಉಚ್ಯತೇ=ಜನರಿಂದ ಹೇಳಲ್ಪಡುತ್ತದೆ ಇತಿ=ಎಂದು ಕಿಮುವಕ್ತವ್ಯಂ=ಏನು ಹೇಳತಕ್ಕದ್ದು. ॥ ೫ ॥

ಕಿಮತ್ರನಃ ಕೃತಂ ಭವೇತ್ ಸುಖಾಯು ಹೀತಿತೇsಬ್ರುವನ್ ।
ಅಥಾಬ್ರವೀಜ್ಜರಾಸುತೋ ಜಯೀಪಯೋಬ್ಧಿಮಂದಿರಃ ॥ ೬ ॥

ಕಿಲೈಷಪಕ್ಷಿವಾಹನೋ ಯತಶ್ಚನಾನ್ಯಥಾಭವೇತ್ ।
ಜಿತಾವಯಂಚ ಸರ್ವಶೋsಮುನೈಕಲೇನ ಸಂಯುಗೇ ॥ ೭ ॥

ತೇ=ಆ ರಾಜರು ಅತ್ರ=ಈ ಸ್ವಯಂವರದಲ್ಲಿ ನಃ=ನಮಗೆ ಕಿಂಕೃತಂ=ಯಾವ ಕರ್ಮವು ಸುಖಾಯ=ಸಂತೋಷಕ್ಕೆ ಭವೇತ್=ಆಗುವುದು ಇತಿ=ಎಂದು ಅಬ್ರುವನ್=ಹೇಳಿದರು. ಅಥ=ಅನಂತರ ಜರಾಸುತಃ=ಜರೆಯು ಮಗನಾದ ಜರಾಸಂಧನು ಅಬ್ರವೀತ್=ಹೇಳಿದನು. ಯತಃ=ಯಾವ ಕಾರಣದಿಂದ ಜಯೀ=ಜಯಶಾಲಿಯಾದ ಪಕ್ಷಿವಾಹನ=ಗರುಡವಾಹನನಾದ ಏಷಃ=ಈ ಶ್ರೀಕೃಷ್ಣನು ಪಯೋಬ್ಧಿಮಂದಿರಃಕಿಲ=ಕ್ಷೀರ ಸಮುದ್ರವು ಮಂದಿರವಾಗಿ ಉಳ್ಳವನಷ್ಟೇ ಅನ್ಯಥಾ=ಕ್ಷೀರ ಸಮುದ್ರವು ಮಂದಿರವಾಗಿ ಉಳ್ಳವನು ಆಗದಿದ್ದರೆ ನಭವೇತ್=ಗರುಡವಾಹನನನು ಆಗಲಾರನು. ಏಕಲೇನ=ಒಬ್ಬನಾದ ಅಮುನಾ = ಈ ಶ್ರೀಕೃಷ್ಣನಿಂದ ಸರ್ವಶಃ=ಎಲ್ಲಾ ವಯಂ=ನಾವು ಸಂಯುಗೇ=ಯುದ್ಧದಲ್ಲಿ ಅನೇಕಶಃ=ಬಹಳಾವರ್ತಿ-ಜತಾಃ=ಪರಾಜಿತರಾಗಿರುವೆವು. ॥ ೭ ॥

ಅನೇಕಶೋ ನ ಸಂಗತೈರ್ಜಿತಃ ಕದಾಚಿದೇಷ ಹಿ ।
ಅಮುಷ್ಯಚಾಗ್ರಜಃ ಪುರಾ ನಿಹಂತು ಮುದ್ಯತೋಹಿ ಮಾಂ ॥ ೮ ॥

ಅದೃಶ್ಯ ವಾಕ್ಯತೋsತ್ಯಜತ್ಪ್ರತಾಡನಾತ್ಸುಪೀಡಿತಂ ।
ಕಿಮುಸ್ಯತೂಚ್ಯತೇ ಬಲಂ ವಯಂ ತೃಣೋಪಮಾಃ ಕೃತಾಃ ॥
ಸಮುಸ್ತ ಶೋ ಮೃಧೇ ಮೃಧೇ ಹಿ ಯೇನ ಚಾಕ್ಷತೇನಹಿ ॥ ೯ ॥

ಅನೇಕಶಃ=ಬಹು ಸಲ ಸಂಗತೈಃ=ವಿಜಿತರಾದ ನಮ್ಮಿಂದ ಏಷಃ=ಈ ಶ್ರೀಕೃಷ್ಣನು ಕದಾಚಿತ್=ಒಮ್ಮೆಯಾದರೂ ನ ಜಿತಃ=ಪರಾಜಿತನಾಗಲಿಲ್ಲ. ಪುರಾ=ಹಿಂದೆ ಆರಂಭದ ಯುದ್ಧದಲ್ಲಿ ಅಮುಷ್ಯ=ಈ ಶ್ರೀಕೃಷ್ಣನ ಅಗ್ರಜಃ=ಅಣ್ಣನಾದ ಬಲರಾಮನು ಮಾಂ=ನನ್ನನ್ನು ನಿಹಂತುಂ=ಕೊಲ್ಲಲು ಉದ್ಯತೋಹಿ = ಉದ್ಯುಕ್ತನಾಗಿರುವನಷ್ಟೆ. ॥ ೮ ॥ ಅದೃಶ್ಯವಾಕ್ಯತಃ=ವಾಯುದೇವರ ಅಶರೀರವಾಣಿಯಿಂದ ಪ್ರತಾಡನಾತ್=ಬಲವಾದ ಹೊಡೆತದಿಂದ ಸುಪೀಡಿತಂ=ಚೆನ್ನಾಗಿ ಪೀಡಿತನಾದ ಮಾಂ=ನನ್ನನ್ನು ಅತ್ಯಜತ್=ಬಿಟ್ಟನು. ಹಿ=ಯಾವ ಕಾರಣದಿಂದ ಅಕ್ಷತೇನ=ಕ್ಷತ ರಹಿತನಾದ ಯೇನ = ಯಾವ ಕೃಷ್ಣನಿಂದ ಮೃಧೇ-

ಮೃಧೇ=ಪ್ರತಿ ಯಂದ್ಧದಲ್ಲಿಯಂಽ ಸಮಸ್ತಶಃವಯಂ=ನಾವೆಲ್ಲರೂ ತೃಣೋಪಮಾಃ=ಹುಲ್ಲಿಗೆ ಸಮಾನರಾಗಿ ಕೃತಾಃ=ಮಾಡಲ್ಪಟ್ಟರುವೆವೋ ತಸ್ಮಾತ್=ಆ ಕಾರಣದಿಂದ ಅಸ್ಯ=ಈ ಕೃಷ್ಣನ ಬಲಂ=ಸಾಮರ್ಥ್ಯವು ಕಿಮುಚ್ಯತ್ಯೇ=ಏನು ಹೇಳಲ್ಪಡುತ್ತದೆ. ಉತ್ತಮವೆಂದು ಏನನ್ನು ಹೇಳತಕ್ಕದ್ದು. ॥ ೯ ॥

ಕಿಮತ್ರ ಕುರ್ವತಾಂ ಸುಖಂ ಭವೇದುದೀರ್ಣಸಂಕಟೇ ।
ಇತಿ ಬ್ರುವನ್ನವಾಙ್ಮುಖಂ ನೃಪಶ್ಚಕಾರ ವಿಚ್ಛವಿ ॥ ೧೦ ॥

ಅತ್ರ=ಈ ಸ್ವಯಂವರದಲ್ಲಿ ಉದೀರ್ಣಸಂಕಟೇ=ಉತ್ಕೃಷ್ಟವಾದ ಆಪತ್ತು ಪ್ರಾಪ್ತವಾಗುತ್ತಿರಲು ಕಿಂ=ಯಾವ ಕರ್ಮವನ್ನು ಕುರ್ವತಾಂ=ಮಾಡತಕ್ಕ ನಮಗೆ ಸುಖಂ=ಸಂತೋಷವು ಭವೇತ್=ಆದೀತು ಇತಿ=ಈ ರೀತಿಯಾಗಿ ಬ್ರುವನ್=ಹೇಳತಕ್ಕ ನೃಪಃ=ಜರಾಸಂಧನು ವಿಚ್ಛವಿ=ಹೊಗಲ್ಪಟ್ಟ ಕಾಂತಿಯುಳ್ಳ ವಾಙ್ಮುಖಂ=ವದನವನ್ನು ಅವಾಕ್ಚ್ಕಾರ=ಕೆಳಗೆ ಮಾಡಿದನು. ॥ ೧೦ ॥

ಅಥಾಹ ಚೇದಿಭೂಪತಿಃ ಸದಂತ ವಕ್ರಕೋವಚಃ ।
ಪುರಾ ಹರೇರ್ಹಿ ಪಾರ್ಷದಃ ಪ್ರಸನ್ನಬುದ್ಧಿರೇಕದಾ ॥ ೧೧ ॥

ಅಥ=ಅನಂತರ ಸದಂತವಕ್ರಕಃ=ದಂತ ವಕ್ರನಿಂದ ಕೂಡಿದ ಚೇದಿಭೂಪತಿಃ=ಚೇದಿದೇಶದ ರಾಜನಾದ ಶಿಶುಪಾಲನು ಹಿ = ಯಾವ ಕಾರಣದಿಂದ ಪುರಾ=ಹಿಂದೆ ಹರೇಃ=ಪರಮಾತ್ಮನ ಪಾರ್ಷದಃ=ದ್ವಾರಪಾಲಕನೋ ತಸ್ಮಾತ್=ಆ ಕಾರಣದಿಂದ ಏಕದಾ=ಒಮ್ಮೊಮ್ಮೆ ಪ್ರಸನ್ನಬುದ್ಧಿಃ=ಪ್ರಸನ್ನನಾದ ಪರಮಾತ್ಮ ವಿಷಯಕ ಬುದ್ಧಿಉಳ್ಳವನು ಅತಏವ=ಆದ್ದರಿಂದಲೇ ವಚಃ=ಅಂತಹ ಮಾತನ್ನು ಆಹ=ಹೇಳಿದನು. ॥ ೧೧ ॥

ಶೃಣುಷ್ವ ರಾಜಸತ್ತಮ ಪ್ರಭುಂ ಶಿವಸ್ವಯಂಭುವೋಃ ।
ಹರಿಂವದಂತಿ ಕೇಚಿದಪ್ಯದೋ ಭವೇನ್ನವೈ ಮೃಷಾ ॥ ೧೨ ॥

ಹೇರಾಜಸತ್ತಮಂ=ಏಲೋರಾಜಶ್ರೇಷ್ಠನಾದ ಜರಾಸಂಧನೇ ಶೃಣುಷ್ವ=ಕೇಳು ಕೇಚಿತ್=ಕೆಲವು ಸಜ್ಜನರು ಹರಿಂ=ಶ್ರೀಕೃಷ್ಣನನ್ನು ಶಿವಸ್ವಯಂಭುವೋಃ=ರುದ್ರಬ್ರಹ್ಮರಿಗೆ ಪ್ರಭುಂ=ಸ್ವಾಮಿಯನ್ನಾಗಿ ವದಂತಿ=ಹೇಳುತ್ತಾರೆ ಅದಃ = ಈ ಮಾತು ಮೃಷಾ = ಸುಳ್ಳು ನಭವೇತ್ = ಆಗಲಾರದು ಸತ್ಯವಾದ್ದಿದ್ದೇ. ॥ ೧೨ ॥

ತಥಾವಯೋಶ್ಚದರ್ಶನೇ ಭವೇತ್ಕದಾಚಿದೂರ್ಜಿತಾ ।
ಅಮುಷ್ಯಭಕ್ತಿರನ್ಯಥಾ ಪುನಶ್ಚಜಾಯತೇ ಕ್ರುಧಾ ॥ ೧೩ ॥

ತಥಾ= ಹಾಗೆಯೇ ಅವಯೋಶ್ಚ=ದಂತವಕ್ರನಿಗೂ ನನಗೂ ಕೂಡ ಅಮುಷ್ಯ=ಈ ಶ್ರೀಕೃಷ್ಣನ ದರ್ಶನೇಸತಿ=ದರ್ಶನವಾಗುತ್ತಿರಲು ಕದಾಚಿತ್=ಒಮ್ಮೆ ಊರ್ಜಿತಾ=ಉತ್ಕೃಷ್ಟವಾದ ಭಕ್ತಿಃ=ಮಾಹಾತ್ಮ್ಯಜ್ಞಾನಪೂರ್ವಕ ಸುದೃಢ ಸ್ನೇಹವು ಭವೇತ್= ಉಂಟಾಗುವುದು. ಪುನಃ=ಅನಂತರ ಕ್ರುಧಾ=ಕೋಪವು ಜಾಯತೇ=ಉಂಟಾಗುವುದು. ಅನ್ಯಥಾ=ಭಕ್ತ್ಯಭಾವವು ಅಂದರೆ ದ್ವೇಷವು ಜಾಯತೇ=ಉಂಟಾಗುವುದು ॥ ೧೩ ॥

ನಕಾರಣಂಚವಿದ್ಮಹೇ ನಸಂಶಯಃ ಪರೋಹರಿಃ ।
ವ್ರಜಾಮ ತಂ ಸುಖಾರ್ಥಿನೋ ವಯಂವಿಹಾಯ ಶತ್ರುತಾಂ ॥ ೧೪ ॥

ವಯಂ = ನಾವು ಕಾರಣಂ = ಶ್ರೀಕೃಷ್ಣನಲ್ಲಿ ಭಕ್ತಿ ದ್ವೇಷಗಳ ಉತ್ಪತ್ತಿಯಲ್ಲಿ ಕಾರಣವನ್ನು ನವಿದ್ಮಹೇ = ತಿಳಿಯಲಾರೆವು. ಹರಿಃ = ಶ್ರೀಕೃಷ್ಣನು ಪರಃ = ಸರ್ವೋತ್ತಮನು ನಸಂಶಯಃ = ಈ ವಿಷಯದಲ್ಲಿ ಸಂದೇಹವಿಲ್ಲ. ನಾವು ಯಾವ ಕರ್ಮವನ್ನು ಮಾಡಿದರೆ ನಮಗೆ ಸುಖವಾದೀತು ಎಂಬ ಜರಾಸಂಧನ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾರೆ. ಸುಖಾರ್ಥಿನಃ = ಸುಖವನ್ನು ಇಚ್ಛಿಸುವ ವಯಂ = ನಾವು ಶತ್ರುತಾಂ = ಕೃಷ್ಣನಲ್ಲಿಶತ್ರುಭಾವವನ್ನು ವಿಹಾಯ = ಬಿಟ್ಟು ತಂ = ಆ ಕೃಷ್ಣನನ್ನು ವ್ರಜಾಮಂ = ಶರಣಂ ಹೊಂದುವ. ॥ ೧೪ ॥

ಇದಂ ಹಿ ನಃ ಶುಭಪ್ರದಂ ನಜಾನ್ಯಥಾ ಶುಭಂ ಕ್ವಚಿತ್ ।
ಇತೀರಿತೋ ಜರಾಸುತೋ ದದರ್ಶ ತೌ ದಹನ್ನಿವ ॥ ೧೫ ॥

ಇದಂ ಹಿ=ನಾನು ಹೇಳಿದ ಶರಣು ಹೊಂದುವಿಕೆಯೇ ನಃ=ನಮಗೆ ಶುಭಪ್ರದಂ=ಸುಖವನ್ನು ಉಂಟುಮಾಡತಕ್ಕದ್ದು ಅನ್ಯಥಾ=ಶರಣು ಹೊಂದದಿದ್ದರೆ ಕ್ವಚಿತ್=ಎಲ್ಲಿಯೂ ಶುಭಂ ನ=ಸುಖವಾಗಲಾರದು. ಇತೀರಿತಃ=ಈ ರೀತಿಯಾಗಿ ಹೇಳಿಸಿಕೊಳ್ಳಲ್ಪಟ್ಟ ಜರಾಸುತಃ=ಜರಾಸಂಧನು ತೌ=ಆ ಶಿಶುಪಾಲ ದಂತವಕ್ತ್ರರನ್ನು ದಹನ್ನಿವ=ಸುಡತಕ್ಕವನಂತೆ ದದರ್ಶ=ನೋಡಿದನು. ॥ ೧೫ ॥

ಅಥ ಪ್ರಹಸ್ಯ ಸೌಭರಾಡ್ವಚೋ ಜಗಾದ ಮಾಗಧಂ ।
ವಿನಿಂದ್ಯ ತೌ ಕ್ರುಧಾ ಸ್ಫುರನ್ ಕ್ರುಧಾ ಸ್ಫುರಂತ ತಮೀಕ್ಷ್ಯ ಚ ॥ ೧೬ ॥

ಅಥ=ಅನಂತರ ಸೌಭರಾಟ್=ಸಾಲ್ವನು ಕ್ರುಧಾ=ಕೋಪದಿಂದ ಸ್ಫುರನ್=ನಡುಗುವವನಾಗಿ ಕ್ರುಧಾ=ಕೋಪದಿಂದ ಸ್ಫುರಂತಂ=ನಡುಗುತ್ತಿರುವ ಮಾಗಧಂ=ಜರಾಸಂಧನನ್ನು ಈಕ್ಷ್ಯ=ನೋಡಿ ತೌ=ಆ ಶಿಶುಪಾಲ ದಂತವಕ್ತ್ರರನ್ನು ವಿನಿಂದ್ಯ=ನಿಂದಿಸಿ ಪ್ರಹಸ್ಯ ಚ=ನಕ್ಕು ವಚಃ=ಮಾತನ್ನು ಜಗಾದ=ಜರಾಸಂಧನನ್ನು ಕುರಿತು ಹೇಳಿದನು. ॥ ೧೬ ॥

ನತನ್ಮೃಷಾ ಹರಿಃಸ್ವಯಂ ಜನಾರ್ದನೋ ವಧಾಯ ನಃ ।
ಪ್ರಜಾತ ಏಷಯಾದವೋ ವಯಂಚದಾನವೇಶ್ವರಾಃ ॥ ೧೭ ॥

ಸ್ವಯಂ ಹರಿಃ=ಶ್ರೀಕೃಷ್ಣನು ಹರಿಯು ಎಂಬ ತತ್=ಆ ನೀನು ಹೇಳಿದ ಮಾತು ಮೃಷಾನ=ಸುಳ್ಳಲ್ಲ (ಹಾಗಾದರೆ ಹರಿಯು ಕೃಷ್ಣನಾಗಿ ಏಕೆ ಹುಟ್ಟಿದನೆಂದರೆ) ಯಾವ ಕಾರಣದಿಂದ ಏಷಃ=ಈ ಹರಿಯು ಜನಾರ್ದನಃ=ದುಷ್ಟರನ್ನು ಸಂಹರಿಸ ತಕ್ಕವನೋ ಆ ಕಾರಣದಿಂದ ನಃ=ನಮ್ಮ ವಧಾಯ=ಸಂಹಾರಕ್ಕೋಸ್ಕರ ಯಾದವಃಸನ್=ಯದುಕುಲದಲ್ಲಿ ಕೃಷ್ಣನಾಗಿ ಪ್ರಜಾತಃ=ಹುಟ್ಟಿದನು (ನಮ್ಮನ್ನು ಏತಕ್ಕೆ ಕೊಲ್ಲಬೇಕು ಎಂದರೆ) ವಯಂಚ=ನಾವಾದರೂ ದಾನವೇಶ್ವರಾಃ=ಹಿಂದೆ ದಾನವರಿಗೆ ನಿಯಾಮಕರು. ॥ ೧೭ ॥

ಹಾಗಾದರೆ ದ್ವೇಷ ನಿವೃತ್ತಿಗಾಗಿ ಸಂಧಾನವನ್ನು ಏಕೆ ಮಾಡಬಾರದು ಎಂಬ ಶಂಕೆಗೆ ಸಮಾಧಾನ ಹೇಳುತ್ತಾನೆ.

ಸ್ವಧರ್ಮ ಏಷ ನಸ್ಸದಾ ದೃಢಪ್ರತೀಪತಾ ಹರೌ ।
ಸ್ವಧರ್ಮಿಣೋಹತಾ ಅಪಿ ಪ್ರಯಾಮ ಸದ್ಗತಿ ಧ್ರುವಂ ॥ ೧೮ ॥

ಹರೌ=ಶ್ರೀಹರಿಯಲ್ಲಿ ಸದಾ=ಯಾವಾಗಲೂ ದೃಢಪ್ರತೀಪತಾ=ದೃಢವಾದ ವಿರೋಧವು ಏಷನಃ=ಇದು ನಮಗೆ ಸ್ವಧರ್ಮಃ=ಸ್ವಕೀಯ ಧರ್ಮವು ಸ್ವಧರ್ಮಾಚರಣೆಯ ಫಲವನ್ನು ಹೇಳುತ್ತಾನೆ ಸ್ವಧರ್ಮಿಣಃ=ಸ್ವಕೀಯ ಹರಿ ವಿರೋಧ ರೂಪ ಧರ್ಮವುಳ್ಳ ನಾವು ಹತಾಅಪಿ=ಕೊಲ್ಲಲ್ಪಟ್ಟವರಾದರೂ ಧ್ರುವಂ=ನಿಶ್ಚಯವಾಗಿಯೂ ಸದ್ಗತಿಂ=ಒಳ್ಳೆ ಗತಿಯನ್ನು ಪ್ರಯಾಮ = ಹೊಂದುತ್ತೇವೆ. ॥ ೧೮ ॥

ಶಿವಶ್ಚ ನಃ ಪರಾಗತಿರ್ಗುರುರ್ಭವಾನರಿರ್ಹರಿಃ ।
ಇತೀರಿತಃ ಸಮಾಗಧೋ ಜಗಾದ ಸಾಧು ಸಾಧ್ವಿತಿ ॥ ೧೯ ॥

ನಃ=ನಮಗೆ ಶಿವಶ್ಚ=ರುದ್ರನೇ ಪರಾಗತಿಃ=ಉತ್ತಮ ಪ್ರಾಪ್ಯನು ಪರದೇವತೆಯು ಭವಾನ್=ರಾಜನಾದ ನೀನು ಗುರುಃ=ಉಪದೇಶಕನು ಹರಿಃ=ಶ್ರೀಕೃಷ್ಣನು ಅರಿಃ=ಶತ್ರುವು ಇತಿ=ಈ ರೀತಿಯಾಗಿ ಈರಿತಃ=ಹೇಳಿಸಿಕೊಳ್ಳಲ್ಪಟ್ಟ ಸಮಾಗದಃ=ಆ ಜರಾಸಂಧನು ಸಾಧು ಸಾಧು=ಒಳ್ಳೆಯ ಮಾತು ಹೇಳಲ್ಪಟಿತು ಒಳ್ಳೆಯ ಮಾತು ಹೇಳಲ್ಪಟಿತು ಇತಿ=ಎಂದು ಜಗಾಮ=ಹೇಳಿದನು. ॥ ೧೯ ॥

ತಥೈವ ರುಗ್ಮಿ ಪೂರ್ವಕಾಃ ಕರೂಶ ಚೇದಿ ಪೌಚ ತೌ ।
ವಿನಿಶ್ಚಯಂ ಕುಬುದ್ಧಯೋ ಯುಧೇ ಚ ಚಕ್ರುರೂರ್ಜಿತಂ ॥ ೨೦ ॥

ತಥೈವ=ಆ ಸಾಲ್ವನಂತೆಯೇ ರುಗ್ಮಿಪೂರ್ವಕಾಃ=ರುಗ್ಮಿಯೇ ಮೊದಲಾಗಿ ಉಳ್ಳವರು ತೌ ಕರೂಶಚೇದಿಪೌಚ= ಆದಾವ ಕರೂಶ ದೇಶಕ್ಕೂ ಚೇದಿ ದೇಶಕ್ಕೂ ಅಧಿಪತಿಗಳಾದ ದಂತವಕ್ರ ಶಿಶುಪಾಲರೂ ಕೂಡ ಹೇಳಿದರು. ಕುಬುದ್ಧಯಃ= ದುಷ್ಟ ಬುದ್ಧಿ ಉಳ್ಳ ಸಾಲ್ವಾದಿಗಳು ವಿನಾ=ಶ್ರೀಕೃಷ್ಣನಿಂದ ಸಹ=ಕೂಡಿಕೊಂಡು ಯುಧೇ=ಯುದ್ಧಕ್ಕಾಗಿ ಊರ್ಜಿತಂ= ಉತ್ಕೃಷ್ಟವಾದ ನಿಶ್ಚಯಂ=ನಿಶ್ಚಯವನ್ನು ಚಕ್ರುಃ=ಮಾಡಿದರು, ವಿನಿಶ್ಚಯಂ ಎಂಬಲ್ಲಿರುವ ವಿ ಶಬ್ದವು ಅತಿಶಯಕ್ಕ ನಿರ್ದೇಶವು ಪರಮಾತ್ಮವಾಚಕವು. ॥ ೨೦ ॥

ಸದಾ ಪ್ರತೀಪಕಾರಿಣೌ ಭವಾವಕೃಷ್ಣ ಇತ್ಯಪಿ ।
ಗುರೋಃ ಪ್ರಸಾದ ಮಾಪ್ನುತಾಂ ಕರೂಶಚೇದಿಭೂಭೃತೌ ॥ ೨೧ ॥

ಯದಾ=ಯಾವಾಗ ಕರೂಶಚೇದಿಭೂಭೃತಾವಪಿ=ಶಿಶುಪಾಲ ದಂತವಕ್ರರೂ ಕೂಡ ಕೃಷ್ಣೇ=ಶ್ರೀಕೃಷ್ಣನಲ್ಲಿ ಸದಾ= ಯಾವಾಗಲೂ ಪ್ರತೀಪಕಾರಿಣೌ=ವಿರೋಧವನ್ನು ಮಾಡತಕ್ಕವರು ಭವಾವ=ಆಗುವ ಇತಿ=ಎಂದು ನಿಶ್ಚಯಂಚಕ್ರತುಃ= ನಿಶ್ಚಯವನ್ನು ಮಾಡಿದರೋ ತದಾ=ಆಗ ಗುರೋಃ=ಗುರುವಾದ ಜರಾಸಂಧನ ಪ್ರಸಾದಂ=ಅನುಗ್ರಹವನ್ನು ಆಪ್ನುತಾಂ= ಹೊಂದಿದರಂ. ॥ ೨೧ ॥

ಪುನಶ್ಚತೇ ತ್ವಮಂತ್ರಯನ್ ಸಹೈವಪಾಪಬುದ್ಧಯಃ ।
ಧ್ರುವಂ ಸಮಾಗತೋಹರಿರ್ಲಭೇತರುಗ್ಮಿಣೇವಿಮಾಂ ॥ ೨೨ ॥

ಪುನಶ್ಚ=ಮತ್ತೂ ಪಾಪಬುದ್ಧಯಃ=ಪಾಪಿಷ್ಠವಾದ ಬುದ್ಧಿ ಉಳ್ಳ ತೇತು=ಆ ಜರಾಸಂಧಾದಿಗಳಾದರೂ ಸಹೈವ= ಕೂಡಿಕೊಂಡು ಅಮಂತ್ರಯನ್ = ಆಲೋಚಿಸಿದರಂ ಹರಿಃ=ಶ್ರೀಕೃಷ್ಣನು ಸಮಾಗತಸ್ಸನ್=ಬಂದವನಾಗಿ ಇಮಾಂ ರುಗ್ಮಿಣೀಂ=ಈ ರುಗ್ಮಿಣಿಯನ್ನು ಧ್ರುವಂ=ನಿಶ್ಚಯವಾಗಿಯೂ ಲಭೇತ=ಹೊಂದುವನಂ. ॥ ೨೨ ॥

ಅಯಂ ತ್ರಿಲೋಕ ಸುಂದರ ಸ್ಸ್ವರೂಪಿಣೇ ಚ ರುಗ್ಮಿಣೇ ।
ಮುಖೇನ ಬಾಹುನಾಪ್ಯಯಂ ಸಮಸ್ತಲೋಕಜಿದ್ವಶೇ ॥ ೨೩ ॥

ಅಯಂ=ಈ ಶ್ರೀಕೃಷ್ಣನು ತ್ರಿಲೋಕ ಸುಂದರಃ=ಮೂರು ಲೋಕಗಳಲ್ಲಿ ಪರಮ ಸುಂದರನಂ. ರುಗ್ಮಿಣೇ ಚ= ರುಗ್ಮಿಣಿಯೂ ಕೂಡ ಸುರೂಪಿಣೇ=ಸುಂದರವಾದ ರೂಪ ಉಳ್ಳವಳು. ಅಯಂ = ಈ ಕೃಷ್ಣನು ಮುಖೇನ=ಮುಖಕಾಂತಿ ಯಿಂದ ಸಮಸ್ತಲೋಕಜಿತ್=ಎಲ್ಲಾ ಜನರ ಮುಖಕಾಂತಿಯಿನ್ನು ಗೆದ್ದವನು. ಮುಖೇನವಶೇ = ಕೃಷ್ಣನ ಮುಖಾವಲೋಕನ ದಿಂದ ಎಲ್ಲರೂ ಆವನ ಅಧೀನರಾಗುವರು. ಬಾಹುನಾಪಿ=ಭುಜಬಲದಿಂದಲೂ ಕೂಡ ಸಮಸ್ತಲೋಕಜಿತ್=ಎಲ್ಲಾ ಜನರನ್ನು ಗೆದ್ದವನಃ. ಆದ್ದರಿಂದಲೇ ವಶೇ=ಎಲ್ಲರನ್ನೂ ತನ್ನ ಅಧೀನದಲ್ಲಿರಿಸಿಕೊಂಡವನಂ. ॥ ೨೩ ॥

ಸಮಸ್ತವೇದಿನಾಂ ವರಂ ಜಿತಾರಿಮುಗ್ರ್ಯರೂಪಿಣಂ ।
ಸಮಸ್ತಯೋಷಿತಾಂವರಾ ವ್ರಜೇತರುಗ್ಮಿಣೇ ಧ್ರುವಂ ॥ ೨೪ ॥

ವಯಂಚಮಾನಸಂಕ್ಷಯಂ ನಿತಾಂತಮಾಪ್ನುಮಸ್ತದಾ ।
ನಶಕ್ನುಮೋನಿವಾರಿತುಂ ಶರೈರಮುಂ ಕಥಂಚನ ॥ ೨೫ ॥

ಸಮಸ್ತವೇದಿನಾಂ=ಎಲ್ಲವನ್ನೂ ತಿಳಿದವರ ಮಧ್ಯದಲ್ಲಿ ವರಂ=ಶ್ರೇಷ್ಠನಾದ ಜಿತಾರಿಂ=ಗೆಲ್ಲಲ್ಪಟ್ಟ ಶತ್ರುಗಳುಳ್ಳ

ರುಗ್ಮಿಣೀ=ರುಗ್ಮಿಣಿಯು ಯದಾ=ಯಾವಾಗ ಧ್ರುವಂ=ನಿಶ್ಚಯವಾಗಿಯೂ ವ್ರಜೇತ=ಹೊಂದುವಳೋ ತದಾ=ಆಗ ವಯಂ=ನಾವು ನಿತಾಂತಂ=ಚೆನ್ನಾಗಿ ಮಾನಸಂಕ್ಷಯಂ=ಮಾನಭಂಗವನ್ನು ಆಪ್ನುಮಃ=ಹೊಂದುತ್ತೇವೆ. ಆಮುಂ=ಈ ಶ್ರೀಕೃಷ್ಣನನ್ನು ಶರೈಃ=ಬಾಣಗಳಿಂದ ನಿವಾರಿತುಂ=ತಡೆಯಲು ಕಥಂಚನ=ಯಾವ ರೀತಿಯಿಂದಲೂ ನಶಕ್ನುಮಃ=ಅಸಮರ್ಥರು. ॥ ೨೪ ॥ ೨೫ ॥

ಅತಃ ಸ್ವಯಂವರೇಯಥಾ ನ ಸಂಗಮೋ ಹರೇರ್ಭವೇತ್ ॥

ತಥಾವಿಧಾನಮೇವನಃ ಸುನೀತಿರೂರ್ಜಿತಾ ಧ್ರುವಂ ॥ ೨೬ ॥

ಅತಃ=ಈ ಕಾರಣದಿಂದ ಸ್ವಯಂವರೇ=ಸ್ವಯಂವರದಲ್ಲಿ ಹರೇಃ=ಶ್ರೀಕೃಷ್ಣನ ಸಂಗಮಃ=ಮೇಲನವು ನಃ=ನಮಗೆ ಯಥಾ=ಹೇಗೆ ನಭವೇತ್=ಆಗಲಾರದೋ ತಥಾವಿಧಾನಮೇವ=ಹಾಗೆ ಮಾಡತಕ್ಕದ್ದೇ ಧ್ರುವಂ=ನಿಶ್ಚಯವಾಗಿಯೂ ಊರ್ಜಿತಾ=ಉತ್ಕೃಷ್ಟವಾದ ಸುನೀತಿಃ=ಉತ್ತಮ ನೀತಿಯು ॥ ೨೬ ॥

ಅತೋ ನದೇಯಮಸ್ಯನಃ ಸುಭೂಭುಜಾಂ ಸಮಾಗಮೇ ।

ಕ್ವಚಿತ್ಕದಾಚಿದಾಸನಂ ನ ಚಾರ್ಘ್ಯಪೂರ್ವಕೋ ವಿಧಿಃ ॥ ೨೭ ॥

ಅತಃ=ಶ್ರೀಕೃಷ್ಣನ ಸಂಗಮವು ನಮಗೆ ಆಗದಿರಲು ಅಸ್ಯ=ಈ ಕೃಷ್ಣನಿಗೆ ಸುಭೂಭುಜಾಂ=ಶ್ರೇಷ್ಠ ರಾಜರಾದ ನಃ=ನಮ್ಮ ಸಮಾಗಮೇ=ಸಮ್ಮೇಲನದಲ್ಲಿ ಕ್ವಚಿತ್=ಇಲ್ಲಿಯಾಗಲೀ ಬೇರೆ ಸ್ಥಳದಲ್ಲಾಗಲೀ ಕದಾಚಿತ್=ಯಾವ ಕಾಲದಲ್ಲಿಯೂ ಕೂಡ ಆಸನಂ=ಆಸನವು ನದೇಯಂ=ಕೊಡಲು ಯೋಗ್ಯವಲ್ಲ ಅರ್ಘ್ಯಪೂರ್ವಕಃ=ಅರ್ಘ್ಯವೇ ಮೊದಲಾಗಿ ಉಳ್ಳ ವಿಧಿಶ್ಚ=ಪೂಜೆಯೂ ಕೂಡ ನ=ಮಾಡಲು ಯೋಗ್ಯವಲ್ಲ. ॥ ೨೭ ॥

ನಚಾಸ್ಯತಿ ಕ್ವಚಿತ್ಕ್ಷಿತೌ ವಿಮಾನಿತಃ ಪುರೋಹಿನಃ ।

ವರಾಸನಸ್ಥಭೂಭುಜಾಂ ಸಮಾನಿತೋಹಿ ದೈವತೈಃ ॥ ೨೮ ॥

ಹಿ=ಯಾವ ಕಾರಣದಿಂದ ಸಃ=ಆ ಶ್ರೀಕೃಷ್ಣನು ದೈವತೈಃ=ದೇವತೆಗಳಿಂದ ಮಾನಿತಃ=ಗೌರವಿಸಲ್ಪಟ್ಟವನೋ ಅತ=ಆದ್ದರಿಂದ ವರಾಸನಸ್ಥಭೂಭುಜಾಂ=ಉತ್ತಮ ಆಸನದಲ್ಲಿ ಕುಳಿತಿರುವ ರಾಜರಾದ ನಃ=ನಮ್ಮ ಪುರಃ=ಮುಂಭಾಗದಲ್ಲಿ ವಿಮಾನಿತಸ್ಸನ್=ಅವಮಾನಿತನಾಗಿ ಕ್ಷಿತೌ=ಭೂಮಿಯಲ್ಲಿ ಕ್ವಚಿತ್=ಎಲ್ಲಿಯೂ ಕೂಡ ನಚಾಸ್ಸತಿ=ಕುಳಿತುಕೊಳ್ಳುವುದಿಲ್ಲ. ॥ ೨೮ ॥

ಸ ದರ್ಪಮಾನಸಂಯುತಃ ಕ್ರುಧಾ ಪ್ರಯಾಸ್ಯತಿ ಧ್ರುವಂ ।

ಪುರೀಂ ಸ್ವಕಾಂ ತತೋವಯಂ ವಿಧೇಮಚ ಸ್ವಯಂವರಂ ॥ ೨೯ ॥

ದರ್ಪಮಾನಸಂಯುತಃ=ಗರ್ವವೂ ಅಭಿಮಾನವೂ ಇವುಗಳಿಂದ ಕೂಡಿದ ಸಃ=ಆ ಶ್ರೀಕೃಷ್ಣನು ಕುಧ್ರಾ=ಕೋಪದಿಂದ ಸ್ವಕಾಂಪುರೀಂ=ತನ್ನ ಪಟ್ಟಣವನ್ನು ಕುರಿತು ಧ್ರವಂ=ನಿಶ್ಚಯವಾಗಿಯೂ ಪ್ರಯಾಸ್ಯತಿ=ಹೋಗುವನು. ತತಃ=ಕೃಷ್ಣನು ಹೋದ ಮೇಲೆ ವಯಂ=ನಾವು ಸ್ವಯಂವರಂ=ಸ್ವಯಂ ವರವನ್ನು ವಿಧೇಮ=ಮಾಡುವೆವು ॥ ೨೯ ॥

ಇತಿಸ್ಮ ಸರ್ವಭೂಭುಜಾಂ ವಿನಿಶ್ಚಯಂ ಸಕೈಶಿಕಃ ।

ಕ್ರಥೋಽವಗಮ್ಯ ಭೀಷ್ಮಕಾನುಜೋಽಭ್ಯಯಾದ್ಧರಿಂ ದ್ರುತಂ ॥ ೩೦ ॥

ಸಕೈಶಿಕಃ=ಕೈಶಿಕನಿಂದ ಕೂಡಿದ ಭೀಷ್ಮಕಾನುಜಃ=ಭೀಷ್ಮಕ ರಾಜನ ತಮ್ಮನಾದ ಕ್ರಥಃ=ಕ್ರಥ ಎಂಬ ರಾಜನು ಇತಿ=ಈ ಹಿಂದೆ ಹೇಳಿದ ರೀತಿಯಿಂದ ಸರ್ವಭೂಭುಜಾಂ=ಎಲ್ಲಾ ರಾಜರ ವಿನಿಶ್ಚಯಂ=ನಿಶ್ಚಯವನ್ನು ಅವಗಮ್ಯ=ತಿಳಿದು ದ್ರುತಂ=ಬೇಗನೇ ಹರಿಂ=ಶ್ರೀಕೃಷ್ಣನನ್ನು ಕುರಿತು ಅಭ್ಯಯಾತ್=ಓಡಿಹೋದನು. ॥ ೩೦ ॥

ಪ್ರಣಮ್ಯ ಪಾದಪದ್ಮಯೋರ್ನಿಜಂಗೃಹಂ ಪ್ರವೇಶ್ಯ ಚ ।
ಮಹಾಸನಂ ಪ್ರದಾಯು ತೌ ಪ್ರಚಕ್ರತುರ್ವರಾರ್ಚನಂ ॥ ೩೧ ॥

ತೌ=ಆ ಕ್ರಥಕೈಶಿಕರಂ ಪಾದಪದ್ಮಯೋಃ = ಶ್ರೀ ಕೃಷ್ಣನ ಪಾದಕಮಲಗಳಲ್ಲಿ ಪ್ರಣಮ್ಯ = ನಮಸ್ಕರಿಸಿ ನಿಜಂ = ತಮ್ಮ ಗೃಹಂ = ಮನೆಯನ್ನು ಪ್ರವೇಶ್ಯ ಚ = ಪ್ರವೇಶ ಮಾಡಿಸಿ ಮಹಾಸನಂ = ಶ್ರೇಷ್ಠ ಆಸನವನ್ನು ಪ್ರದಾಯು = ಕೊಟ್ಟು ವರಾರ್ಚನಂ = ಉತ್ತಮ ಪೂಜೆಯನ್ನು ಪ್ರಚಕ್ರತುಃ = ಮಾಡಿದರು. ॥ ೪೧ ॥

ಅಥಾಗಮಚ್ಛತಕ್ರತೋರ್ವರ್ಚಃ ಪ್ರಗೃಹ್ಯ ಭೂಭುಜಃ ।
ಜರಾಸುತಾದಿಕಾನ್ ಪುಮಾನುವಾಚ ಚಾರ್ಥವದ್ವಚಃ ॥ ೩೨ ॥

ಅಥ = ಅನಂತರ ಶತಕ್ರತೋಃ = ನೂರು ಅಶ್ವಮೇಧಗಳನ್ನು ಮಾಡಿದ ಇಂದ್ರನ ಪುಮಾನ್ = ದೂತನು ವಚಃ = ಇಂದ್ರನ ಮಾತನ್ನು ಪ್ರಗೃಹ್ಯ = ಸ್ವೀಕರಿಸಿಕೊಂಡು ಭೂಭುಜಃ = ರಾಜರನ್ನು ಕುರಿತು ಅಗಮತ್ = ಬಂದನು. ಜರಾಸುತಾದಿಕಾನ್ = ಜರಾಸಂಧನೇ ಮೊದಲಾದ ರಾಜರನ್ನು ಅರ್ಥವತ್ = ಅರ್ಥವತ್ತಾದ ಅಂದರೆ ವ್ಯರ್ಥವಲ್ಲದ ವಚಃ = ಮಾತನ್ನು ಉವಾಚ = ಹೇಳಿದನು. ॥ ೩೨ ॥

ಅಹಂ ಪ್ರಿಯಃ ಶಚೀಪತೇಃ ಸದಾಸ್ಯಚಾಕ್ಷ್ಣಿಗೋಚರಃ ।
ಸುರೇಂದ್ರ ಆಜ್ಞಯಾವದನ್ನೃಪಾನ್ವಈಶ್ವರೋಹಿಸಃ ॥ ೩೩ ॥

ಅಹಂ = ನಾನು ಶಚೀಪತೇಃ = ಶಚಿಯ ಗಂಡನಾದ ಇಂದ್ರನಿಗೆ ಸದಾ = ಯಾವಾಗಲೂ ಪ್ರಿಯಃ = ಪ್ರೀತಿ ಪಾತ್ರನು ಸದಾ = ಯಾವಾಗಲೂ ಅಸ್ಯ = ಈ ಇಂದ್ರನ ಅಕ್ಷ್ಣಿಗೋಚರಃ = ಕಣ್ಣಿಗೆ ವಿಷಯನಾದವನು ಸುರೇಂದ್ರಃ = ದೇವೇಂದ್ರನು ಹಿ = ಯಾವ ಕಾರಣದಿಂದ ವಃ = ನಿಮಗೆ ಈಶ್ವರಃ = ಸ್ವಾಮಿಯೋ ತತಃ = ಆ ಕಾರಣದಿಂದ ಸಃ = ಆ ಇಂದ್ರನು ನೃಪಾನ್ = ರಾಜರಾದ ನಿಮ್ಮನ್ನು ಕುರಿತು ಆಜ್ಞಯಾ = ಆಜ್ಞಾರೂಪವಾದ ಮಾತನ್ನು ಅವದತ್= ಹೇಳಿದನು. ॥ ೩೩ ॥

ಸಮಸ್ತರಾಜಸತ್ಪತಿರ್ಹರಿರ್ನಚಾನ್ಯ ಇತ್ಯಪಿ ।
ವರಾಭಿಷೇಕಮಿಪ್ಸಿತುಃ ಕುರುಧ್ವಮಾಶ್ವಸಂಶಯಂ ॥ ೩೪ ॥

ಆಜ್ಞಾ ರೂಪ ವಾಕ್ಯವನ್ನು ಸ್ಪಷ್ಟಪಡಿಸುತ್ತಾನೆ.

ಸಮಸ್ತ ರಾಜಸತ್ಪತಿಃ = ಎಲ್ಲಾ ಜರಾಸಂಧಾದಿ ರಾಜರಿಗೆ ಮುಖ್ಯ ಸ್ವಾಮಿಯು ಹರಿರಪಿಃ = ಶ್ರೀಕೃಷ್ಣನೇ ಅನ್ಯಃ = ಬೇರೊಬ್ಬನು ನಚ = ಇಲ್ಲವೇ ಇಲ್ಲ. ಇತಿ = ಈ ಅಭಿಪ್ರಾಯದಿಂದ ಈಶಿತುಃ = ಸರ್ವಸ್ವಾಮಿಯಾದ ಶ್ರೀಕೃಷ್ಣನಿಗೆ ಅಸಂಶಯಂ = ಸಂಶಯವಿಲ್ಲದ್ದು ಹೇಗೋ ಹಾಗೆ ವರಾಭಿಷೇಕಂ = ಸಾಮ್ರಾಜ್ಯಾಭಿಷೇಕವನ್ನು ಆಶು = ಬೇಗನೇ ಕುರುಧ್ವಂ=ಮಾಡಿರಿ. ॥ ೩೪ ॥

ಅತೋಽನ್ಯಥಾ ಶಿರಸ್ಯಹಂ ನಿಪಾತಯಾವಿವೋಽಶನಿಂ ।
ಇತೀ ದವಿಂದ್ರಶಾಸನಂ ಕುರುಧ್ವಮಿತ್ಯಸೌ ಯಯೌ ॥ ೩೫ ॥

ಅತೋಽನ್ಯಥಾ = ನನ್ನ ಆಜ್ಞೆಯ ವಿಪರೀತಾಚರಣೆಯಿಂದ (ಅಂದರೆ ಕೃಷ್ಣನಿಗೆ ಅಭಿಷೇಕ ಮಾಡದಿರುವುದರಿಂದ) ಅಹಂ = ನಾನು ವಃ = ನಿಮ್ಮ ಶಿರಸಿ = ತಲೆಯ ಮೇಲೆ ಅಶನಿಂ = ವಜ್ರಾಯುಧವನ್ನು ನಿಪಾತಯಾವಿಂ = ಹಾಕುವೆನು ಇತಿ = ನಾನು ಹೇಳಿದ ರೀತಿಯಿಂದ ಇದಂ = ಈ ಅಭಿಷೇಕಕರಣ ರೂಪವಾದ ಇಂದ್ರಶಾಸನಂ = ಇಂದ್ರನ ಆಜ್ಞೆಯನ್ನು ಕುರುಧ್ವಂ = ಮಾಡಿರಿ. ಇತಿ = ಈ ರೀತಿಯಾಗಿ ಹೇಳಿ ಅಸೌ = ದೂತನು ಯಯೌ = ಹೋದನು. ॥ ೩೫ ॥

ತದೀರಿತಂ ನಿಶಮ್ಯತೇ ಪುನಃಸುತಪ್ತಚೇತಸಃ ।
ಬಭೂವುರೂಚಿರೇವಚಃ ಸುಗರ್ವಿತೋಹಿವಾಸವಃ ॥ ೩೬ ॥

ತೇ = ಆ ಜರಾಸಂಧಾದಿಗಳು ತದೀರಿತಂ=ಆ ಇಂದ್ರನ ದೂತನಿಂದ ಹೇಳಲ್ಪಟ್ಟ ಮಾತನ್ನು ನಿಶಮ್ಯ=ಕೇಳಿ ಪುನಃ=ಮತ್ತೂ ಸುತಪ್ತಚೇತಸಃ=ಅತ್ಯಂತ ಸಂತಪ್ತವಾದ ಮನಸ್ಸುಳ್ಳವರು ಬಭೂವುಃ=ಆದರಂವ ಚಃ=ಮಾತನ್ನು ಊಚಿರೇ=ಹೇಳಿದರು ವಾಸವಃ=ದೇವೇಂದ್ರನಂ ಇದಾನೀಂ=ಈಗ ಸುಗರ್ವಿತೋಹಿ ಅತಿಗರ್ವಿಷ್ಟನಾಗಿರುವನಷ್ಟೇ ॥ ೩೬ ॥

ಪುರಾ ಬಿಭೇತಿ ನಃ ಸದಾ ಪ್ರತಿಪ್ರತಿ ಸ್ಮ ವಾಸವೆಃ ।
ಉತಾದ್ಯ ಕೃಷ್ಣ ಸಂಶ್ರಯಾದ್ದೃಢಂ ವಿಭೀಷಯತ್ಯ ಸೌ ॥ ೩೭ ॥

ವಾಸವಃ=ದೇವೇಂದ್ರನು ಪುರಾಃ=ಶ್ರೀಕೃಷ್ಣನು ಅವತರಿಸುವ ಮೊದಲು ನಃ=ನಮ್ಮ ದೆಸೆಯಿಂದ ಸದಾ=ಯಾವಾಗಲೂ ಪ್ರತಿಪ್ರತಿ=ಒಬ್ಬೊಬ್ಬರಿಂದಲೂ ಬಿಭೇತಿಸ್ಮ=ಹೆದರುತ್ತಿದ್ದನು. ಉತ=ಮತ್ತು ಅದ್ಯ=ಈಗ ಅಸೌ=ಈ ದೇವೇಂದ್ರನು ಕೃಷ್ಣಸಂಶ್ರಯಾತ್ = ಶ್ರೀಕೃಷ್ಣನ ಆಶ್ರಯದಿಂದ ದೃಢಂ=ನಿಶ್ಚಯವಾಗಿಯೂ ವಿಭೀಷಯತಿ=ಹೆದರಿಸುತ್ತಾನೆ. ॥ ೩೭ ॥

ಅದೃಶ್ಯಏವ ದೇವರಾಡ್ಯದಿ ಸ್ಮ ವಜ್ರಮುತ್ಸೃಜೇತ್ ।
ಭವೇಮ ಪೀಡತಾವಯಂ ವರಾದವ್ಯುತ್ಕವೋsಪಿಹಿ ॥ ೩೮ ॥

ದೇವರಾಟ್=ಇಂದ್ರನು ಅದೃಶ್ಯಏವಸನ್=ಅದೃಶ್ಯನಾಗಿಯೇ ವಜ್ರಂ=ವಜ್ರಾಯುಧವನ್ನು ಉತ್ಸೃಜೇದ್ಯದಿ=ಬಿಸಾಡಿದ ಪಕ್ಷದಲ್ಲಿ ವರಾತ್=ವರದಿಂದ ವಯಂ=ನಾವು ಅಮೃತ್ಯವೋsಪಿ=ಮರಣರಹಿತರಾದಾಗ್ಯೂ ಕೂಡ ಪೀಡಿತಾಃ=ಪೀಡಿಸಲ್ಪಟ್ಟವರು ಭವೇಮ=ಆಗುವೆವು ॥ ೩೮ ॥

~~ಪುರಾದಿವಿ ಸ್ಥಿತಸ್ಯಚ ಪ್ರಮರ್ದನೇ ವಯಂ ಕ್ಷಮಾ ।~~
ಉತಾದ್ಯ ಯದ್ಯಮುಂ ವಯಂ ವ್ರಜೇಮ ಕೃಷ್ಣ ಏಷ್ಯತಿ ॥ ೩೯ ॥

ಪುರಾ=ಹಿಂದೆ ದಿವಿಸ್ಥಿತಸ್ಯ=ಸ್ವರ್ಗದಲ್ಲಿರುವ ದೇವೇಂದ್ರನ ಪ್ರಮರ್ದನೇ=ಮರ್ದಿಸುವ ವಿಷಯದಲ್ಲಿ ವಯಂ=ನಾವು ಕ್ಷಮಾಃ=ಸಮರ್ಥರು. ಉತ=ಮತ್ತು ಅದ್ಯ=ಈಗ ವಯಂ=ನಾವು ಅಮುಂ=ಈ ಇಂದ್ರನನ್ನು ಕುರಿತು ಯದಿ ವ್ರಜೇಮ=ಹೋದದ್ದಾದರೆ ತರ್ಹಿ=ಆ ಪಕ್ಷದಲ್ಲಿ ಕೃಷ್ಣಃ=ಕೃಷ್ಣನು ಏಷ್ಯತಿ=ಯುದ್ಧಕ್ಕಾಗಿ ಬರುವನು. ॥ ೩೯ ॥

ಅತೋsಭಿಷೇಚನಾದ್ಯದೀಹ ಶಾರ್ಙ್ಗಿಣಃ ಶಚೀಪತಿಃ ।
ನ ವಜ್ರಮುತ್ಸೃಜೇತ್ತದಾಭಿಷೇಚಯಾಮು ತಂ ವಯಂ ॥ ೪೦ ॥

ಅತಃ=ಆದ್ದರಿಂದ ಶಚೀಪತಿಃ=ಇಂದ್ರನು ಶಾರ್ಙ್ಗಧಾರಿಣಃ=ಶಾರ್ಙ್ಗ ಎಂಬ ಧನುಸ್ಸನ್ನು ಧರಿಸಿರುವ ಶ್ರೀಕೃಷ್ಣನಿಗೆ ಅಭಿಷೇಚನಾತ್=ಅಭಿಷೇಕ ಮಾಡುವುದರಿಂದ ವಜ್ರಂ = ವಜ್ರಾಯುಧವನ್ನು ಇಹ=ನಮ್ಮಲ್ಲಿ ನ ಉತ್ಸೃಜೇದ್ಯದಿ = ಬಿಸಾಡದಿದ್ದರೆ ತದಾ=ಆ ಪಕ್ಷದಲ್ಲಿ ತಂ ಆ ಕೃಷ್ಣನನ್ನು ಅಭಿಷೇಚಯಾಮು=ಅಭಿಷೇಕ ಮಾಡುವೆವು. ॥ ೪೦ ॥

ಅತೋsನ್ಯಥಾ ದನುರ್ಯಥಾ ವರಾದಮೃತ್ಯುಕೋsಪಿಸನ್ ।
ಸುರೇಂದ್ರ ವಜ್ರತಾಡಿತೋ ಬಭೂವ ಕುಕ್ಷಿಗಾಸ್ಯಯುಕ್ ॥ ೪೧ ॥

ಅತೋsನ್ಯಥಾ=ಕೃಷ್ಣನಿಗೆ ಅಭಿಷೇಕ ಮಾಡದಿದ್ದರೆ ದನುಃ=ದನು ಎಂಬ ರಾಕ್ಷಸನು ಅಮೃತ್ಯುಕಸ್ಸನ್ನಪಿ=ಮರಣವಿಲ್ಲದವನಾದರೂ ಕೂಡ ಸುರೇಂದ್ರವಜ್ರತಾಡಿತಸ್ಸನ್=ದೇವೇಂದ್ರನ ವಜ್ರದಿಂದ ಹೊಡೆಯಲ್ಪಟ್ಟವನಾಗಿ ಯಥಾ=ಹೇಗೆ ಕುಕ್ಷಿಗಾಸ್ಯಯುಕ್=ಹೊಟ್ಟೆಯಲ್ಲಿರತಕ್ಕ ಮುಖದಿಂದ ಕೂಡಿದವನು ಬಭೂವ=ಆದನೋ. ॥ ೪೧ ॥

ತಥೈವ ಕೃಷ್ಣಸಂಶ್ರಯಾತ್ಸನಃ ಶಚೀಪತಿರ್ನಯೇತ್ ।
ಇತಿಸ್ಮ ನಿಶ್ಚಿತಾ ನೃಪಾ ನಯಾತಯಂತ ಶೌರ ಯೇ ॥ ೪೨ ॥

ತಥೈವ=ಆ ದನುವಿನಂತೆಯೇ ಶಚೀಪತಿಃ=ಆ ದೇವೇಂದ್ರನು ಕೃಷ್ಣಸಂಶ್ರಯಾತ್=ಕೃಷ್ಣನ ಆಶ್ರಯದಿಂದ ನಃ=ನಮ್ಮನ್ನು ನಯೇತ್=ಹೊಂದಿಸಿಯಾನು. ಇತಿ = ಈ ಹಿಂದೆ ಹೇಳಿದ ರೀತಿಯಿಂದ ವಿಚಾರ ಮಾಡಿ ನಿಶ್ಚಿತಾಃ=ಅಭಿಷೇಕ ಮಾಡಲು ನಿರ್ಣಯವನ್ನು ಮಾಡಿದ ಜರಾಸಂಧಾದಿಗಲು ನೃಪಾನ್=ಕೆಲವು ರಾಜರನ್ನು ಶೌರಯೇ=ಕೃಷ್ಣನಅಭಿಷೇಕಕ್ಕೋಸ್ಕರ ಅಯಾತಯಂತ=ಕಳುಹಿಸಿದರು. ॥ ೪೨ ॥

ಜರಾಸಂಧಾದಿಗಳು ಹೋಗದೇ ಇತರರನ್ನು ಯಾಕೆ ಕಳುಹಿಸಿದರು. ಇಂದ್ರನು ಏಕೆ ಕುಪಿತನಾಗಲಿಲ್ಲ ಎಂಬ ಶಂಕೆಗೆ ಉತ್ತರವನ್ನು ಹೇಳುತ್ತಾರೆ.

ಸಮುಸ್ತಶೋ ಜರಾಸುತಾದಿಭಿಃ ಕೃತೇಽಭಿಷೇಚನೇ ।
ಅತೀವ ಭಗ್ನಮಾನಕಾನ್ನ ಚಾನುಯಾತಿ ಕಶ್ಚನ ॥ ೪೩ ॥

ಸಮುಸ್ತಶಃ=ಎಲ್ಲಾ ಜರಾಸುತಾದಿಭಿಃ=ಜರಾಸಂಧನೇ ಮೊದಲಾದವರಿಂದ ಅಭಿಷೇಚನೇ=ಅಭಿಷೇಕವು ಕೃತೇಸತಿ=ಮಾಡಲ್ಪಡುತ್ತಿರಲು ಅತೀವ=ಅಂತ್ಯಂತವಾಗಿ ಭಗ್ನಮಾನಕಾನ್=ನಷ್ಟವಾದ ಅಭಿಮಾನವುಳ್ಳ ಜರಾಸಂಧಾದಿಗಳನ್ನು ಕಶ್ಚನ=ಯಾವ ಪುರುಷನೂ ಕೂಡ ನಾನುಯಾತಿ = ಅನುಸರಿಸುವುದಿಲ್ಲ. ॥ ೪೩ ॥

ಸಮಾಶ್ರಯಂಚ ಕೇಶವಂ ತದೈವ ಜೀವನಾರ್ಥಿನಃ ।
ಪ್ರಕುರ್ಯುರಾಸುರಾ ಅಪೀತಿ ದೇವಕಾರ್ಯಸಂಕ್ಷಯಃ ॥ ೪೪ ॥

ಇತೀಕ್ಷ್ಯ ಪಾಕಶಾಸನೋಽವದಜ್ಜರಾಸುತಾದಿಕಾನ್ ।
ಸರುಗ್ಮಿಸಾಲ್ವಚೇದಿಪೋ ನಯಾತುಮಾಗಧೋ ಹರಿಂ ॥ ೪೫ ॥

ತದಾ=ಮಾನಭಂಗ ಕಾಲದಲ್ಲಿ ಅಸುರಾ ಅಪಿ=ಅಸುರರೂ ಕೂಡ ಜೀವನಾರ್ಥಿವಸ್ಸಂತಃ=ಜೀವನವನ್ನು ಅಪೇಕ್ಷಿಸುವವರಾಗಿ ಕೇಶವಮೇವ = ಶ್ರೀಕೃಷ್ಣನನ್ನೇ ಸಮಾಶ್ರಯಂ=ಚೆನ್ನಾಗಿ ರಕ್ಷಕನನ್ನಾಗಿ ಪ್ರಕುರ್ಯುಃ=ಮಾಡುವರು. ಇತಿ=ಈ ಕಾರಣದಿಂದ ಅಂದರೆ ಎಲ್ಲರೂ ಶ್ರೀಕೃಷ್ಣನನ್ನು ಮೊರೆ ಹೊಂದಿದರೆ ಶರಣಾಗತರನ್ನು ಸಂಹರಿಸುವುದು ಅಯೋಗ್ಯವಾದ್ದರಿಂದ ದೇವಕಾರ್ಯಸಂಕ್ಷಯಃ=ಭೂಭಾರಭೂತರಾದ ದೈತ್ಯರ ಸಂಹಾರ ರೂಪವಾದ ದೇವತೆಗಳ ಕಾರ್ಯದ ನಾಶವು ಆಗಬೇಕಾಗುವುದು. ಇತಿ=ಈ ರೀತಿಯಾಗಿ ಈಕ್ಷ್ಯ=ವಿಚಾರ ಮಾಡಿ ಪಾಕಶಾಸನಃ=ದೇವೇಂದ್ರನು ಸರುಗ್ಮಿಸಾಲ್ವಚೇದಿಪಃ=ರುಗ್ಮಿ, ಸಾಲ್ವ, ಶಿಶುಪಾಲ ಇವರಿಂದ ಕೂಡಿದ ಮಾಗಧಃ=ಜರಾಸಂಧನು ಹರಿಂ=ಶ್ರೀಕೃಷ್ಣನನ್ನು ನಯಾತುಂ=ಅಭಿಷೇಕಕ್ಕಾಗಿ ಹೋಗದಿರಲಿಲ್ಲ. ಹೀಗೆ ಇಂದ್ರನು ಜರಾಸಂಧಾದಿಗಳನ್ನು ಕುರಿತು ದೂತ ಮುಖದಿಂದ ಹೇಳಿಸಿದನು. ॥ ೪೪ ॥ ೪೫ ॥

ತತಸ್ತುತಾನ್ವಿನಾಪರೇಽಧಿರಾಜರಾಜ ಇತ್ಯಮುಂ ।
ತದಾಭಿಷೇಕ್ತುಮುದ್ಯತಾ ನೃಪಾಃ ಸುರೇಶ ಶಾಸನಾತ್ ॥ ೪೬ ॥

ತತಃ = ಆ ಕಾರಣದಿಂದ ಅಪರೇನೃಪಾಃ=ಜರಾಸಂಧಾದಿಗಳಿಂದ ಇತರ ರಾಜರು ಸುರೇಶ ಶಾಸನಾತ್=ಇಂದ್ರನ ಆಜ್ಞೆಯಿಂದ ತಾನ್ವಿನಾ=ಮಾಗಧಾದಿ ನಾಲ್ವರನ್ನು ಬಿಟ್ಟು ಅಧಿರಾಜರಾಜಃ ಇತಿ=ಚಕ್ರವರ್ತಿಗಳಿಗೂ ರಾಜನೆಂದು ಆವಮುಂ=ಈ ಕೃಷ್ಣನನ್ನು ಅಭಿಷೇಕ್ತುಂ=ಅಭಿಷೇಕ ಮಾಡಲು ತದಾ=ಆದಾಗ ಉದ್ಯತಾಃ = ಉದ್ಯೋಗ ಮಾಡಿದರು. ॥ ೪೬ ॥

ತತಃ ಶಚೀಪತಿರ್ನಿಜಂ ವರಾಸನಂ ಹರೇರದಾತ್ ।
ವಿವೇಶ ತತ್ರಕೇಶವೋ ನಭಸ್ಥಾವತಾರಿತೇ ॥ ೪೭ ॥

ತತಃ=ಆ ಮೇಲೆ ಶಚೀಪತಿಃ=ದೇವೇಂದ್ರನು ಹರೇಃ=ಶ್ರೀಕೃಷ್ಣನಿಗೆ ನಿಜಂ=ತನ್ನದ್ದಾದ ವರಾಸನಂ=ಉತ್ತಮಾಸನವನ್ನು ಅದಾತ್=ಕೊಟ್ಟು ಕಳುಹಿಸಿದನು. ನಭಸ್ತಲಾವತಾರಿತೇ=ಆಕಾಶ ಪ್ರದೇಶದಿಂದ ಬಂದಿರುವ ತತ್ರ=ಆ ಉತ್ತಮಾಸನದಲ್ಲಿ ಕೇಶವಃ=ಶ್ರೀಕೃಷ್ಣನು ವಿವೇಶ=ಕುಳಿತನು. ॥ ೪೭ ॥

ಕರೇ ಪ್ರಗೃಹ್ಯ ಕೇಶವೋ ನ್ಯವೇಶಯತ್ಸಹಾಸನೇ ।
ಪತತ್ರಿಪುಂಗವಂಚತೌ ಸ ಭೀಷ್ಮಕಾನುಜೌ ಪ್ರಭುಃ ॥ ೪೮ ॥

ಪ್ರಭುಃ=ಸಮರ್ಥನಾದ ಕೇಶವಃ=ಆ ಕೃಷ್ಣನು ಪತತ್ರಿಪುಂಗವಂ=ಪಕ್ಷಿಶ್ರೇಷ್ಠನಾದ ಗರುಡನನ್ನು ಭೀಷ್ಮಕಾನುಜೌಚ=ಭೀಷ್ಮಕರಾಜನ ತಮ್ಮಂದಿರಾದ ಕ್ರಥಕೈಶಿಕರನ್ನೂ ಕೂಡ ಕರೇ=ಕೈಯಲ್ಲಿ ಪ್ರಗೃಹ್ಯ=ಹಿಡಿದುಕೊಂಡು ಆಸನೇ=ಇಂದ್ರನು ಕಳುಹಿಸಿದ ಆಸನದಲ್ಲಿ ಸಹ = ಕೂಡಿಕೊಂಡು ನ್ಯವೇಶಯತ್=ಕುಳ್ಳಿರಿಸಿದನು. ॥ ೪೮ ॥

ಅಥಾಖಿಲಾ ನರೇಶ್ವರಾ ಮುನೀಂದ್ರಸಂಯುತಾಹರಿಂ ।
ಸುಶಾತಕೌಂಭಕುಂಭಕೈಃ ಪ್ರಚಕ್ರುರಾಭಿಷೇಕಿಣಂ ॥ ೪೯ ॥

ಅಥ=ಅನಂತರ ಅಖಿಲಾಃ=ಎಲ್ಲಾ ನರೇಶ್ವರಾಃ=ರಾಜರು ಮುನೀಂದ್ರಸಂಯುತಾ ಸ್ಸಂತಃ=ಮುನಿಶ್ರೇಷ್ಠರಿಂದ ಕೂಡಿದವರಾಗಿ ಸುಶಾತಕೌಂಭಕುಂಭಕೈಃ=ಶೋಭನ ಸುವರ್ಣ ನಿರ್ಮಿತ ಕುಂಭಗಳಲ್ಲಿರತಕ್ಕ ಉದಕಗಳಿಂದ ಹರಿಂ=ಶ್ರೀಕೃಷ್ಣನನ್ನು ಅಭಿಷೇಕಿಣಂ=ಅಭಿಷೇಕವುಳ್ಳವನನ್ನಾಗಿ ಪ್ರಚಕ್ರುಃ = ಮಾಡಿದರು. ॥ ೪೯ ॥

ವಿರಿಂಚಶರ್ವಪೂರ್ವಕೈರಭಿಷ್ಟುತಃ ಸುರಾಧಿಭಿಃ ।
ಸಮಸ್ತದೇವಗಾಯಕೈಃ ಪ್ರಗೀತಆಸ ಕೇಶವಃ ॥ ೫೦ ॥

ಕೇಶವಃ=ಶ್ರೀಕೃಷ್ಣನು ವಿರಿಂಚಶರ್ವಪೂರ್ವಕೈಃ=ಬ್ರಹ್ಮರುದ್ರರೇ ಮೊದಲಾಗಿ ಉಳ್ಳ ಸುರಾದಿಭಿಃ=ದೇವತೆಗಳೇ ಮೊದಲಾಗಿ ಉಳ್ಳವರಿಂದ ಅಭಿಷ್ಟುತಃಸನ್ = ಸ್ತೋತ್ರಮಾಡಿಸಿ ಕೊಳ್ಳಲ್ಪಟ್ಟವನಾಗಿ ಸಮಸ್ತ ದೇವಗಾಯಕೈಃ=ಎಲ್ಲಾ ದೇವ ಗಂಧರ್ವರಿಂದ ಪ್ರಗೀತಃ=ಗಾನಮಾಡಿಸಿ ಕೊಳ್ಳಲ್ಪಟ್ಟವನು. ಆಸ=ಆದನು. ॥ ೫೦ ॥

ಅಥಾಹ ಭೀಷ್ಮಕಂಪ್ರಭುಃ ಸ್ವಯಂವರಃ ಕಿಲತ್ವಯಾ ।
ಅಭೀಪ್ಸಿತಃ ಸುತಾಕೃತೇ ಶುಭಾಯತೇ ಭವೇನ್ನಸಃ ॥ ೫೧ ॥

ಅಥ=ಅನಂತರ ಪ್ರಭುಃ ಸಮರ್ಥನಾದ ಶ್ರೀ ಕೃಷ್ಣನು ಭೀಷ್ಮಕಂ=ಭೀಷ್ಮಕ ರಾಜನನ್ನು ಕುರಿತು ತ್ವಯಾ=ನಿನ್ನಿಂದ ಸುತಾಕೃತೇ=ಮಗಳಾದ ರುಕ್ಮಿಣಿಗಾಗಿ ಸ್ವಯಂವರಃ=ವರನ ಪ್ರತಾಪಾತಿಶಯವನ್ನು ನೋಡಿ ಕನ್ಯೆಯು ತಾನೇವರನ ಸ್ವೀಕಾರ ರೂಪವಾದ ಸ್ವಯಂವರವು ಅಭೀಪ್ಸಿತಃಕಿಲ=ಇಷ್ಟವಾಗಿದೆಯಷ್ಟೇ ಸಃ=ಆ ಸ್ವಯಂವರವು ತೇ = ನಿನಗೆ ಶುಭಾಯ=ಪುಣ್ಯಕ್ಕೋಸ್ಕರ ನಭವೇತ್=ಆಗಲಾರದು ಎಂದು ಅಹ=ಹೇಳಿದನು. ॥ ೫೧ ॥

ಇಯಂ ರಮಾ ತವಾತ್ಮಜಾ ಬಭೂವ ತಾಂ ಹರೇರ್ನಚೇತ್ ।
ದದಾತಿ ಚೇತ್ತದಾ ಪಿತಾ ನಿರಿಂದಿರೋ ವ್ರಜೇದಧಃ ॥ ೫೨ ॥

ರಮಾ=ಲಕ್ಷ್ಮೀದೇವಿಯು ಇಯಂ=ಈ ರುಕ್ಮಿಣೀ ನಾಮಕಳಾಗಿ ತವಾತ್ಮಜಾಸತೀ=ನಿನ್ನ ಮಗಳಾಗಿ ಬಭೂವ = ಹುಟ್ಟಿದಳು. ಪಿತಾ=ತಂದೆಯು (ನೀನು) ತಾಂ=ಆ ರುಕ್ಮಿಣಿಯನ್ನು ಹರೇಃ=ಶ್ರೀಕೃಷ್ಣನಿಗೆ ನದದಾತಿ ಚೇತ್=ಕೊಡುವುದಿಲ್ಲವಾದರೆ ತದಾ=ಆಗ ನಿರಿಂದಿರಃ=ಸಂಪದ್ರಹಿತನು ಆಗಿ ಅಧಃ=ತಮಸ್ಸನ್ನು ವ್ರಜೇತ್ = ಹೊಂದುವನು ॥ ೫೨ ॥

ಹಿತಾಯ ಚೈತದೀರಿತಂ ತವಾನ್ಯಥಾ ನ ಚಿಂತಯ ।
ನಯೋಷಿದಿಚ್ಛಯಾ ತ್ವಹಂ ಬ್ರವೀಮಿ ಪಶ್ಯಯಾದೃಶಃ ॥ ೫೩ ॥

ಏತತ್=ಈ ನನ್ನಿಂದ ಹೇಳಲ್ಪಟ್ಟ ವಾಕ್ಯವು ತವ=ನಿನ್ನ ಹಿತಾಯ=ಹಿತಕ್ಕೋಸ್ಕರ ಈರಿತಂ=ಹೇಳಲ್ಪಟ್ಟಿತು. ಅನ್ಯಥಾ=ನನ್ನ ಪ್ರಯೋಜನಕ್ಕೋಸ್ಕರ ಹೇಳಲ್ಪಟ್ಟಿತೆಂದು ನ ಚಿಂತಯ=ಆಲೋಚಿಸಬೇಡ. ಅಹಂ=ನಾನು ಯೋಷಿದಿ ಚ್ಛಯಾ=ಸ್ತ್ರೀಯ ಅಪೇಕ್ಷೆಯಿಂದ ನಬ್ರುವೀಮಿ=ಹೇಳುವುದಿಲ್ಲ ಅಹಂ=ನಾನು ಯಾದೃಶಃ=ಎಂತಹ ಸಂಪತ್ಪೂರ್ಣನೋ ತಾದೃಶಂ ಮಾಂ=ಅಂತಹನನ್ನು ಪಶ್ಯ=ನೋಡು. ॥ ೫೩ ॥

ಉದೀರ್ಯ ಚೈವಮೀಶ್ವರಶ್ಚಕಾರ ಹಾವಿರಾತ್ಮನಃ ।
ಸ ವಿಶ್ವರೂಪಮುತ್ತಮಂ ವಿಸಂಖ್ಯಶೀರ್ಷಬಾಹುಕಂ ॥ ೫೪ ॥

ಈಶ್ವರಃ=ಸ್ವಾಮಿಯಾದ ಸಃ=ಆ ಕೃಷ್ಣನು ಏವಂ=ಈ ರೀತಿಯಾಗಿ ಉದೀರ್ಯ=ಹೇಳಿ ಆತ್ಮನಃ=ತನ್ನ ಉತ್ತಮಂ=ಶ್ರೇಷ್ಠವಾದ ವಿಶ್ವರೂಪಂ=ವಿಶ್ವರೂಪವನ್ನು ಆವಿಶ್ಚಕಾರ=ಪ್ರಕಟೀಕರಿಸಿದನು. ವಿಶ್ವರೂಪವು ಎಂತಹದು ಎಂಬುದನ್ನು ವಿವರಿಸುತ್ತಾರೆ. ವಿಸಂಖ್ಯಶೀರ್ಷಬಾಹುಕಂ=ಸಂಖ್ಯಾರಹಿತಗಳಾದ ಅಂದರೆ ಅನಂತಗಳಾದ ಶಿರಸ್ಸುಗಳೂ ಬಾಹುಗಳೂ ಇವುಗಳುಳ್ಳದು. ॥ ೫೪ ॥

ಅನಂತತೇಜ ಆತಕಂ ವಿಸಂಖ್ಯರೂಪಸಂಯುತಂ ।
ವಿಚಿತ್ರಮೌಲಕುಂಡಲಾಗದೋರುಹಾರನೂಪುರಂ ॥ ೫೫ ॥

ಜ್ವಲತ್ಸುಕೌಸ್ತುಭಪ್ರಭಾಪ್ರಭಾಸಕಂ ಶುಭಾಂಬರಂ ॥
ಪ್ರಪಶ್ಯಯಾದೃಶಾಃಸ್ತ್ರಿಯೋ ಮಮೇತ್ಯದರ್ಶಯತ್ಶ್ರಿಯಂ ॥ ೫೬ ॥

ಅನಂತರೂಪಿಣೀಂ ಪರಾಂ ಮನುಷ್ಯದೃಷ್ಟಿತೋಽಧಿಕಾಂ ।
ಸರುಗ್ಮಿಣೀತನೋರಪಿ ವ್ಯದರ್ಶಯಚ್ಚ ದೇವತಾಃ ॥ ೫೭ ॥

ಅನಂತತೇಜಃ=ಅಪರಿಮಿತ ತೇಜಸ್ಸುಳ್ಳದ್ದು ಆತತಂ=ಬ್ರಹ್ಮಾಂಡದ ಒಳಗೂ ಹೊರಗೂ ವ್ಯಾಪ್ತವಾದದ್ದು ವಿಸಂಖ್ಯರೂಪ ಸಂಯುತಂ=ಮತ್ಸ್ಯಕೂರ್ಮಾದ್ಯನಂತ ರೂಪಗಳಿಂದ ಕೂಡಿದ್ದು ವಿಚಿತ್ರಮೌಲಿ ಕುಂಡಲಾಂಗದೋರುಹಾರ ನೂಪುರಂ=ವಿಚಿತ್ರಗಳಾದ ಕಿರೀಟಗಳು ಕಿವಿಯ ಆಭರಣಗಳು ಬಾಹುಭೂಷಣಗಳು ಉತ್ಕೃಷ್ಟಗಳಾದ ಮುಕ್ತಾಹಾರಗಳು ಪಾದ ಭೂಷಣಗಳೂ ಇವುಗಳುಳ್ಳದ್ದು ॥ ೫೫ ॥ ಜ್ವಲತ್ಸುಕೌಸ್ತುಭಪ್ರಭಾಪ್ರಭಾಸಕಂ=ಪ್ರಕಾಶಿಸುವ ಶೋಭನವಾದ ಕೌಸ್ತುಭ ಮಣಿಯ ಕಾಂತಿಗಳನ್ನು ಚೆನ್ನಾಗಿ ಪ್ರಕಾಶಿಸತಕ್ಕದ್ದು ಶುಭಾಂಬರಂ=ಶೋಭನವಾದ ಪೀತಾಂಬರ ಉಳ್ಳದ್ದು ಇಂತಹ ವಿಶ್ವ ರೂಪವನ್ನು ತೋರಿಸಿದನು ಮಮ=ನನಗೆ ಯಾದೃಶಾಃ=ಎಂತಹ ಸ್ತ್ರಿಯಃ=ಸ್ತ್ರೀಯರು ಸಂತಿ=ಇರುತ್ತಾರೋ ತಾದೃಶಾಃ=ಅಂತಹ ಸ್ತ್ರಿಯಃ=ಸ್ತ್ರೀಯರನ್ನೂ ಕೂಡ ಪಶ್ಯ=ನೋಡು ಇತಿ=ಎಂದು ಹೇಳಿ ಮನುಷ್ಯದೃಷ್ಟಿತಃ=ಮನುಷ್ಯರ ಜ್ಞಾನಾ ಪೇಕ್ಷೆಯಿಂದ ರುಗ್ಮಿಣೀತನೋರಪಿ=ರುಗ್ಮಿಣೀದೇವಿಯ ಶರೀರಕ್ಕಿಂತಲೂ ಅಧಿಕಾಂ=ರೂಪದಿಂದ ಅಧಿಕಳಾದ ವಸ್ತುತಃ ರುಗ್ಮಿಣಿಯಿಂದ ಲಕ್ಷ್ಮಿಗೆ ಅಧಿಕ್ಯವಿಲ್ಲ ಐಕ್ಯವೇ ಇದೆ ಪರಾಂ=ಸರ್ವೋತ್ತಮಳಾದ ಅನಂತರೂಪಿಣೀಂ=ಅಪರಿಮಿತ ಸೌಂದರ್ಯವುಳ್ಳ ಶ್ರಿಯಂ=ಲಕ್ಷ್ಮೀದೇವಿಯನ್ನು ವ್ಯದರ್ಶಯತ್=ತೋರಿಸಿದನು. ದೇವತಾಃ=ವಿಶ್ವರೂಪದಲ್ಲಿ ಆಶ್ರಯಿಸಿಕೊಂಡಿರುವ ಬ್ರಹ್ಮಾದಿದೇವತೆಗಳನ್ನೂ ಕೂಡ ವ್ಯದರ್ಶಯತ್=ತೋರಿಸಿದನು. ॥ ೫೭ ॥

ತದದ್ಭುತಂ ಸವಿಸ್ಮಿತು ಪ್ರಭೀತ ಆಸ ಭೀಷ್ಮಕಃ ॥
ಪಪಾತ ಪಾದಯೋರ್ವಿಭೋಃಕರೋಮಿ ತತ್ತಥೇತಿ ಚ ॥ ೫೮ ॥

ಪುನಶ್ಚ ವಿಶ್ವರೂಪತಾಂ ವಿಧಾಯಪದ್ಮಲೋಚನಃ ।
ಜಗಾಮ ಪಕ್ಷಿವಾಹನಃ ಪುರೀಂ ಸ್ವಜಾಹು ಪಾಲಿತಾಂ ॥ ೫೯ ॥

ಭೀಷ್ಮಕಃ=ಭೀಷ್ಮಕ ರಾಜನು ಅದ್ಭುತಂ=ಆಶ್ಚರ್ಯಕರವಾದ ತತ್=ಆ ವಿಶ್ವರೂಪವನ್ನು ಸವಿಸ್ಮಿತಃ=ನೋಡಿ ಪ್ರಭೀತಃ=ಚೆನ್ನಾಗಿ ಭಯಗ್ರಸ್ತನು ಆಸ=ಆದನು ಯಥಾ=ಹೇಗೆ ನೀನು ಹೇಳುತ್ತೀಯೋ ತಥಾ=ಹಾಗೆಯೇ ತತ್=ಆ

ನಿನ್ನ ವಾಕ್ಯವನ್ನು ಕರೋಮಿ=ಮಾಡುತ್ತೇನೇ ಇತಿ=ಎಂಬುದಾಗಿ ಬೃವನ್ಸನ್=ಹೇಳತಕ್ಕವನಾಗಿ ವಿಭೋಃ=ವ್ಯಾಪ್ತನಾದ ಕೃಷ್ಣನ ಪಾದಯೋಃ=ಚರಣಗಳಲ್ಲಿ ಪುನಃ ಪುನಃ=ಮತ್ತೂ ಮತ್ತೂ ಪಪಾತ್=ಬಿದ್ದನು(ನಮಸ್ಕರಿಸಿದನು. ಪದ್ಮಲೋಚನಃ= ಕಮಲದಂತೆ ಕಣ್ಣುಗಳುಳ್ಳ ಪಕ್ಷಿವಾಹನಃ=ಗರುಡನು ವಾಹನವಾಗಿ ಉಳ್ಳ ಶ್ರೀಕೃಷ್ಣನು ವಿಶ್ವರೂಪತಾಂ=ತನ್ನ ವಿಶ್ವರೂಪತ್ವ ವನ್ನು ಪಿಧಾಯ=ಅಚ್ಛಾದಿಸಿ ಸ್ವಬಾಹುಪಾಲಿತಾಂ ತನ್ನ ಭುಜಗಳಿಂದ ರಕ್ಷಿಸಲ್ಪಟ್ಟ ಪುರೀಂ=ದ್ವಾರಾವತೀಪಟ್ಟಣವನ್ನು ಕುರಿತು ಜಗಾವ=ಹೋದನು. ॥ ೫೯ ॥

ಅವಃ— ರುಗ್ಮಿಣಿಯ ಸ್ವಯಂವರವನ್ನು ಮಾಡತಕ್ಕವನಿಗೆ ಪಾಪವು ಬರುವುದಾದರೆ ಲಕ್ಷ್ಮಿ ಮತ್ತು ಸೀತಾದೇವಿಯ ಸ್ವಯಂ ವರವನ್ನು ಮಾಡಿದ ವರುಣ, ಜನಕರಾಯ ಇವರಿಗೆ ಏಕೆ ದೋಷ ಬರಲಿಲ್ಲ ಎಂಬ ಶಂಕೆಗೆ ಸಮಾಧಾನವನ್ನು ಹೇಳುತ್ತಾರೆ.

ಅಪಾಂಪತಿಶ್ಚ ಮೈಥಿಲಃ ಸ್ವಯಂವರ ಕೃತಾವಪಿ ।
ಹರಿಂ ವಿನಿಶ್ಚಯಾದಿಯಂ ವ್ರಜೇದಿತಿಸ್ಮ ಚಕ್ರತುಃ ॥ ೬೦ ॥

ಅಪಾಂಪತಿಃ=ಜಲಕ್ಕೆ ಅಧಿಪತಿಯಾದ ವರುಣನಂ ಮೈಥಿಲಃ=ಮಿಥಿಲಾ ದೇಶದ ರಾಜನಾದ ಜನಕನೂ ಕೂಡ ಸ್ವಯಂವರಂ=ಸ್ವಯಂವರವನ್ನು ಕೃತಾವಪಿ=ಮಾಡಿದವರಾದರೂ ಕೂಡ ಇಯಂ=ಈ ನನ್ನ ಮಗಳು ಲಕ್ಷ್ಮೀದೇವಿಯೆಂದು ವರುಣನೂ ಇಯಂ = ನನ್ನ ಮಗಳಾದ ಸೀತೆಯು ಲಕ್ಷ್ಮೀದೇವಿಯೆಂದು ಜನಕನೂ ಹರಿಂ = ನಾರಾಯಣನನ್ನು ಹಾಗೆ ರಾವಣನನ್ನು ವಿನಿಶ್ಚಯಾತ್=ನಿಶ್ಚಯವಾಗಿಯೂ ವ್ರಜೇತ್=ಹೊಂದುವಳು. ಇತಿ=ಈ ಅಭಿಪ್ರಾಯದಿಂದ ಚಕ್ರತುಃ= ಸ್ವಯಂವರವನ್ನು ಮಾಡಿದರು. ॥ ೬೦ ॥

ಸ್ವಯಂವರಃ ಕ್ಷಿತೇರ್ಭುಜಾಂ ಸ್ವಧರ್ಮ ಇತ್ಯತೋದ್ವಯೋಃ ।
ನದೋಷ ಆಸ ಭೀಷ್ಮಕೋ ನ ಕೇಶವಾರ್ಥಮೈಚ್ಛತ ॥ ೬೧ ॥

ಕ್ಷಿತೇರ್ಭುಜಾಂ=ರಾಜರಿಗೆ ಸ್ವಯಂವರಃ=ಸ್ವಯಂವರವು ಸ್ವಧರ್ಮಃ = ತಮಗೆ ಎಹಿತವಾದ ಧರ್ಮವು ಇತ್ಯತಃ= ಈ ಕಾರಣದಿಂದ ದ್ವಯೋಃ = ವರುಣಜನಕರಿಗೆ ದೋಷಃ = ಪಾಪವು ನ ಆಸ = ಉಂಟಾಗಲಿಲ್ಲ.= ಭೀಷ್ಮಕಃ = ಭೀಷ್ಮಕ ರಾಜನಂ ಕೇಶವಾರ್ಥಂ = ಕೃಷ್ಣನಿಗೋಸ್ಕರ ಸಐಚ್ಛತ=ಇಚ್ಛಿಸಲಿಲ್ಲ. ॥ ೬೧ ॥

ಅತೋಹರೌಪ್ರಬೋಧ್ಯ ತಂ ಗತೇಕೃಪಾಲು ಸತ್ತಮೇ ।
ವಶೀಕೃತೇಚ ಭೀಷ್ಮಕೇ ನೃಪಾಸ್ತ್ವಮಂತ್ರಯನ್ಪುನಃ ॥ ೬೨ ॥

ಅತಃ=ದೋಷವು ಬರುವ ಕಾರಣದಿಂದ ಕೃಪಾಲುಃಸತ್ತಮೇ=ದಯಾಳುಗಳಲ್ಲಿ ಶ್ರೇಷ್ಠನಾದ ಹರೌ=ಶ್ರೀಕೃಷ್ಣನಂ ತಂ = ಆ ಭೀಷ್ಮಕ ರಾಜನನ್ನು ಪ್ರಬೋಧ್ಯ = ಚೆನ್ನಾಗಿ ಬೋಧಿಸಿ ಗತೇಸತಿ=ಹೋಗುತ್ತಿರಲು ಭೀಷ್ಮಕೇಚ=ಭೀಷ್ಮಕರಾಜನೂ ಕೂಡ ವಶೀಕೃತೇಸತಿ=ಕೃಷ್ಣನಿಂದ ವಶೀಕರಿಸಲ್ಪಟ್ಟವನಾಗುತ್ತಿರಲು ನೃಪಾಸ್ತು=ರಾಜರಾದರೂ ಪುನಃ=ಮತ್ತು ಅಮಂತ್ರ ಯನ್=ಆಲೋಚಿಸಿದರು. ॥ ೬೨ ॥

ಅವಃ— ಅನೇಕ ಸಲ ಕೃಷ್ಣನಿಂದ ಪರಾಜಿತನಾದ ಜರಾಸಂಧನು ಏತಕ್ಕಾಗಿ ಯಾದ್ದಕ್ಕೆ ಉದ್ಯೋಗ ಮಾಡುತ್ತಾನೆ ಎಂಬುದರ ಅಭಿಪ್ರಾಯವನ್ನು ಹೇಳುತ್ತಾರೆ.

ಯಶಶ್ಚ ಧರ್ಮಮುತ್ತಮಂ ವಿಧಿತ್ಸತಾ ವೃಕೋದರೇ ।
ನಕೇಶವೇನ ಸೂದಿತೋ ಜರಾಸುತೋಹಿ ಮನ್ಯತೇ ॥ ೬೩ ॥

ವೃಕೋದರೇ=ವೃಕ ಎಂಬ ಅಗ್ನಿಯು ಉದರದಲ್ಲಿರುವ ಭೀಮಸೇನನಲ್ಲಿ ಯಶಃ=ಕೀರ್ತಿಯನ್ನು ಧರ್ಮಂಚ= ಧರ್ಮವನ್ನೂ ಕೂಡ ವಿಧಿತ್ಸತಾ=ಉಂಟುಮಾಡಲು ಇಚ್ಛಿಸುವ ಕೇಶವೇನ=ಶ್ರೀಕೃಷ್ಣನಿಂದ ನಸೂದಿತಃ=ಕೊಲ್ಲಲ್ಪಡದಿರುವ ಜರಾಸುತಃ=ಜರಾಸಂಧನು ಇತಿ=ಈ ರೀತಿಯಾಗಿ ಮನ್ಯತೇ=ತಿಳಿಯುತ್ತಾನೆ. ॥ ೬೩ ॥

ವರಾಚ್ಛಿವಸ್ಯಮಾಮಯಂ ನಹಂತುಮಿಷ್ಟ ಉತ್ತಮಾತ್ ।
ಅತಃ ಶಿವಪ್ರಸಾದತೋಜತೋಽಪಿ ಜೇಷ್ಯಉತ್ತರಮ್ ॥ ೬೪ ॥

ಆಯಂ = ಈ ಶ್ರೀಕೃಷ್ಣನು ಉತ್ತಮಾತ್=ಶ್ರೇಷ್ಠವಾದ ಶಿವಸ್ಯ=ರುದ್ರನ ವರಾತ್=ವರದಿಂದ ಮಾಂ=ನನ್ನನ್ನು ಹಂತುಂ=ಕೊಲ್ಲಲು ನ ಈಷ್ಟೇ=ಸಮರ್ಥನಾಗುವದಿಲ್ಲ. ಅತಃ=ಆದ್ದರಿಂದ ಜಿತೋಽಪಿ=ಈ ಹಿಂದೆ ಪರಾಜಿತನಾದರೂ ಕೂಡ ಶಿವಪ್ರಸಾದತಃ=ರುದ್ರಾನುಗ್ರಹದಿಂದ ಉತ್ತರಂ=ಮುಂದೆ ಜೇಷ್ಯೇ = ಗೆಲ್ಲುವನು ಇತಿ ಮನ್ಯತೇ = ಎಂದು ತಿಳಿಯುತ್ತಾನೆ. ॥ ೬೪ ॥

ಮೃಧೇಮೃಧೇ ಜತೋಽಪಿಸನ್ ದೃಢಾಶಯಾಪುನಃಪುನಃ ।
ಸಮೀಹತೇಯುಧೇ ಶಿವಂ ನಚಾವಮನ್ಯತೇಕ್ವಚಿತ್ ॥ ೬೫ ॥

ಜರಾಸಂಧನು ಮೃಧೇಮೃಧೇ = ಪ್ರತಿಯುದ್ಧದಲ್ಲಿಯೂ ಜತೋಽಪಿಸನ್ = ಪರಾಜಿತನಾದರೂ ಕೂಡ ದೃಢಾಶಯಾ = ಮುಂದೆ ಗೆಲ್ಲುವೆನು ಎಂಬ ನಿಶ್ಚಿತವಾದ ಇಚ್ಛೆಯಿಂದ ಪುನಃ ಪುನಃ = ಮತ್ತೂ ಮತ್ತೂ ಯುಧೇ = ಯುದ್ಧಕ್ಕೆಸ್ಕರ ಸಮೀಹತೇ = ಪ್ರಯತ್ನಿಸುತ್ತಾನೆ ಶಿವಂ = ರುದ್ರನನ್ನು ಕ್ವಚಿತ್ = ಎಲ್ಲಿಯೂ ಕೂಡ ನಚಾವಮನ್ಯತೇ = ಅವಮಾನಿಸುವುದಿಲ್ಲ. ॥ ೬೫ ॥

ಅತಃ ಪುನಶ್ಚ ಭೂಮಿಪಾನುವಾಚ ಬಾರುಹದ್ರಥಃ ।
ಧಿಗೇವ ಪೌರುಷಂ ಹಿ ನೋ ಯದೇಷನೋಽಜಯುತ್ಸದಾ ॥ ೬೬ ॥

ಯತ್ = ಯಾವ ಕಾರಣದಿಂದ ಏಷಃ = ಈ ಶ್ರೀಕೃಷ್ಣನು ನಃ = ನಮ್ಮನ್ನು ಸದಾ = ಪ್ರತಿಯುದ್ಧದಲ್ಲಿಯೂ ಅಜಯತ್ = ಜಯಿಸಿದನೋ ಅತಃ = ಆದ್ದರಿಂದ ನಃ = ನಮ್ಮ ಪೌರುಷಂ = ಪರಾಕ್ರಮವನ್ನು ಧಿಕ್ = ಸಂಡಲಿ ಇತಿ= ಎಂದು ಬಾರುಹದ್ರಥಃ=ಆ ಜರಾಸಂಧನು ಪುನಃ=ಮತ್ತು ಭೂಮಿಪಾನ್ = ರಾಜರನ್ನು ಉವಾಚ = ಹೇಳಿದನು. ॥ ೬೬ ॥

ಅಭೂಪತೇರ್ನಚಾಸನಂ ಪ್ರದೇಯಮಿತ್ಯುದಾಹೃತಂ ।
ಅಮುಷ್ಯನಸ್ತದನ್ಯಥಾ ಬಭೂವಚಿಂತಿತಂ ನೃಪಾಃ ॥ ೬೭ ॥

ಅಭೂಪತೇಃ = ರಾಜನಲ್ಲದ ಅಮುಷ್ಯ = ಈ ಕೃಷ್ಣನಿಗೆ ಆಸನಂ =ಆಸನವು ನಪ್ರದೇಯಂ = ಕೊಡಲು ಯೋಗ್ಯವಲ್ಲ ಇತಿ = ಎಂದು ಉದಾಹೃತಂ = ನಮ್ಮಿಂದ ಹೇಳಲ್ಪಟ್ಟಿತು. ಹೇನೃಪಾಃ = ಎಲೋ ರಾಜರೇ ನಃ = ನಮ್ಮ ತತ್ = ಆಸನಾದಿಗಳನ್ನು ಕೊಡಬಾರದೆಂಬ ಚಿಂತಿತಂ = ಆಲೋಚನೆಯು ಅನ್ಯಥಾ ಬಭೂವ= ವಿಪರೀತವಾಯಿತು. ॥ ೬೭ ॥

ಅವ:- ವಿಪರೀತವಾಯಿತಂ ಎಂಬುದನ್ನು ವಿವರಿಸಿ ಹೇಳುತ್ತಾನೆ.

ಅಯಂ ನೃಪೋತ್ತಮಾಂಗಣೇಮಹೇಂದ್ರಪೀಠಮಾರುಹತ್ ।
ಸಮಸ್ತರಾಜರಾಜತಾಮುವಾಪ ನೋಽಸ್ಯನಿಚ್ಛತಾಂ ॥ ೬೮ ॥

ಅಯಂ = ಈ ಶ್ರೀಕೃಷ್ಣನು ನೃಪೋತ್ತಮಾಂಗಣೇ = ರಾಜ ಶ್ರೇಷ್ಠನಾದ ಭೀಷ್ಮಕರಾಜನ ಅಂಗಳದಲ್ಲಿ ಮಹೇಂದ್ರ ಪೀಠಂ = ಇಂದ್ರನ ಸಿಂಹಾಸನವನ್ನು ಆರುಹತ್ = ಏರಿದನು. ಅನಿಚ್ಛತಾಂ = ಕೃಷ್ಣನ ಅಭಿವೃದ್ಧಿಯನ್ನು ಇಚ್ಛಿಸದಿರುವ ನಃ = ನಮ್ಮ ಸಕಾಶದಿಂದ ಸಮಸ್ತರಾಜರಾಜತಾಂ = ಎಲ್ಲಾ ರಾಜರ ಚಕ್ರವರ್ತಿತ್ವವನ್ನು ಅವಾಪ = ಹೊಂದಿದನು. ॥ ೬೮ ॥

ಅತಃ ಪುನಃ ಕಥಂ ಹರಿಂ ವಯಂ ಜಯೇಮ ಚಿಂತ್ಯತಾಂ ।
ಯುಧಾಚ ಭೀಷ್ಮಕಾತ್ಮಜಾಮುವಾಪ್ತಯಾಚ್ಚ ಚೇದಿರಾಟ್ ॥ ೬೯ ॥

ಪುನಃ = ಇನ್ನು ಮೇಲೆ ವಯಂ = ನಾವು ಹರಿಂ = ಶ್ರೀಕೃಷ್ಣನನ್ನು ಕಥಂ = ಹೇಗೆ ಜಯೇಮ = ಗೆಲ್ಲುವೆವು ಎಂಬುದು ಚಿಂತ್ಯತಾಂ ಆಲೋಚಿಸಲ್ಪಟಲಿ ಚೇದಿರಾಟ್ = ಶಿಶುಪಾಲನು ಯಂಥಾ = ಹೇಗೆ ಭೀಷ್ಮಕಾತ್ಮಜಾಂ = ಭೀಷ್ಮಕ ರಾಜನ ಮಗಳಾದ ರುಗ್ಮಿಣಿಯನ್ನು ಅವಾಪ್ನುಯಾತ್ = ಹೊಂದಿಯಾನು ಎಂಬುದು ವಿಚಾರಮಾಡಲ್ಪಡಲಿ ॥ ೧೯ ॥

ಅಯಂ ಹಿ ದತ್ತಪುತ್ರಕೋ ಮಮೌರಸಾದ್ವಿ ಶಿಷ್ಯತೇ ।
ಅತೋನಿವೇಶ್ಯ ಏಷಮೇ ಸುರೂಪಿಣೀಚ ರುಗ್ಮಿಣೀ ॥ ೨೦ ॥

ಅಯಂ=ಈ ಶಿಶುಪಾಲನಂ ದತ್ತಪುತ್ರಕಃ=ಶಿಶುಪಾಲನ ತಂದೆಯಾದ ದಮಂಘೋಷನಿಂದ ಮಗನಂತೆ ಇವನನ್ನು ರಕ್ಷಿಸಂ ಮಂದಂಬೆಯಂನ್ನೂ ಮಾಡಿಸಂ ಎಂತ ನನ್ನ ಹತ್ತಿರ ಕೊಟ್ಟಿದ್ದರಿಂದ ದತ್ತದಮಗನು ಮಮಂ=ನನ್ನ ಔರಸಾತ್=ವೀರ್ಯದಿಂದ ಹುಟ್ಟಿದ ಸಹದೇವನಿಂದಲೂ ವಿಶಿಷ್ಯತೇ=ವಿಶಿಷ್ಟನಾಗಿರುತ್ತಾನೆ. ಅತಃ=ಆದ್ದರಿಂದ ಏಷಃ=ಈ ಶಿಶುಪಾಲನಂ ಮೇ=ನನ್ನಿಂದ ನಿವೇಶ್ಯಃ=ಮದುವೆ ಮಾಡಿಸಲಿಕ್ಕೆ ಯೋಗ್ಯನು. ರುಗ್ಮಿಣೀಚ = ರುಗ್ಮಿಣಿಯೂ ಕೂಡ ಸುರೂಪಿಣೀ=ಒಳ್ಳೇ ರೂಪವುಳ್ಳವಳು ಅವನಿಗೆ ಯೋಗ್ಯಳು. ॥ ೨೦ ॥

ಶಿವಾಗಮೇಷು ಶಿಷ್ಯಕಾಃ ಸರುಗ್ಮಿಸಾಲ್ವಪೌಂಡ್ರಕಾಃ ।
ಸ್ವಯಂವರೋನಿವರ್ತಿತಃ ಸ್ವಸಾರ ಮೇಷ ದಾಸ್ಯತಿ ॥ ೨೧ ॥

ಯತಃ=ಯಾವ ಕಾರಣದಿಂದ ಸರುಗ್ಮಿಸಾಲ್ವಪೌಂಡ್ರಕಾಃ=ರುಗ್ಮಿ, ಸಾಲ್ವ ಪೌಂಡ್ರಕ ವಾಸುದೇವನೂ ಇವರಿಂದ ಕೂಡಿದ ಅಖಿಲಾಃ=ಎಲ್ಲಾ ನೃಪಾಃ=ರಾಜರು ಶಿವಾಗಮೇಷು=ಶೈವಶಾಸ್ತ್ರದಲ್ಲಿ ಶಿಷ್ಯಕಾಃ=ಶಿಷ್ಯರೋ ತತಃ = ಆ ಕಾರಣದಿಂದ ಹೇ ನೃಪಾಃ=ಎಲೋ ರಾಜರೇ ಮೇ=ನನಗೆ ಏತದೇವ=ಈ ಅಭೀಷ್ಟವನ್ನೇ ಕುರುದ್ವಂ=ಮಾಡಿರಿ. ಇತಿ=ಎಂದು ಉವಾಚ=ಹೇಳಿದನು. ॥ ೨೧ ॥

~~ಇತೀರಿತೇತು ಸೌಭರಾಟ್ ಜರಾದರುಗ್ಮಿಸಂವಿದಾ ।~~
ಸ್ವಯಂವರೋನಿವರ್ತಿತಃ ಸ್ವಸಾರ ಮೇಷದಾಸ್ಯತಿ ॥ ೨೨ ॥

ಇತಿ=ಈ ರೀತಿಯಾಗಿ ಈರಿತೇಸತಿ=ಜರಾಸಂಧನಿಂದ ಹೇಳಲ್ಪಡುತ್ತಿರಲು ಸೌಭರಾಟ್=ಸಾಲ್ವನು ರುಗ್ಮಿಸಂವಿದಾ=ರುಗ್ಮಿಯ ಅನುಮತಿಯಿಂದ ಸ್ವಯಂವರಃ=ಸ್ವಯಂವರವು ನಿವರ್ತಿತಃ=ಬಿಡಲ್ಪಟ್ಟಿತು. ಏಷಃ=ಈ ರುಗ್ಮಿಣಿಯಂ ಸ್ವಸಾರಂ=ತಂಗಿಯಾದ ರುಗ್ಮಿಣಿಯನ್ನು ದಾಸ್ಯತಿ=ಶಿಶುಪಾಲನಿಗೆ ಕೊಡುವನು. ॥ ೨೨ ॥

ನಚಾತಿವರ್ತಿತುಂ ಕ್ಷಮಃ ಪಿತಾಸ್ಯ ಚೇದಿಪಾಯ ತಾಂ ।
ಪ್ರದಾತು ಕಾಮ ಮಾತ್ಮಜಂ ವಯೋಗತಸ್ತಥಾಬಲಃ ॥ ೨೩ ॥

ಅಸ್ಯ=ಈ ರುಗ್ಮಿಯ ಪಿತಾ=ತಂದೆಯಾದ ಭೀಷ್ಮಕಸಂ ಯತಃ = ಯಾವ ಕಾರಣದಿಂದ ವಯೋಗತಃ=ವೃದ್ಧನೋ ತಥಾ=ಹಾಗೆಯೇ ಅಬಲಃ=ದುರ್ಬಲನೋ ತತಃ=ಆದ್ದರಿಂದ ಚೇದಿಪಾಯ=ಶಿಶುಪಾಲನಿಗೋಸ್ಕರ ತಾಂ=ಆ ರುಗ್ಮಿಣಿಯನ್ನು ಪ್ರದಾತುಕಾಮಂ=ಕೊಡಲು ಇಚ್ಛೆಯುಳ್ಳ ಆತ್ಮಜಂ = ತನ್ನ ಮಗನಾದ ರುಗ್ಮಿಯನ್ನು ಅತಿವರ್ತಿತುಂ=ವಿರೋಧಿಸಲು ನಕ್ಷಮಃ=ಸಮರ್ಥನಲ್ಲ. ॥ ೨೩ ॥

ಸ್ವಯಂತು ಕೃಷ್ಣ ಏತ್ಯನೋ ವಿಜಿತ್ಯ ಕನ್ಯಕಾಂ ಹರೇತ್ ।
ತತೋsಸ್ಯ ಪೂರ್ವಮೇವನೋ ಹ್ಯಭಾವತಾ ಕೃತಾ ಶುಭಾ ॥ ೨೪ ॥

ಉಪಾಯ ಏಷ ಚಿಂತಿತೋ ಮಯಾತ್ರಮಾಗಧೇಶ್ವರ ।
ಮುನಿಂ ಹಿ ಗರ್ಗನಾಮಕಂ ಹ್ಯಮುಷ್ಯ ಶ್ಯಾಲ ಉಕ್ಷಿಪತ್ ॥ ೨೫ ॥

ಕೃಷ್ಣಃ ಸ್ವಯಂ=ಕೃಷ್ಣನು ತಾನೇ ಏತ್ಯ=ಬಂದು ನಃ=ನಮ್ಮನ್ನು ವಿಜಿತ್ಯ=ಗೆದ್ದು ಕನ್ಯಕಾಂ=ಕನ್ಯೆಯನ್ನು ಹರೇದ್ಯದಿ=ಅಪಹರಿಸುವ ಪಕ್ಷದಲ್ಲಿ ತತಃಪೂರ್ವಮೇವ=ಅಪಹರಿಸುವ ಮೊದಲೇ ಅಸ್ಯ = ಈ ಕೃಷ್ಣನ ಅಭಾವತಾ=ಇಲ್ಲದಿರುವಿಕೆಯು ಕೃತಾ=ಗರ್ಗಾಚಾರ್ಯರಿಂದ ಮಾಡಲ್ಪಟ್ಟಿದೆ. ಸಾ=ಆ ಅಭಾವತ್ವವು ನಃ=ನಮಗೆ ಶುಭಾ ಹಿ=ಮಂಗಲವಷ್ಟೆ. ॥ ೭೫ ॥ ಹೇಮಾಗಧೇಶ್ವರ ಅತ್ರ=ಈ ಕೃಷ್ಣಾಭಾವ ವಿಷಯದಲ್ಲಿ ಏಷಃ=ಮುಂದೆ ಹೇಳುವ ಉಪಾಯಃ=ಉಪಾಯವು ಮಯಾ=ನನ್ನಿಂದ ಚಿಂತಿತಃ=ಆಲೋಚಿಸಲ್ಪಟ್ಟಿದೆ. ಅದನ್ನು ಸಾಲ್ವನು ಬಿಡಿಸಿ ಹೇಳುತ್ತಾನೆ. ಗರ್ಗನಾಮಕಂ=ಗರ್ಗನೆಂದು ಹೆಸರುಳ್ಳ ಮುನಿಂ=ಮುನಿಯನ್ನು ಅವಂಶ್ಯ = ಈ ಗರ್ಗಾಚಾರ್ಯರ ಶ್ಯಾಲಃ=ಹೆಂಡತಿಯ ತಮ್ಮನಾದ ಒಬ್ಬಯಾದವನು ಆಕ್ಷಿಪತ್=ನಿಂದಿಸಿದನು. ॥ ೭೫ ॥

ಯದಾಸ್ಯ ಷಂಡತೋದಿತಾ ಮುನೇಃ ಪುರೋಹಿತಸ್ಯ ಚ ।
ಪರೇಣ ವೃಷ್ಣಯೋಽಹಸಂಶ್ಚುಕೋಪ ಗರ್ಗ ಏಷು ಹಿ ॥ ೭೬ ॥

ಯದಾ = ಯಾವಾಗ ತಸ್ಯ=ಆ ಕೃಷ್ಣನ ಪುರಃ=ಮುಂಭಾಗದಲ್ಲಿ ಅಸ್ಯಮುನೇಃ=ಈ ಗರ್ಗಾಚಾರ್ಯರಿಗೆ ಷಂಡತಾ=ನಪುಂಸಕತ್ವವು ಉದಿತಾ=ಹೇಳಲ್ಪಟ್ಟಿತೋ ತದಾ=ಆಗ ಪರೇಣ=ಕೃಷ್ಣನಿಂದ ಸಹ=ಕೂಡಕೊಂಡು ವೃಷ್ಣಯಃ=ಯಾದವರು ಅಪಸನ್=ನೆಗಾಡಿದರು. ಏಷು=ಈ ಯಾದವರಲ್ಲಿ ಗರ್ಗಃ=ಗರ್ಗಾಚಾರ್ಯರು ಚುಕೋಪ=ಕೋಪಗೊಂಡರು. ॥ ೭೬ ॥

ಚಕಾರ ಚ ಪ್ರತಿಶ್ರವಂ ಸಮಾರ್ಜಯೇ ಸುತಂ ದ್ರುತಂ ।
ಅಕೃಷ್ಣತಾಂ ಯ ಆನಯೇದ್ಭುವೋಪಿ ವೃಷ್ಣಿನಾಶಕಃ ॥ ೭೭ ॥

ಯಃ=ಯಾದವನು ವೃಷ್ಣಿನಾಶಕಃಸನ್=ಯಾದವರನ್ನು ಕೊಲ್ಲತಕ್ಕವನಾಗಿ ಭುವಃ=ಭೂಮಿಗೆ ಅಕೃಷ್ಣತಾಂ=ಕೃಷ್ಣನ ರಾಹಿತ್ಯವನ್ನು ಆನಯೇತ್=ಸಂಪಾದಿಸುವನೋ ತಂಸುತಂ=ಅಂತಹ ಮಗನನ್ನು ದ್ರುತಂ=ಬೇಗನೇ ಸಮಾರ್ಜಯೇ=ಸಂಪಾದಿಸುವೆನು. ಇತಿ=ಈ ರೀತಿಯಾಗಿ ಪ್ರತಿಶ್ರವಂ=ಪ್ರತಿಜ್ಞೆಯನ್ನು ಚಕಾರ=ಮಾಡಿದರು. ॥ ೭೭ ॥

ಯತೋ ಹಿ ಕೃಷ್ಣಸಂಶ್ರಯಾದ್ಬತಾಪಹಾಸಿತಾ ವಯಂ ।
ಇತಿ ಬ್ರುವನ್ವನಂ ಯಯೌ ತಪಶ್ಚ ಶೈವ ಮಾಚರತ್ ॥ ೭೮ ॥

ಯತಃ=ಯಾವ ಕಾರಣದಿಂದ ಕೃಷ್ಣಸಂಶ್ರಯಾತ್=ಕೃಷ್ಣನ ಆಶ್ರಯದಿಂದ ವಯಂ=ನಾವು ಅಪಹಾಸಿತಾಃ=ಅಪಹಾಸವನ್ನು ಹೊಂದಿರುವೆವೋ ಬತ = ಕಷ್ಟ (ಆದ್ದರಿಂದ ಕೃಷ್ಣನನ್ನು ನಾಶ ಮಾಡತಕ್ಕ ಮಗನನ್ನು ಸಂಪಾದಿಸುವೆನೆಂದು ಪ್ರತಿಜ್ಞೆ ಮಾಡಿದನು.) ಇತಿ=ಈ ರೀತಿಯಾಗಿ ಬ್ರುವನ್ ಸನ್=ಹೇಳತಕ್ಕವನಾಗಿ ವನಂ=ಕಾಡನ್ನು ಪ್ರತಿ ಯಯೌ=ಹೋದನು. ಶೈವಂ=ಶಿವಸಂಬಂಧಿಯಾದ ತಪಶ್ಚ=ತಪಸ್ಸನ್ನೂ ಕೂಡ ಆಚರತ್=ಮಾಡಿದನು. ॥ ೭೮ ॥

ಸ ಚೂರ್ಣಮಾಯಸಂ ತ್ವದನ್ದದರ್ಶ ಚಾಬ್ದತಃ ಶಿವಂ ।
ವರಂತತೋಽಭಿಪೇದಿವಾನ್ಸುತಂ ಹರೇರಭಾವದಂ ॥ ೭೯ ॥

ಸಃ=ಆ ಗರ್ಗಾಚಾರ್ಯರು ಆಯಸಂ=ಕಬ್ಬಿಣದ ಸಂಬಂಧಿಯಾದ ಚೂರ್ಣಂ=ಚೂರ್ಣವನ್ನು ಅದನ್ಸನ್ = ತಿನ್ನತಕ್ಕವರಾಗಿ ಅಬ್ದತಃ=ಒಂದು ವರ್ಷ ಕಾಲದಿಂದ ಶಿವಂ=ರುದ್ರನನ್ನು ದದರ್ಶ=ಕಂಡರು. ತತಃ=ಆ ರುದ್ರದೇವರಿಂದ ಹರೇಃ =ಶ್ರೀಕೃಷ್ಣನ ಅಭಾವದಂ = ಅಭಾವವನ್ನುಮಾಡತಕ್ಕ ಸುತಂ = ಪುತ್ರರೂಪವಾದ ವರಂ = ವರವನ್ನು ಅಭಿಪೇದಿವಾನ್ = ಹೊಂದಿದರು. ॥ ೭೯ ॥

ಸ ವಿಷ್ಣುದೈವತೋಽಪಿಸನ್ಪ್ರವಿಷ್ಣು ಉಲ್ಬಣಾಸುರೈಃ ।
ವ್ಯಧಾದ್ಧರೇಃ ಪ್ರತೀಪಕಂ ವ್ರತಂತು ನೈಷಿಕಂ ಬಹೌ ॥ ೮೦ ॥

ಸಃ=ಆಗ ಗರ್ಗಾಚಾರ್ಯರು ವಿಷ್ಣುದೈವತೋऽಪಿಸನ್=ವಿಷ್ಣುವೇ ಪರದೇವತೆಯಾಗಿ ಉಳ್ಳವರಾದರೂ ಉಲ್ಬಣಾ ಸುರೈಃ = ಕ್ರೂರ ದೈತ್ಯರಿಂದ ಪ್ರವಿಷ್ಟಸ್ಯನ್ = ಆವಿಷ್ಟರಾದವರಾಗಿ ಹರೇಃ=ಶ್ರೀಕೃಷ್ಣನಿಗೆ ಪ್ರತೀಪಕಂ = ವಿರೋಧವನ್ನು ವ್ಯಧಾತ್=ಮಾಡಿದರು ನೈಷ್ಟಿಕವ್ರತಂತು = ಯಾವಜ್ಜೀವಭಾವಿಯಾದ ಬ್ರಹ್ಮಚರ್ಯವ್ರತವನ್ನಾದರೂ ಜಹೌ = ಬಿಟ್ಟರು. ॥ ೮೦ ॥

ತಮೂರ ಚಾಸುರಾಪ್ಸರಾ ಬಲಿಷ್ಠಪುತ್ರಕಾಮ್ಯಯಾ ।
ಪ್ರವಿಶ್ಯಗೋಪಿಕಾಂಗನಾಸಮೂಹಮಧ್ಯಮುಲ್ಬಣಾ ॥ ೮೧ ॥

ಆಸುರಾ = ಅಸುರ ಸಂಬಂಧಿನಿಯಾದ ಉಲ್ಬಣಾ = ಕ್ರೂರಳಾದ ಅಪ್ಸರಾ = ಆಸ್ಸರ ಸ್ತ್ರೀಯು ಬಲಿಷ್ಠ ಪುತ್ರ ಕಾಮ್ಯಯಾ = ಬಲಿಷ್ಠನಾದ ಪುತ್ರನ ಇಚ್ಛೆಯಿಂದ ಗೋಪಿಕಾಂಗನಾ ಸಮೂಹಮಧ್ಯಂ = ಗೋಪಿಕಾಸ್ತ್ರೀಯರ ಸಮೂಹದ ಮಧ್ಯವನ್ನು ಪ್ರವಿಶ್ಯ = ಹೊಂದಿ ತಂ = ಆ ಗರ್ಗಾಚಾರ್ಯರನ್ನು ಆರ = ಹೊಂದಿದಳು. ॥ ೮೧ ॥

ಅಪ್ಸರ ಸ್ತ್ರೀಯು ಗೋಪಿಕಾಂಗನೆಯ ಮಧ್ಯವನ್ನು ಪ್ರವೇಶಿಸಲಿಕ್ಕೆ ಕಾರಣವನ್ನು ಹೇಳುತ್ತಾರೆ.

ಸಯಾವನೇನ ಭೂಭೃತಾಹಿ ಗೋಪಿಕಾಭಿರರ್ಚಿತಃ ।
ಅಪುತ್ರಕೇಣ ಜಾನತಾ ಮುನೇರ್ಮನೋऽನುಚಿಂತಿತಂ ॥ ೮೨ ॥

ಮುನೇಃ = ಗರ್ಗಾಚಾರ್ಯರ ಮನೋನುಚಿಂತಿತಂ= ಮನಸ್ಸಿನಲ್ಲಿ ಆಲೋಚಿಸಲ್ಪಟ್ಟದ್ದನ್ನು ಜಾನತಾ=ತಿಳಿದಿರತಕ್ಕ ಅಪುತ್ರಕೇಣ = ಮಕ್ಕಳಿಲ್ಲದಿರುವ ಯಾವನೇನ = ಮ್ಲೇಚ್ಛಸಂಬಂಧಿಯಾದ ಭೂಭೃತಾ=ರಾಜನಿಂದ ಗೋಪಿಕಾಭಿಃ= ಗೊಂಪಿಕಾ ಸ್ತ್ರೀಯರ ದ್ವಾರಾ) ಸಃ = ಆ ಗರ್ಗಾಚಾರ್ಯರು ಅರ್ಚಿತಃ=ಪೂಜಿಸಿ ಕೊಳ್ಳಲ್ಪಟ್ಟರಂ ॥ ೮೨ ॥

~~ಗರ್ಗಾಚಾರ್ಯರ ಮನಸ್ಸನ್ನು ವಶೀಕರಿಸುವುದಕ್ಕಾಗಿ ಗೋಪಿಕಾಸ್ತ್ರೀಯರನ್ನು ಯವನನು ಪ್ರಾರ್ಥಿಸಿಕೊಂಡನು.~~
ಗೋಪಿಕಾ ಸ್ತ್ರೀಯರಲ್ಲಿ ಮಕ್ಕಳನ್ನು ಹುಟ್ಟಿಸಿ ನನಗೆ ಕೊಡಿರಿ ಎಂದು ಯವನನು ಗರ್ಗಾಚಾರ್ಯರನ್ನು ಪ್ರಾರ್ಥಿಸಿದನಂ. ಅಪ್ಸರ ಸ್ತ್ರೀಯಂಊ ಕೂಡ ಗರ್ಗಾಚಾರ್ಯರನ್ನು ಪೂಜಿಸಲು ಗೋಪಿಕಾ ಸ್ತ್ರಿಯರಲ್ಲಿ ಮಧ್ಯದಲ್ಲಿ ಪ್ರವೇಶ ಮಾಡಿದಳಂ.

ಸಚಾಪ್ಸರಸ್ತನೌ ಸುತಂ ನಿಷಿಚ್ಯಯಾವನಾಯ ।
ದದೌ ವಿಮೋಹಿತಃ ಕ್ರುಧಾ ಕಿಮೇತದೀಶವೈರಿಣಃ ॥ ೮೩ ॥

ಕ್ರುಧಾ=ಕೋಪಕ್ಕೆ ಅಭಿಮಾನಿಯಾದ ಅಸುರನಿಂದ ವಿಮೋಹಿತಃ = ಮೋಹವನ್ನು ಹೊಂದಿದ ಸಃ=ಆ ಗರ್ಗಾಚಾರ್ಯರು ಅಪ್ಸರಸ್ತನೌ=ಅಪ್ಸರ ಸ್ತ್ರೀಯ ದೇಹದಲ್ಲಿ ಸುತಂ=ಮಗನನ್ನು ನಿಷಿಚ್ಯ=ಹುಟ್ಟಿಸಿ ಯಾವನಾಯಂ=ಮ್ಲೇಂಛ ರಾಜನಿಗೋಸ್ಕರ ದದೌ=ಕೊಟ್ಟರು. ಈಶವೈರಿಣಃ=ರುದ್ರನಲ್ಲಿ ವೈರಿಯೊದ ಶ್ರೀಕೃಷ್ಣನಿಗೆ ಏತತ್=ತನ್ನ ಪುರೋಹಿತನಿಂದಲೇ ತನಗೆ ಮರಣ ಸಂಪಾದನೆಯ ಂ ಕಿಂ=ಏನು ಆಶ್ಚರ್ಯವು ಎಂಬುದಾಗಿ ಸಾಲ್ವನ ಮಾತು ॥ ೮೩ ॥

ಸ ಆಶ್ರಮಾಚ್ಚ ನೈಷ್ಠಿಕಾದ್ವಿದೂಷಿತಃ ಪ್ರತೀಪಕೃತ್ ।
ಹರೇಶ್ಚತಾಪ ಮೇಯಿವಾನ್ಜಗರ್ಹಜಾತ್ಮ ಶೇಮುಷೀಂ ॥ ೮೪ ॥

ನೈಷ್ಠಿಕಾತ್ ಆಶ್ರಮಾತ್=ನೈಷ್ಠಿಕ ಬ್ರಹ್ಮಚರ್ಯಾಶ್ರಮದಿಂದ ವಿದೂಷಿತಃ=ಭ್ರಷ್ಟನಾದ ಹರೇಃ=ಶ್ರೀಕೃಷ್ಣನಿಗೆ ಪ್ರತೀಪಕೃತ್=ವಿರೋಧವನ್ನು ಮಾಡಿದ ಸಃ=ಆ ಗರ್ಗಾಚಾರ್ಯರು ತಾಪಂ=ಪಶ್ಚಾತಾಪವನ್ನು ಏಯಿವಾನ್=ಹೊಂದಿದರು. ಆತ್ಮಕೇಮುಷೀಂ=ತನ್ನ ಬುದ್ಧಿಯನ್ನು ಜಗರ್ಹಚ = ನಿಂದಿಸಿದರು. ॥ ೮೪ ॥

ಜಗಾಮ ಚಾರಣಂ ಹರಿಂ ಪ್ರಪಾಹಿ ಮಾಂ ಸುಪಾಪಿನಂ ।
ಇತಿಸ್ಮ ವಿಷ್ಣ್ವನುಜ್ಞಯಾ ಚಕಾರ ವೈಷ್ಣವಂ ತಪಃ ॥ ೮೫ ॥

ಸುಪಾಪಿನಂ=ಅತಿ ಪಾಪಿಷ್ಠನಾದ ಮಾಂ=ನನ್ನನ್ನು ಪ್ರಪಾಹಿ=ಚೆನ್ನಾಗಿ ರಕ್ಷಿಸು. ಇತಿಸ್ಮ=ಹೀಗೆ ಹೇಳುತ್ತಾ ಹರಿಂ=ಶ್ರೀಕೃಷ್ಣನನ್ನು ಅರಣಂ = ರಕ್ಷಕನನ್ನಾಗಿ ಜಗಾಮ=ಹೊಂದಿದನು. ವಿಷ್ಣ್ವನುಜ್ಞಯಾ=ಶ್ರೀಕೃಷ್ಣನ ಅಪ್ಪಣೆಯಿಂದ ವೈಷ್ಣವಂ=ವಿಷ್ಣು ಸಂಬಂಧಿಯಾದ ತಪಃ=ತಪಸ್ಸನ್ನು ಚಕಾರ=ಮಾಡಿದನು. ॥ ೮೫ ॥

ಅವಃ- ಶಿವಾರ್ಚನೆಯನ್ನು ಮಧ್ಯದಲ್ಲಿ ಬಿಟ್ಟಿದ್ದರಿಂದ ಸಾಲ್ವನು ಗರ್ಗಾಚಾರ್ಯರನ್ನು ನಿಂದಿಸುತ್ತಾ ದಾನವರನ್ನು ಸ್ತೋತ್ರ ಮಾಡಿ ಪುನಃ ಹೇಳುತ್ತಾನೆ.

ಕುತೋಹಿ ಭಾಗ್ಯಮಾಪತೇನ್ಮುನೇಃ ಶಿವಾರ್ಚನೇ ಸದಾ ।
ಭವಾದೃಶಾಹಿ ದಾನವಾಃ ಸ್ಥಿರಾಃ ಶಿವಾರ್ಚನೇ ಸದಾ ॥ ೮೬ ॥

ಮುನೇಃ=ಗರ್ಗಾಚಾರ್ಯರಿಗೆ ಶಿವಾರ್ಚನೇ=ಶಿವ ಪೂಜೆಯಲ್ಲಿ ಸದಾ=ಯಾವಾಗಲೂ ಭಾಗ್ಯಂ=ಸಂಪತ್ತು ಕುತಃ= ಯಾವುದರಿಂದ ಆಪತೇತ್=ಉಂಟಾದೀತು ಶಿವಾರ್ಚನೆಯಲ್ಲಿ ಸ್ಥೈರ್ಯವಿಲ್ಲದಿರುವುದರಿಂದ ಭಾಗ್ಯವು ಉಂಟಾಗಲಾರದು. ಭವಾದೃಶಾಃ=ನಿನ್ನಂತಹ ದಾನವಾಃ = ದಾನವರು ಸದಾ = ಯಾವಾಗಲೂ ಶಿವಾರ್ಚನೇ =ಶಿವ ಪೂಜೆಯಲ್ಲಿ ಸ್ಥಿರಾಃ= ನಿಷ್ಠೆ ಉಳ್ಳವರು ॥ ೮೬ ॥

ಸುತೋಸ್ಯ ಕಾಲನಾಮು ಕೋ ಬಭೂವ ಕೃಷ್ಣಮರ್ದಿತುಂ ।
ಸದೈವ ಕಾಲಕಾಂಕ್ಷಣಾತ್ ಸ ಯಾವನಾಭಿಷೇಚಿತಃ ॥ ೮೭ ॥

ಅಸ್ಯ=ಈಗ ಗರ್ಗಾಚಾರ್ಯರ ಸುತಃ=ಮಗನು ಕೃಷ್ಣಂ=ಶ್ರೀಕೃಷ್ಣನನ್ನು ಅರ್ದಿತುಂ=ಸಂಹರಿಸಲು ಸದೈವ= ಯಾವಾಗಲೂ ಕಾಲಕಾಂಕ್ಷಣಾತ್ = ಕಾಲವನ್ನು ನಿರೀಕ್ಷಿಸುತ್ತಾ ಇರುವುದರಿಂದ ಕಾಲನಾಮಕಃ=ಕಾಲನೆಂದು ಹೆಸರುಳ್ಳವನು ಬಭೂವ = ಆದನು. ಸಃ=ಆ ಕಾಲನು ಯಾವನಾಭಿಷೇಚಿತಃ=ಯೇಂಛ ರಾಜನಿಂದ ಪಟ್ಟಾಭಿಷಿಕ್ತನಾದನು. ॥ ೮೭ ॥

ತವೈವ ಶಿಷ್ಯ ಏಷ ಚಾತಿಭಕ್ತಿಮಾನ್ ಹಿ ಶಂಕರೇ ।
ಪ್ರಭೂತ ಸೇನಯಾ ಯುತೋ ಬಲೋದ್ಧತಶ್ಚ ಸರ್ವದಾ ॥ ೮೮ ॥

ಏಷಃ= ಈ ಕಾಲಯವನನು ತವ = ನಿನ್ನ ಶಿಷ್ಯಏವ= ಶಿಷ್ಯನೇ ಶಂಕರೇ = ಶಿವನಲ್ಲಿ ಅತಿಭಕ್ತಿಮಾನ್ = ಬಹು ಭಕ್ತಿ ಉಳ್ಳವನು ಹಿ = ಪ್ರಸಿದ್ಧ. ಪ್ರಭೂತಸೇನಯಾ = ಬಹು ಸೇನೆಯಿಂದ ಯುತಃ = ಕೂಡಿದವನು. ಸರ್ವದಾ = ಯಾವಾಗಲೂ ಬಲೋದ್ಧತಃ = ಬಲದಿಂದ ವೃಪ್ತನು. ॥ ೮೮ ॥

ತಮೇವ ಯಾಮಿ ಶಾಸನಾತ್ತವೋಪನೀಯ ಸತ್ವರಂ ।
ವಿಕೃಷ್ಣಕಂ ವಿಧಾಯ ಚ ಕ್ಷಿತೇಸ್ತಲಂ ರಮಾಮಹೇ ॥ ೮೯ ॥

ಅಹಂ= ನಾನು ತವ= ನಿನ್ನ ಶಾಸನಾತ್ = ಅಪ್ಪಣೆಯಿಂದ ತಮೇವ = ಆ ಕಾಲಯವನನನ್ನು ಕುರಿತು ಯಾಮಿ = ಹೋಗುತ್ತೇನೆ. ಸತ್ವರಂ= ಕೂಡಲೇ ತಂ= ಆ ಕಾಲಯವನನನ್ನು ಉಪನೀಯ= ನಿನ್ನ ಸವಿಾಪಕ್ಕೆ ಕರೆತಂದು ಕೃಷ್ಣಂಹತ್ವಾ= ಕೃಷ್ಣನನ್ನು ಕೊಂದು ಕ್ಷಿತೇಸ್ತಲಂ = ಭೂತಲವನ್ನು ವಿಕೃಷ್ಣಕಂ=ಕೃಷ್ಣವಾರ್ತಾರಹಿತವಾದದ್ದನ್ನಾಗಿ ವಿಧಾಯಃ=ಮಾಡಿ ರಮಾಮಹೇ = ಕ್ರೀಡಿಸುವೆವು. ॥ ೮೯ ॥

ತತಶ್ಚ ರುಗ್ಮಿಣೀಂ ವಯಂ ಪದಾಪಯಾಮು ಚೇದಿಪೇ ।
ವಿನಾಶ್ಯ ದೇವಪಕ್ಷಿಣೋ ಯಥೇಷ್ಟಮಾಸ್ಮ ಸರ್ವದಾ ॥ ೯೦ ॥

ತತಶ್ಚ = ಆನಂತರ ವಯಂ = ನಾವು ರುಗ್ಮಿಣೀಂ = ರುಗ್ಮಿಣಿಯನ್ನು ಚೇದಿಪೇ = ಶಿಶುಪಾಲನಿಗೆ ಪ್ರದಾಪ ಯಾಮು = ಕೊಡಿಸುವೆವು. ದೇವಪಕ್ಷಿಣಃ = ದೇವತೆಗಳ ಪಕ್ಷದಲ್ಲಿರುವವರನ್ನು ವಿನಾಶ್ಯ = ಕೊಂದು ಸರ್ವದಾ = ಯಾವಾಗಲೂ ಯಥೇಷ್ಟಂ = ಇಚ್ಛಾನುಸಾರವಾಗಿ ಆಸ್ಮ = ಇರುವೆವು. ॥ ೯೦ ॥

ಇತೀರಿತೋ ಜರಾಸುತೋ ಬಭೂವ ದುರ್ಮನಾ ಭೃಶಂ ।
ಕಿರೀಟಮಂಡಿತಂ ಶಿರಶ್ಚಕಾರ ಚಾಶ್ವವಾಗ್ಭೃಶಂ ॥ ೯೦ ॥

ಇತಿ=ಈ ರೀತಿಯಾಗಿ ಈರೀತಃ=ಹೇಳಿಸಿಕೊಳ್ಳಲ್ಪಟ್ಟ ಜರಾಸುತಃ=ಜರಾಸಂಧನು ಭೃಶಂ=ಚೆನ್ನಾಗಿ ದುರ್ಮನಾಃ = ದುಃಖದಿಂದ ಕೂಡಿದ ಮನಸ್ಸುಳ್ಳವನಾ ಬಭೂವ=ಆದನು. ಕಿರೀಟಮಂಡಿತಂ=ಕಿರೀಟದಿಂದ ಅಲಂಕೃತವಾದ ಶಿರಃ=ತಲೆಯನ್ನು ಆಶು=ಕೂಡಲೇ ಭೃಶಂ=ಚೆನ್ನಾಗಿ ಅವಾಕ್=ಕೆಳಗೆ ಚಕಾರ=ಮಾಡಿದನು ॥ ೯೦ ॥

ಕರಂಕರೇಣ ಪೀಡಯನ್ ನಿಶಾಮ್ಯಚಾತ್ಮನೋ ಭುಜೌ ।
ಜಗಾದಕಾರ್ಯಸಿದ್ಧಯೇ ಕಥಂ ಪ್ರಯಾಚಯೇಪರಂ ॥ ೯೧ ॥

ಮಾಗಧಃ=ಜರಾಸಂಧನು ಕರಂ=ಕೈಯನ್ನು ಕರೇಣ=ಕೈಯಿಂದ ಪೀಡಯನ್ಸನ್=ತಿಕ್ಕತಕ್ಕವನಾಗಿ ಆತ್ಮನಃ=ತನ್ನ ಭುಜೌ=ಬಾಹುಗಳನ್ನು ನಿಶಾಮ್ಯ = ನೋಡಿ ಕಾರ್ಯಸಿದ್ಧಯೇ=ತನ್ನ ಕಾರ್ಯ ನಿಷ್ಪತ್ತಿಗಾಗಿ ಪರಂ=ಇತರರನ್ನು ಕಥಂ=ಹೇಗೆ ಪ್ರಯಾಚಯೇ ಬೇಡಿಯೇನು ಎಂದನು. ॥ ೯೧ ॥

ಸುದುರ್ಗಕಾರ್ಯಸತತಿಂ ಹ್ಯಗುಃ ಸ್ಮ ಮದ್ಭುಜಾಶ್ರಯಾಃ ।
ಸಮಸ್ತಭೂತಲೇ ನೃಪಾಃ ಸಚಾಹಮೇಷ ಮಾಗಧಃ ॥ ೯೨ ॥

ಸಮಸ್ತ ಭೂತಲೇ=ಎಲ್ಲಾ ರಾಷ್ಟ್ರಗಳಲ್ಲಿ ಮದ್ಭುಜಾಶ್ರಯಾಃ=ನನ್ನ ಭುಜಬಲವನ್ನು ಆಶ್ರಯಿಸಿರುವ ನೃಪಾಃ=ರಾಜರು ಸುದುರ್ಗಕಾರ್ಯಸಂತತಿಂ=ಚೆನ್ನಾಗಿ ಹೊಂದಲು ಅಶಕ್ಯಗಳಾದ ಕೆಲಸಗಳ ಸಮೂಹವನ್ನು ಅಗುರ್ಹಿ=ಹೊಂದಿರುವರಷ್ಟೇ ಸಚ=ಆತನೇ ಏಷಃ = ಈದಾವ ಅಹಂ=ನಾನು ಮಾಗಧೋಹಿಂ=ಜರಾಸಂಧನಷ್ಟೇ ॥ ೯೨ ॥

ಕದಾಪ್ಯಚೀರ್ಣಮದ್ಯ ತತ್ಕಥಂ ಕರೋಮಿ ಕೇವಲಂ ।
ಗಿರೀಶಪಾದ ಸಂಶ್ರಯಃ ಪ್ರಭುಃ ಸಮಸ್ತ ಭೂಭೃತಾಂ ॥ ೯೩ ॥

ಕೇವಲಂ=ಮುಖ್ಯವಾಗಿ ಗಿರೀಶಪಾದಸಂಶ್ರಯಃ = ರುದ್ರನ ಚರಣವನ್ನೇ ಆಶ್ರಯಿಸಿರುವ ಸಮಸ್ತಭೂಭೃತಾಂ=ಎಲ್ಲಾ ರಾಜರಿಗೂ ಪ್ರಭುಃ=ಒಡೆಯನಾದ ಅಹಂ=ನಾನು ಕದಾಪಿ=ಯಾವಾಗಲೂ ಅಚೀರ್ಣಂ=ಮಾಡಲ್ಪಡದ ತತ್=ಆ ಅನ್ಯರ ಯಾಚನೆಯನ್ನು ಅದ್ಯ=ಈಗ ಕಥಂ=ಹೇಗೆ ಕರೋಮಿ=ಮಾಡುತ್ತೆನೆ. ॥ ೯೩ ॥

ಇತೀರಿತಃ ಸ ಸೌಭರಾಟ್ ಜಗಾದ ವಾಕ್ಯಮುತ್ತರಂ ।
ಭವಾನಪಿಸ್ಮ ಮುಹ್ಯತೇ ಕಿಮುಸ್ಮದಾದಯಃ ಪ್ರಭೋ ॥ ೯೫ ॥

ಇತಿ=ಈ ರೀತಿಯಾಗಿ ಈರಿತಃ=ಜರಾಸಂಧನಿಂದ ಹೇಳಿಸಿಕೊಳ್ಳಲ್ಪಟ್ಟ ಸೌಭರಾಟ್=ಆ ಸಾಲ್ವನು ಉತ್ತರವಾಕ್ಯಂ = ಉತ್ತರ ರೂಪವಾದ ವಾಕ್ಯವನ್ನು ಜಗಾದ = ಹೇಳಿದನು ಹೇ ಪ್ರಭೋ = ಒಡೆಯನಾದ ಜರಾಸಂಧನೇ ಭವಾನಪಿ = ತಾವೂ ಕೂಡ ಮುಹ್ಯತೇ = ಮೋಹವನ್ನು ಹೊಂದುತ್ತೀರಿ ಅಸ್ಮದಾದಯಃ = ನಾವೇ ಮೊದಲಾದವರು ಕಿಂ = ಮೋಹವನ್ನು ಹೊಂದುವುದು ಏನು ಆಶ್ಚರ್ಯವು ॥ ೯೫ ॥

ಸ್ವಶಿಷ್ಯಕೈಃ ಕೃತಂ ತು ಯತ್ಕಿಮನ್ಯ ಸಾಧಿತಂ ಭವೇತ್ ।
ಸ್ವಶಿಷ್ಯದಾಸವರ್ಗಕೈಃ ಸಮರ್ಥಯಂತಿ ಭೂಭುಜಃ ॥ ೯೬ ॥

ಸ್ವಶಿಷ್ಯಕೈಃ = ತನ್ನ ಶಿಷ್ಯರಿಂದ ಯತ್ = ಯಾವುದು ಕೃತಂ = ಮಾಡಲ್ಪಡುತ್ತದೋ ತತ್ = ಅದು ಅನ್ಯಸಾಧಿಕಂ = ಇತರರಿಂದ ಸಂಪಾದಿಸಲ್ಪಟ್ಟದು ಭವೇತ್ಕಿಂ = ಆಗುವುದೋ ನಭವೇತ್ = ಆಗಲಾರದು ಭೂಭುಜಃ = ರಾಜರು

ಸ್ವಶಿಷ್ಯದಾಸವರ್ಗಕೈಃ = ತನ್ನ ಶಿಷ್ಯರೂ ಸೇವಕರೂ ಇವರ ಸಮೂಹಗಳಿಂದ ಸ್ವಕಾರ್ಯಂ = ತಮ್ಮ ಕೆಲಸವನ್ನು ಸಮರ್ಥಯಂತಿ = ಸಂಪಾದಿಸುತ್ತಾರೆ ॥ ೯೬ ॥

ಅಪಿಸ್ಮತೇ ಬಲಾಶ್ರಯ ಪ್ರವೃತ್ತಯೋಸ್ಮದಾದಯಃ ।
ಪುರೂನ್ಕುಠಾರಸಂಗ್ರಹಾದಶಕ್ತ ಈರ್ಯತೇನುಕಿಂ? ॥ ೯೭ ॥

ಅಸ್ಮದಾದಯೋಽಪಿ = ನಾವೇ ಮೊದಲಾದವರೂ ಕೂಡ ತೇ = ನಿನ್ನ ಬಲಾಶ್ರಯಪ್ರವೃತ್ತಯಃ = ಸಾಮರ್ಥ್ಯದ ಆಶ್ರಯದಿಂದ ಪ್ರವೃತ್ತಿ ಉಳ್ಳವರು ಹಿಂದೆ ಹೇಳಿದ ಆರ್ಥವನ್ನು ದೃಷ್ಟಾಂತ ಪೂರ್ವಕವಾಗಿ ಹೇಳುತ್ತಾನೆ ಪುರೂನ್ = ಪುರುಷನು ಕುಠಾರಸಂಗ್ರಹಾತ್ = ಕೊಡಲಿಯನ್ನು ಹಿಡಿಯುವುದರಿಂದ ಅಶಕ್ತ ಇತಿ = ಅಸಮರ್ಥನೆಂದು ಈರ್ಯತೇನುಕಿಂ = ಹೇಳಿಸಿಕೊಳ್ಳಲ್ಪಡುತ್ತಾನೋ ಏನು? ॥ ೯೭ ॥

ಕುಠಾರಸಮ್ಮಿತೋಹ್ಯಸೌ ತವೈವಯಾವನೇಶ್ವರಃ ।
ವಿನಾ ಭವದ್ಬಲಂ ಕ್ವಚಿತ್ ಪ್ರವರ್ತಿತುಂ ನ ಹಿಕ್ಷ್ಮವಃ ॥ ೯೮ ॥

ಅಸೌಯಾವನೇಶ್ವರಃ = ಈ ಮ್ಲೇಂಛರಾಜನಾಥ ಕಾಲಯವನನು ತವ = ನಿನಗೆ ಕುಠಾರಸಮ್ಮಿತ ಏವ = ಪರಶುವಿನಿಂದ ಸಮಾನನೇ ಭವದ್ಬಲಂ = ನಿನ್ನ ಸಾಮರ್ಥ್ಯವನ್ನು ವಿನಾ = ಹೊರತು ಕ್ವಚಿತ್ = ಎಲ್ಲಿಯೂ ಕೂಡ ಪ್ರವರ್ತಿತುಂ = ಕೆಲಸ ಮಾಡಲು ನಹಿಕ್ಷ್ಮವಃ = ಸಮರ್ಥನಲ್ಲ. ॥ ೯೮ ॥

ವರೋಹಿ ಕೃಷ್ಣಮರ್ದನೇ ವೃತೋಸ್ಯ ಕೇವಲಃ ಶಿವಾತ್ ।
ತದನ್ಯಶತ್ರುಪೀಡನೇ ತ್ವಮೇವಚಾಸ್ಯ ರಕ್ಷಕಃ ॥ ೯೯ ॥

ಹಿ = ಯಾವ ಕಾರಣದಿಂದ ಅಸ್ಯ = ಈ ಕಾಲಯವನನಿಗೋಸ್ಕರ ಗರ್ಗೇಣ = ಗರ್ಗಾಚಾರ್ಯರಿಂದ ಶಿವಾತ್ = ರುದ್ರನಿಂದ ಕೇವಲಃ = ಅಸಾಹಯವಾದ ಅಂದರೆ ವರಾಂತರದಿಂದ ರಹಿತವಾದ ವರಃ = ವರವು ಕೃಷ್ಣಮರ್ದನೇ = ಕೃಷ್ಣನನ್ನು ಕೊಲ್ಲುವುದರಲ್ಲಿ ವೃತಃ = ಸ್ವೀಕರಿಸಲ್ಪಟ್ಟಿತೋ ತತಃ = ಆದ್ದರಿಂದ ಅಸ್ಯ = ಈ ಕಾಲಯವನನಿಗೆ ತದನ್ಯ ಶತ್ರುಪೀಡನೇ = ಕೃಷ್ಣನಿಂದ ಇತರರಾದ ಶತ್ರುಗಳನ್ನೂ ಪೀಡಿಸುವುದರಲ್ಲಿ ತ್ವಮೇವ = ನೀನೇ ರಕ್ಷಕಃ = ಪಾಲಕನು. ॥ ೯೯ ॥

ತವಾಖಿಲೈರಜೇಯತಾ ಶಿವಪ್ರಸಾದತೋಽಸ್ತಿಹಿ ।
ವಿಶೇಷತೋ ಹರೇರ್ಜಯೇವರಾದಯಂ ವಿಮೃಗ್ಯತೇ ॥ ೧೦೦ ॥

ತವ = ನಿನಗೆ ಶಿವಪ್ರಸಾದತಃ = ರುದ್ರನ ಅನುಗ್ರಹದಿಂದ ಅಖಿಲೈಃ = ಎಲ್ಲರಿಂದಲೂ ಅಜೇಯತಾ = ಪರಾಜಯರಾಹಿತ್ಯವು ಅಸ್ತಿಹಿ = ಇದೆಯಷ್ಟೇ ಹರೇಃ = ಶ್ರೀಕೃಷ್ಣನ ಜಯೇ = ಜಯ ವಿಷಯದಲ್ಲಿ ಅಯಂ = ಈ ಕಾಲಯವನನು ವಿಶೇಷತಃ = ಶ್ರೀಕೃಷ್ಣನನ್ನೇ ಸಂಹರಿಸುವನು ಎಂಬ ವಿಶೇಷವಾದ ವರಾತ್ = ವರದಿಂದ ವಿಮೃಗ್ಯತೇ = ಅನ್ವೇಷಣ ಮಾಡಲ್ಪಡುತ್ತಾನೆ. ॥ ೧೦೦ ॥

ಇತೀರಿತೇಪ್ಯ ತೃಪ್ತವತ್ ಸ್ಥಿತೇತು ಚಾರುಹದ್ರಥೇ ।
ಜಗಾಮ ಸೌಭಮಾಸ್ಥಿತಃ ಸ ಸೌಭರಾಟ್ ಚ ಯಾವನಂ ॥ ೧೦೧ ॥

ಇತಿ = ಈ ರೀತಿಯಾಗಿ ಈರಿತೇಪಿ = ಸಾಲ್ವನಿಂದ ಹೇಳಲ್ಪಟ್ಟರೂ ಕೂಡ ಬಾರುಹದ್ರಥೇ = ಜರಾಸಂಧನು ಅತೃಪ್ತವತ್ = ಅಸಂತುಷ್ಟನಂತೆ ಸ್ಥಿತೇಸತಿ = ಇರುತ್ತಿರಲು ಸೌಭರಾಟ್ = ಸೌಭವಿಮಾನದಲ್ಲಿ ಪ್ರಕಾಶಿಸುವ ಸಃ = ಆಸಾಲ್ವನು ಸೌಭಂ = ಸೌಭ ವಿಮಾನವನ್ನು ಆಸ್ಥಿತಃಸನ್ = ಏರಿದವನಾಗಿ ಯಾವನಂ = ಕಾಲಯವನನನ್ನು ಕುರಿತು ಜಗಾಮ = ಹೋದನು. ॥ ೧೦೧ ॥

ಸ ಕಾಲಯಾವನೋಽಥತಂ ಜರಾಸುತಾಂತಿಕಾಗತಂ ।
ನಿಶಮ್ಯ ಭಕ್ತಿಪೂರ್ವಕಂ ಪ್ರಣಮ್ಯಚಾರ್ಚಯದ್ವ್ರತಂ ॥ ೧೦೨ ॥

ಅಥ=ಅನಂತರ ಸಃಕಾಲಯವನಃ=ಆ ಕಾಲನಾಮಕನಾದ ಯವನ ಪುತ್ರನಾದ ಕಾಲಯವನನಂ ಜರಾಸುತಾಂತಿಕಾಗತಂ=ಜರಾಸಂಧನ ಸಖ್ಯೂಪದಿಂದ ಬಂದಿರುವ ತಂ=ಆಸಾಲ್ವನನ್ನು ನಿಶಮ್ಯ=ಕೇಳಿ ಭಕ್ತಿಪೂರ್ವಕಂ=ಭಕ್ತಿಪೂರ್ವಕವಾಗಿ ಪ್ರಣಮ್ಯ=ನಮಸ್ಕರಿಸಿದ್ರುತಂ=ಬೇಗನೇ ಅರ್ಚಯತ್=ಪೂಜಿಸಿದನಂ. ॥ ೧೦೨ ॥

ಜರಾಸುತೋಽಹಿ ದೈವತಂ ಸಮಸ್ತಕೇಶವದ್ವಿಷಾಂ ।
ಇತಿ ಪ್ರಣಮ್ಯ ತಾಂ ದಿಶಂ ತದೀಯಮಾಶ್ವಪೂಜಯತ್ ॥ ೧೦೩ ॥

ರಾಘವೇ = ರಾಸಿುಚಂದ್ರನಂ ಸ್ಮೃತಿಂಗತೇಸತಿ = ಜಾಂಬವಂತನಿಂದ ಸ್ಮರಿಸಲ್ಪಡುತ್ತಿರಲು ಸಮಂಸ್ತ ಭೇಧ ವರ್ಜಿತಾಂ = ಗುಣ, ಕರ್ಮ, ಆಕಾರ, ಇವುಗಳ ಭೇದಗಳಿಂದ ರಹಿತವಾದ ತದಾಕೃತಿಂ = ಆ ರಾಮುಚಂದ್ರನ ಸ್ವರೂಪವನ್ನು ಯದೂತ್ತಮೇ = ಯದು ಶ್ರೇಷ್ಠನಾದ ಶ್ರೀಕೃಷ್ಣನಲ್ಲಿ ಸವಿೂಕ್ಷ್ಯ = ನೋಡಿ ಸಃ = ನನಗೆ ಸ್ವಾವಿುಯಾದ ರಾಮುಚಂದ್ರನೇ ಅಯಂ = ಶ್ರೀಕೃಷ್ಣನು ಇತಿ = ಎಂದು ಅವೈತ್ = ತಿಳಿದನು. ॥ ೨೧೦ ॥

ತತಃ ಕ್ಷವಾಪಯನ್ಸ್ತಾಂ ಪ್ರದಾಯರೋಹಿಣೇಂ ಶುಭಾಂ ।
ಮಣಿಂ ಚ ತಂ ನುನಾವಸ ಪ್ರಪನ್ನಃ ಆಶುಪಾದಯೋಃ ॥ ೨೧೧ ॥

ತತಃ = ರಾವುನೇ ಕೃಷ್ಣನು ಎಂಬ ಜ್ಞಾನಾನಂತರ ಕ್ಷವಾಪಯಂನ್ = ಅಪರಾಧಕ್ಕೆ ಕ್ಷಮೆಯನ್ನು ಬೇಡತಕ್ಕ ೂಡಲೇ ಪಾದಯೋಃ = ಚರಣಗಳಲ್ಲಿ ಪ್ರಪನ್ನಃ = ನಮುಸ್ಕರಿಸಿದ ಸಃ = ಆ ಜಾಂಬವಂತನು ಶುಭಾಂ=ಹರಿ ುಣಗಳಿಂದ ಶೋಭನಗಳಾದ ರೋಹಿಣೇಂ = ರೋಹಿಣೇ ನಾಮಕಳಾದ ಸುತಾಂ = ಮಗಳನ್ನು ಪ್ರದಾಯ = ಂ ಮಣಿಂ ಚ = ಆ ಸ್ಯಮಂತಕ ಮಣಿಯನ್ನೂ ಕೂಡ ಪ್ರದಾಯ = ಕೊಟ್ಟು ನುನಾವ = ಸ್ತೋತ್ರ ಮಾಡಿ ೨೧೧ ॥

ವಿಧಾಯ ಚಕ್ರದಾರಿತಂ ಸುಜೀರ್ಣದೇಹ ಮುಸ್ಯ ಸಃ ।
ಯುವಾನವೂಶು ಕೇಶವಶ್ಚಕಾರ ವೇದನಾಂ ವಿನಾ ॥ ೨೧೨ ॥

ಸಃಕೇಶವಃ = ಆ ಶ್ರೀಕೃಷ್ಣನು ಅಸ್ಯ = ಈ ಜಾಂಬವಂತನ ಸುಜೀರ್ಣಂ = ಅತಿ ಶಿಥಿಲವಾದ ದೇಹಂ = ಶರೀರವನ್ನು ವೇದಾನಾಂವಿನಾ = ದುಃಖವಾಗದಂತೆ ಚಕ್ರೆದಾರಿತಂ = ಚಕ್ರದಿಂದ ಸೀಳಲ್ಪಟ್ಟದ್ದನ್ನಾಗಿ ವಿಧಾಯ = ವುಾಡಿ ಆಶು = ಕೂಡಲೇ ಯುವಾನಂ = ತರುಣನನ್ನಾಗಿ ಚಕಾರ = ವುಾಡಿದನು ॥ ೨೧೨ ॥

ವಿಧಾಯಭಕ್ತವಾಂಛಿತಂ ಪ್ರಿಯಾಸಹಾಯಈಶ್ವರಃ ।
ಪ್ರಗಹ್ಯತಂ ಮಹಾಮಣಿಂ ವಿನಿರ್ಯಯೌ ಗುಹಾಮುಖಾತ್ ॥ ೨೧೩ ॥

ಈಶ್ವರಃ=ಸ್ವಾವಿುಯಾದ ಶ್ರೀಕೃಷ್ಣನು ಭಕ್ತವಾಂಛಿತಂ=ಭಕ್ತನಾದ ಜಾಂಬವಂತನ, ುಗಳನ್ನು ಕೃಷ್ಣನಿಗೆ ಕೊಡುವೆ ನೆಂಬ ಅಭಿಲಾಷೆಯನ್ನು ವಿಧಾಯಂ=ಪೂರ್ತಿವುಾಡಿ ಪ್ರಿಯಾಸಹಾಯಂಸನ್=ಜಾಂಬವತಿಯು ಸಹಾಯಕಳಾಗಿ ಉಳ್ಳವನಾಗಿ ತಂವಃಹಾವೆಂಣಿಂ=ಶ್ರೇಷ್ಠವಾದ ಆಸ್ಯಮಂತಕ ಮಣಿಯನ್ನು ಪ್ರಗೃಹ್ಯ=ಹಿಡಿದುಕೊಂಡು ಗುಹಾವುಖಾತ್=ಗುಹಾದ್ವಾರದಿಂದ ವಿನಿರ್ಯಯೌ=ಹೊರಟು ಹೋದನು. ॥ ೨೧೩ ॥

ಗುಹಾಂಪ್ರವಿಷ್ಟವಿೂಶ್ವರಂ ಬಹೂನ್ಯಹಾನ್ಯನಿರ್ಗತಂ ।
ಪ್ರತೀಕ್ಷ್ಯಯಾದವಾಸ್ತುಯೇ ಗತಾಗೃಹಂ ತದಾsಹೃಷುಃ ॥ ೨೧೪ ॥

ಗುಹಾಂ=ಗುಹೆಯನ್ನು ಪ್ರವಿಷ್ಟಂ=ಪ್ರವೇಶಿಸಿದ ಅನಿರ್ಗತಂ=ಹಿಂದೆ ಬಾರದಿರುವ ಈಶ್ವರಂ=ಸ್ವಾವಿುಯಾದ ಶ್ರೀಕೃಷ್ಣನನ್ನು ಬಹೂನ್ಯಹಾನಿ=ಬಹಳ ದಿವಸಗಳಲ್ಲಿ ಪ್ರತೀಕ್ಷ್ಯ ಬರುವೆನೆಂದು ನಿರೀಕ್ಷಿಸಿ ಗೃಹಂ=ುನೆಯನ್ನು ಕುರಿತು ಗತಾಃ=ಹೋಗಿರುವ ಯೇ ಯಾದವಾಃ=ಯಾದವರೋ ತೇ = ಅವರು ತದಾ=ಆ ಕೃಷ್ಣನು ಬಂದಾಗ ಅಹೃಷುಃ= ಸಂತೋಷಪಟ್ಟರು. ॥ ೨೧೪ ॥

ಸಮಸ್ತವೃಷ್ಣಿಸನ್ನಿಧೌ ಯದೂತ್ತಮಃ ಸ್ಯಮಂತಕಂ ।
ದದೌ ಚ ಸತ್ರಾಜಿತ್ತರೇ ಸ ವಿಚ್ವಿ ರ್ಬಭೂವ ಹ ॥ ೨೧೫ ॥

ಯದೂತ್ತಮಃ = ಯದುಶ್ರೇಷ್ಠನಾದ ಶ್ರೀಕೃಷ್ಣನು ಸಮಸ್ತವೃಷ್ಣಿಸನ್ನಿಧೌ=ಎಲ್ಲಾ ಯಾದವರ ಸನ್ನಿಧಾನದಲ್ಲಿ ಸತ್ರಜಿತ್ಕರೇ=ಸತ್ರಾಜಿದ್ರಾಜನ ಕೈಯಲ್ಲಿ ಸ್ಯಮಂತಕಂ=ಸ್ಯಮಂತಕ ಮಣಿಯನ್ನು ದದೌ=ಕೊಟ್ಟನು. ಸ=ಆ ಸತ್ರಾಜಿದ್ರಾಜನ ವಿಚ್ಛವಿಃ=ಹೋಗಲ್ಪಟ್ಟ ಮುಖಕಾಂತಿ ಉಳ್ಳವನು ಬಭೂವ = ಆದನು. ॥ ೨೧೬ ॥

ಸದುರ್ಯಶೋರಮಾಪತಾವನೂಚ್ಯ ವಿಥ್ಯಯಾತಪನ್ ।
ಸ್ವಪಾಪಹಾನಿಕಾಂಕ್ಷಯಾ ದದೌ ಸುತಾಂ ಜನಾರ್ದನೇ ॥ ೨೧೬ ॥

ಸ = ಆ ಸತ್ರಾಜಿದ್ರಾಜನು ರಮಾಪತೌ = ಲಕ್ಷ್ಮೀಪತಿಯಾದ ಶ್ರೀಕೃಷ್ಣನಲ್ಲಿ ದುರ್ಯಶಃ=ಕಳ್ಳತನ ರೂಪವಾದ ಅಪಯಶಸ್ಸನ್ನು ವಿಥ್ಯಯಾ ಸುಳ್ಳು ಮಾತಿನಿಂದ ಅನೂಚ್ಯ=ಹೇಳಿ ತಪನ್ಸನ್=ಪಶ್ಚಾತ್ತಾಪ ಪಡತಕ್ಕವನಾಗಿ ಸ್ವಪಾಪಹಾನಿ ಕಾಂಕ್ಷಯಾ=ತನ್ನ ದೋಷ ಪರಿಹಾರೇಚ್ಛೆಯಿಂದ ಸುತಾಂ=ಮಗಳಾದ ಸತ್ಯಭಾಮೆಯನ್ನು ಜನಾರ್ದನೇ = ಕೃಷ್ಣನಿಗೋಸ್ಕರ ದದೌ = ಕೊಟ್ಟನು. ॥ ೨೧೬ ॥

ಮಣಿಂ ಚ ತಂ ಪ್ರದಾಯ ತಂಸನಾಮಚ ಕ್ಷ್ಮಾಪಯನ್ ।
ಮಣಿಂ ಪುನರ್ದದೌ ಹರಿರ್ಮುದೋದ ಸತ್ಯಭಾಮಯಾ ॥ ೨೧೭ ॥

ಸಃ=ಸತ್ರಾಜಿದ್ರಾಜನು ತಂ ಮಣಿಂ=ಆ ಸ್ಯಮಂತಕ ಮಣಿಯನ್ನು ಪ್ರದಾಯ=ಕೃಷ್ಣನಿಗೆ ಕೊಟ್ಟು ತಂ ಸನ್ನು ಕ್ಷಯಾಪಯನ್ ಸನ್=ಕ್ಷಮೇ ಬೇಡುವವನಾಗಿ ನನಾಮ=ನಮಸ್ಕರಿಸಿದನು. ಆ ಕೃಷ್ಣನು ಮಣಿಂ=ಸ್ಯಮಂ ಯನ್ನು ಪುನಃ=ಮತ್ತು ದದೌ=ಸತ್ರಾಜಿದ್ರಾಜನಿಗೇನೇ ಕೊಟ್ಟನು, ಸತ್ಯಭಾಮಯಾ=ಸತ್ಯಭಾಮೆಯಿಂದ ಮ ಸಂತೋಷ ಪಟ್ಟನು. ॥ ೨೧೭ ॥

ರಮೈವಸಾಹಿ ಭೂರಿತಿ ದ್ವಿತೀಯ ಮೂರ್ತಿರುತ್ತಮಾ ।
~~ಬಭೂವ ಸತ್ರಜಿತ್ಸುತಾ ಸಮಸ್ತ ಲೋಕಸುಂದರೀ ॥ ೨೧೮ ॥~~

ಯಾ=ಯಾವ ಉತ್ತಮಾ=ಶ್ರೇಷ್ಠಳಾದ ಸಮಸ್ತ ಲೋಕಸುಂದರೀ=ಎಲ್ಲಾ ಲೋಕಗಳಲ್ಲಿರುವ ಸ್ತ್ರೀಯರಿಕ್ಕಿಂತ ಅಧಿಕ ಸೌಂಧರ್ಯವುಳ್ಳ ರಮಾ=ಲಕ್ಷ್ಮೀದೇವಿಯೋ ತಸ್ಯೈವ=ರಮಾದೇವಿಯದ್ದೇ ಆದ ಸಾ=ಆ ಪ್ರಸಿದ್ಧವಾದ ಭೂರಿತಿ= ಭೂಃ ಎಂಬುವಾಗಿ ದ್ವಿತೀಯಮೂರ್ತಿರಪಿ=ಶ್ರೀ, ಭೂ, ದುರ್ಗಾ, ಎಂಬ ಮೂರು ರೂಪಗಳ ಮಧ್ಯದಲ್ಲಿ ಎರಡನೆಯ ರೂಪ ಉಳ್ಳವಳೇ ಸತ್ರಜಿತ್ಸುತಾ=ಸತ್ರಾಜಿದ್ರಾಜನ ಮಗಳು ಬಭೂವ=ಆದಳು. ॥ ೨೧೮ ॥

ತತೋಹಿ ಸಾ ಚ ರುಗ್ಮಿಣೀ ಪ್ರಿಯೇಪ್ರಿಯಾಸುತೇsಧಿಕಂ ।
ಜನಾರ್ದನಸ್ಯ ತೇ ಹರೇಃ ಸದಾವಿಯೋಗಿನೀ ಯತಃ ॥ ೨೧೯ ॥

ಯತಃ=ಯಾವ ಕಾರಣದಿಂದ ಸಾ=ಆ ಸತ್ಯಭಾಮೆಯಂ ರುಗ್ಮಿಣೀ ಚ=ರುಗ್ಮಿಣಿ ಎಂಬ ಇಬ್ಬರು ಹೆಂಡಂದಿರು ಸದಾ=ಎಲ್ಲಾ ದೇಶ ಕಾಲದಲ್ಲಿಯೂ ಅವಿಯೋಗಿನೀರಮೈವ=ಪರಮಾತ್ಮನ ಅಗಲುವಿಕೆ ಇಲ್ಲದ ಲಕ್ಷ್ಮೀದೇವಿಯ ಸ್ವರೂಪರೇ ಆಗಿರುವರೋ ತತಃ=ಆ ಕಾರಣದಿಂದ ಜನಾರ್ದನಸ್ಯ=ಸಂಸಾರ ನಾಶಕವಾದ ಉತ್ಪತ್ತಿ ಇಲ್ಲದ ಹರೇಃ = ಶ್ರೀಕೃಷ್ಣನಿಗೆ ಪ್ರಿಯಾಸುಃ=ಶ್ರೀಕೃಷ್ಣನ ಹೆಂಡಂದಿರ ಮಧ್ಯದಲ್ಲಿ ತೇ=ಆವರಿಬ್ಬರು ಅಧಿಕಂಪ್ರಿಯೇ=ಹೆಚ್ಚು ಪರಮಾತ್ಮನ ಅನುಗ್ರಹ ಪಾತ್ರ ಭೂತರು. ॥ ೨೧೯ ॥

ಅವಾಪ ಸಾಂಬ ನಾಮಕಂ ಸುತಂ ಚ ರೋಹಿಣೀ ಹರೇಃ ।
ಚತುರ್ಮುಖಾಂಶ ಸಂಯುತಂ ಕುಮಾರಮೇವ ಷಣ್ಮುಖಂ ॥ ೨೨೦ ॥

ರೋಹಿಣೀ=ಜಾಂಬವತಿಯಂ ಹರೇಃ=ಶ್ರೀಕೃಷ್ಣನ ದೆಸೆಯಿಂದ ಪೂರ್ವಂ=ಹಿಂದೆ ಮೂಲ ರೂಪದಲ್ಲಿ ಷಣ್ಮುಖಂ

ಕುಮಾರಮೇವ=ಷಣ್ಮುಖಿ ಸ್ಕಂದನೇ ಆದ ಚತುರ್ಮುಖಾಂಶ ಸಂಯುತಂ=ಬ್ರಹ್ಮನ ಅಂಶದಿಂದ ಕೂಡಿದ ಸಾಂಬನಾಮಕಂ= ಈಗ ಅವತಾರದಲ್ಲಿ ಸಾಂಬನೆಂದು ಹೆಸರುಳ್ಳ ಸುತಂ=ಮಗನನ್ನು ಅವಾಪ=ಹೊಂದಿದಳು. ॥ ೨೨೦ ॥

ಇತಿ ಪ್ರಶಾಸತಿ ಪ್ರಭೌ ಜಗಜ್ಜನಾರ್ದನೇಽಖಿಲಂ ।
ಅಗಣ್ಯಸದ್ಗುಣೌರ್ಣವೇ ಕದಾಚಿದಾಯಯೌ ದ್ವಿಜಃ ॥ ೨೨೧ ॥

ಇತಿ=ಈ ಹಿಂದೆ ಹೇಳಿದ ರೀತಿಯಿಂದ ಪ್ರಭೌ=ಸಮರ್ಥನಾದ ಅಗಣ್ಯ ಸದ್ಗುಣಾರ್ಣವೇ = ಅಸಂಖ್ಯಾಕಗಳಾದ ನಿರ್ದುಷ್ಟಗಳಾದ ಗುಣಗಳಿಂದ ಸಮುದ್ರದಂತಿರುವ ಜನಾರ್ದನೇ = ಶ್ರೀಕೃಷ್ಣನು ಅಖಿಲಂ ಜಗತ್=ಎಲ್ಲಾ ಲೋಕವನ್ನೂ ಪ್ರಶಾಸತಿಸತಿ=ಆಳುತ್ತಿರಲು ಕದಾಚಿತ್=ಒಮ್ಮೆ ದ್ವಿಜಃ=ಬ್ರಾಹ್ಮಣನು ಆಯಯೌ=ಬಂದನು. ॥ ೨೨೧ ॥

ಜನಾರ್ದನಃ ಸ ನಾಮತೋ ರಮೇಶ ಪಾದ ಸಂಶ್ರಯಃ ।
ಸಮಾನಿತಶ್ಚ ವಿಷ್ಣುನಾ ಪ್ರಣಮ್ಯ ವಾಕ್ಯ ಮಬ್ರವೀತ್ ॥ ೨೨೨ ॥

ಯಃ=ಯಾವನು ಜನಾರ್ದನ ಇತಿ=ಜನಾರ್ದನನೆಂಬ ನಾಮತಃ=ಹೆಸರಿನಿಂದ ಯುಂತಃ=ಕೂಡಿದವನೋ ಸಃ=ಆ ರಮೇಶಪಾದಸಂಶ್ರಯಃ=ಶ್ರೀಕೃಷ್ಣನ ಚರಣಗಳೇ ಆಶ್ರಯವಾಗಿ ಉಳ್ಳ ವಿಷ್ಣುನಾ=ಶ್ರೀಕೃಷ್ಣನಿಂದ ಮಾನಿ ವಿಸಲ್ಪಟ್ಟ ಸಃ=ಆ ಬ್ರಾಹ್ಮಣನು ಪ್ರಣಮ್ಯ=ಕೃಷ್ಣನನ್ನು ನಮಸ್ಕರಿಸಿ ವಾಕ್ಯಂ=ಮಾತನ್ನು ಅಬ್ರವೀತ್= ॥ ೨೨೨ ॥

ಕ್ಷಮಸ್ವ ಮೇ ವಜಃ ಪ್ರಭೋ ಬ್ರವೀಮ್ಯತೀವ ಪಾತಕಂ ।
ಯತಃ ಸುಪಾಪ ದೂತಕಸ್ತತೋಹಿ ತಾದೃಶಂ ವಚಃ ॥ ೨೨೩ ॥

ಹೇ ಪ್ರಭೋ=ಎಲೋ ಸಮರ್ಥನಾದ ಕೃಷ್ಣನೇ ಅತೀವ=ಅತ್ಯಂತವಾಗಿ ಪಾತಕಂ=ಪಾಪವನ್ನುಂಟು ಮಾಡುವ ವಜಃ=ಮಾತನ್ನು ಬ್ರವೀಮಿ=ಹೇಳುತ್ತೇನೆ. ಮೇ=ನನ್ನ ವಚಃ=ಮಾತನ್ನು ಕ್ಷಮಸ್ವ=ಕ್ಷಮಿಸು ಯತಃ=ಯಾವ ಕಾರಣದಿಂದ ಸುಪಾಪದೂತಕಃ=ಅತೀ ಪಾಪಿಷ್ಠರ ದೂತನೋ ತತಃ=ಆದ್ದರಿಂದ ವಚೋಹಿ=ಮಾತೂ ಕೂಡ ತಾದೃಶಂ=ಪಾಪ ಜನಕ ವಾದದ್ದೇ. ॥ ೨೨೩ ॥

ನತೇಽಸ್ತ್ಯಗೋಚರಂ ಕ್ವಚಿತ್ತಥಾಪಿ ಚಾಜ್ಞಯಾ ವದೇ ।
ವದೇತಿ ಚೋದಿತೋಽಮುನಾ ದ್ವಿಜೋ ಜಗಾದ ಮಾಧವಂ ॥ ೨೨೪ ॥

ತೇ=ನಿನಗೆ ಅಗೋಚರಂ=ಇಂದ್ರಿಯಕ್ಕೆ ವಿಷಯವಾಗದಿರುವುದು ಕ್ವಚಿತ್=ಎಲ್ಲಿಯೂ ನಾಸ್ತಿ=ಇರುವುದಿಲ್ಲ. ತಥಾಪಿ=ಹಾಗಾದರೂ ಆಜ್ಞಯಾ=ನಿನ್ನ ಆಪ್ಪಣೆಯಿಂದ ವದೇ=ಹೇಳುತ್ತೇನೆ. ಅಮುನಾ= ಈ ಶ್ರೀಕೃಷ್ಣನಿಂದ ವದ=ಹೇಳು ಇತಿ=ಎಂಬುದಾಗಿಚೋದಿತಃ=ಪ್ರೇರಿಸಲ್ಪಟ್ಟ ದ್ವಿಜಃ=ಬ್ರಾಹ್ಮಣನು ಮಾಧವಂ=ಲಕ್ಷ್ಮೀಪತಿಯಾದ ಶ್ರೀಕೃಷ್ಣನನ್ನು ಜಗಾದ= ಹೇಳಿದನು. ॥ ೨೨೪ ॥

ಸುತೌ ಹಿ ಸಾಲ್ವಭೂಪತೇರ್ಬಭೂವತುಃ ಶಿವಾಶ್ರಯೌ ।
ಶಿವಪ್ರಸಾದ ಸಂಭವೌ ಪಿತುಸ್ತಪೋಬಲೇನ ತೌ ॥ ೨೨೫ ॥

ಸಾಲ್ವಭೂಪತೇಃ=ಸಾಲ್ವ ದೇಶದ ರಾಜನಾದ ಬ್ರಹ್ಮದತ್ತನಿಗೆ ಶಿವಾಶ್ರಯೌ = ರುದ್ರನೇ ಆಶ್ರಯವಾಗಿ ಉಳ್ಳ ನಿತೌ=ಇಬ್ಬರು ಮಕ್ಕಳು ಬಭೂವತುಃ=ಹುಟ್ಟಿದರು. ತೌ=ಆ ಹಂಸಾಡಿಭಿಕರು ಪಿತುಃ=ತಂದೆಯಾದ ಬ್ರಹ್ಮದತ್ತನ ತಪೋ ಬಲೇನ=ತಪಸ್ಸಿನ ಸಾಮರ್ಥ್ಯದಿಂದ ಶಿವಪ್ರಸಾದಸಂಭವೌ=ನಿನಗೆ ಬಲಿಷ್ಟರಾದ ಮಕ್ಕಳು ಹುಟ್ಟುವರು ಎಂಬ ರುದ್ರದೇವರ ಅನುಗ್ರಹದಿಂದ ಜನ್ಮ ಉಳ್ಳವರು. ॥ ೨೨೫ ॥

ಅಜೇಯತಾಮವಧ್ಯತಾಂ ಶಿವಾದ್ವರಂ ಸಮಾಪತುಃ ।
ಜರಾಸುತಸ್ಯ ಶಿಷ್ಯಕೌ ತಪೋಬಲೇನ ಕೇವಲಂ ॥ ೨೨೬ ॥

ಮಹೋದರಂ ಚ ಕುಂಡಧಾರಿಣಂ ಚ ಭೂತಕಾವುಭೌ ।
ತಥಾಜಿತಾವವಧ್ಯಕೌ ದಿದೇಶ ಶಂಕರಸ್ತಯೋಃ ॥ ೨೨೭ ॥

ಕೇವಲಂಜರಾಸುತಸ್ಯ=ಮುಖ್ಯವಾಗಿ ಜರಾಸುತನ ಶಿಷ್ಯಕಾ=ಶಿಷ್ಯರಾದ ಹಂಸಡಿಭಕರು ಶಿವಾತ್=ರುದ್ರನಿಂದ ಅಜೇಯತಾಂ=ಇತರರಿಂದ ಗೆಲ್ಲಲ್ಪಡದಿರುವಿಕೆ ಅವಧ್ಯತಾಂ=ಇತರರಿಂದ ಕೊಲ್ಲಲ್ಪಡದಿರುವಿಕೆ ಎಂಬ ವರಂ=ವರವನ್ನು ಸಮಪಾಪತುಃ=ಹೊಂದಿದರು. ತಪೋಬಲೇನ=ಆ ಹಂಸಡಿಭಕರ ತಪಸ್ಸಿನ ಸಾಮರ್ಥ್ಯದಿಂದ ಶಂಕರಃ=ಸಂತುಷ್ಟನಾದ ಶಂಕರನು ತಯೋಃ=ಆ ಹಂಸಡಿಭಕರಿಗೆ ತಥಾ=ಆ ಹಂಸಡಿಭಕರಂತೆ ಅಜಿತೌ=ಪರಾಜಯವಿಲ್ಲದ ಅವಧ್ಯಕೌ = ನಾಶವಿಲ್ಲದ ಮಹೋದರಂಚ = ಮಹೋದರನೆಂಬ ಕುಂಡಧಾರಿಣಂ ಚ = ಕುಂಡಧಾರಿ ಎಂಬ ಉಚ್ಚಾ = ಇಬ್ಬರು ಭೂತಕೌ=ಭೂತಗಳನ್ನು ದಿದೇಶ = ಅವರ ಸಹಾಯಕ್ಕಾಗಿ ಕಳುಹಿಸಿಕೊಟ್ಟನು ॥೨೨೬॥ ೨೨೭ ॥

ತಯೋಸ್ಸಹಾಯ ಏವ ತೌವರಾಚ್ಛಿವಸ್ಯ ಭೂತಕೌ ।
ಅಜೇಯತಾಮವಾಪತುರ್ಸಚಾನ್ಯಥಾಮರಾವಪಿ ॥ ೨೨೮ ॥

ಅಮರಾವಪಿ=ದೇವಯೋನಿಗಳಾದ್ದರಿಂದ -ಮರಣರಹಿತರಾದರೂ ಕೂಡ ತೌಭೂತಕೌ = ಆ ತಯೋಃ=ಆ ಹಂಸಡಿಭಕರ ಸಹಾಯ ಏವ=ಸಹಾಯಕ್ಕಾಗಿಯೇ ಶಿವಸ್ಯ=ರುದ್ರನ ವರಾತ್=ವರದಿಂದ ಅಜೇಯ ಅಜೇಯತ್ವರೂಪವರವೆನ್ನು ಅವಾಪತುಃ=ಹೊಂದಿದರು. ಅನ್ಯಥಾ=ಶಿವನ ವರವಿಲ್ಲದಿದ್ದಲ್ಲಿ ನಚ=ಅಜೇಯಲಾರರು. ॥೨೨೮॥

ಅಜೇಯತಾಮವಧ್ಯತಾಮವಾಪ್ಯತಾವುಭೌ ಶಿವಾತ್ ।
ಪಿತುಶ್ಚ ರಾಜಸೂಯಿತಾಂ ಸಮಿಚ್ಛತೋಮದೋದ್ಧತೌ ॥ ೨೨೯ ॥

ತಾವುಭೌ=ಆ ಹಂಸಡಿಭಕರಿಬ್ಬರು ಶಿವಾತ್=ರುದ್ರನಿಂದ ಅಜೇಯತಾಂ = ಪರಾಜಯರಾಹಿತ್ಯವನ್ನೂ ಅವಧ್ಯತಾಂ=ಮರಣರಾಹಿತ್ಯವನ್ನೂ ಅವಾಪ್ಯ=ಹೊಂದಿ ಮದೋದ್ಧತೌಸಂತೌ=ಅಹಂಕಾರದಿಂದ ಗರ್ವಿಷ್ಠರಾದವರಾಗಿ ಪಿತುಃ=ತಂದೆಯಾದ ಬೃಹದ್ರತ್ನನಿಗೆ ರಾಜಸೂಯಿತಾಂ=ರಾಜಸೂಯಕರ್ತೃತ್ವವನ್ನು ಸಮಿಚ್ಛತಃ=ಇಚ್ಛಿಸುತ್ತಾರೆ. ॥ ೨೨೯ ॥

ಜರಾಸುತೋ ಗುರುತ್ವತೋ ವಿರೋದ್ಧು ಮತ್ರ ನೇಚ್ಛತಿ ।
ನೃಪಾಂಸ್ತು ದೇವಪಕ್ಷಿಣೋ ವಿಜಿತ್ಯ ಕರ್ತುಮಿಚ್ಛತಃ ॥ ೨೩೦ ॥

ಜರಾಸುತಃ=ಜರಾಸಂಧನು ಗುರುತ್ವತಃ=ಹಂಸಡಿಭಕರಿಗೆ ಗುರುವಾದ್ದರಿಂದ ಅತ್ರ=ಈ ರಾಜಸೂಯ ವಿಷಯದಲ್ಲಿ ವಿರೋದ್ಧುಂ=ವಿರೋಧ ಮಾತಲು ನೇಚ್ಛತಿ=ಇಚ್ಛಿಸುವುದಿಲ್ಲ. ದೇವಪಕ್ಷಿಣಃ=ದೇವತೆಗಳ ಪಕ್ಷವಲ್ಲಿರುವ ನೃಪಾನ್ = ರಾಜರನ್ನು ತು =ದೇವಾವತಾರಭೂತರಾದವರನ್ನೂ ವಿಜಿತ್ಯ = ವಿಶೇಷಾಕಾರವಾಗಿ ಜಯಿಸಿ ಕರ್ತುಂ = ರಾಜಸೂಯ ಯಾಗವನ್ನು ಮಾಡಲು ಇಚ್ಛತಃ = ಇಚ್ಛಿಸುತ್ತಾರೆ. ॥ ೨೩೦ ॥

ಸ್ವಯಂ ಹಿ ರಾಜಸೂಯಿತಾಂ ಜರಾಸುತೋ ನ ಮನ್ಯತೇ ।
ಯತೋ ಹಿ ವೈಷ್ಣವಂ ಕ್ರತುಂ ತವಾಹುರೀಶವೈದಿಕಾಃ ॥ ೨೩೧ ॥

ಹೇಈಶ = ಎಲೈ ಸ್ವಾಮಿಯಾದ ಶ್ರೀಕೃಷ್ಣನೇ ಯತಃ = ಯಾವ ಕಾರಣದಿಂದ ವೈದಿಕಾಃ = ವೇದವನ್ನು ತಿಳಿ

ದವರು ತಂಕ್ರತುಂ=ಆ ರಾಜ ಸೂಯ ಯಾಗವನ್ನು ವೈಷ್ಣವಂ=ವಿಷ್ಣುವೇ ದೇವತೆಯಾಗಿ ಉಳ್ಳದ್ದನ್ನಾಗಿ ಆಹುಃ=ಹೇಳುತ್ತಾರೋ ತತಃ=ಆದ್ದರಿಂದ ಜರಾಸುತಃ=ಜರಾಸಂಧನು ಸ್ವಯಂ=ತಾನು ರಾಜಸೂಯಿನಾಂ=ರಾಜಸೂಯ ಕರ್ತೃತ್ವವನು ನವಮನ್ಯತೇ=ಇಚ್ಛಿಸುವುದಿಲ್ಲ. ॥ ೨೩೧ ॥

ಇಮೌ ಪಿತುರ್ಯಶೋರ್ಥಿನೌ ಪರಾಭವಾಯ ತೇ ತಥಾ ।
ಸಮಿಚ್ಛತೋಽಚ್ಯುತ ಕ್ರತುಂ ಭವಂತಮೂಚತುಶ್ಚ ತೌ ॥ ೨೩೨ ॥

ಇಮೌ = ಈ ಹಂಸಡಿಭಿಕರು ಪಿತುಃ=ತಂದೆಯಾದ ಬೃಹದ್ರತ್ತನಿಗೆ ಯಶೋರ್ಥಿನೌ = ಕೀರ್ತಿಯನ್ನು ಇಚ್ಛಿಸತಕ್ಕವರು ತಥಾ = ಹಾಗೆಯೇ ತೇ = ನಿನ್ನ ಪರಾಭವಾಯ = ತಿರಸ್ಕಾರಕಾಗಿ ಕ್ರತುಂ = ರಾಜಸೂಯಂವನ್ನು ಸಮಿಚ್ಛತಃ = ಇಚ್ಛಿಸುತ್ತಾರೆ. ಹೇ ಅಚ್ಯುತ = ಎಲೋ ಕೃಷ್ಣನೇ ತೌ = ಅವರಿಬ್ಬರು ಭವಂತಂ = ನಿನ್ನನ್ನು ಊಚತುಃ = ಹೇಳಿದರು. ॥ ೨೩೨ ॥

ಸಮುದ್ರಸಂಶ್ರಯೋ ಭವಾನ್ ಬಹೂನ್ ಪ್ರಗೃಹ್ಯ ಲಾವಣಾನ್ ।
ಸುಭಾರಕಾನುಪೈ ಹಿ ನಾವಿತಿ ಕ್ಷ್ಮನುಸ್ವ ಮೇ ವಚಃ ॥ ೨೩೩ ॥

[redacted]ಃ=ಯಾವ ಕಾರಣದಿಂದ ಭವಾನ್=ನೀನು ಸಮುದ್ರಸಂಶ್ರಯಃ=ರತ್ನಾಕರವೇ ಆಶ್ರಯವಾಗಿ ಉಳ್ಳವನೋ[redacted]ದ ಲಾವಣಾನ್=ಲವಣ ಸಮುದ್ರ ಸಂಬಂಧಿಗಳಾದ ಬಹೂನ್=ಬಹು ಸಂಖ್ಯಾಕಗಳಾದ ಸುಭಾರಕಾನ್=[redacted]ಲೆಗೆ ಒಂದು ಭಾರವೆಂದು ಹೆಸರು) ಅಂತಪರತ್ನಾದಿಗಳ ಭಾರಗಳನ್ನು ಪ್ರಗೃಹ್ಯ=ಹಿಡಿದುಕೊಂಡು ನೌ=[redacted]ಪೈ ಹಿ=ಹೊಂದು ಎಂದು ಹೇಳಿರುವರು. ಇತಿ=ಈ ರೀತಿಯಾದ ಮೇ=ನನ್ನ ವಚಃ=ವಾತನ್ನು [redacted]ಷ್ಮಿಸು. ॥ ೨೩೩ ॥

ಉದೀರ್ಯ ತಂ ನನಾಮ ಸಃ ಪ್ರಚಾಹಸನ್ಸ್ಮಯಾದವಾಃ ।
ಹರಿಸ್ತು ಸಾತ್ಯಕಿಂ ವಚೋ ಜಗಾದ ಮೇಘನಿಸ್ವನಃ ॥ ೨೩೪ ॥

ಸಃ=ಆ ಬ್ರಾಹ್ಮಣನು ಇತಿ=ಈ ರೀತಿಯಾಗಿ ಉದೀರ್ಯ=ಹೇಳಿ ತಂ=ಆಕೃಷ್ಣನನ್ನು ನನಾಮ=ನಮಸ್ಕರಿಸಿದನು. ಯಾದವಾಶ್ಚ=ಯಾದವರು ಪ್ರಾಹಸನ್=ನಗಾಡಿದರು ಮೇಘನಿಸ್ವನಃ=ಮೋಡದ ಧ್ವನಿಯಂತೆ ಧ್ವನಿಉಳ್ಳ ಹರಿಸ್ತು=ಶ್ರೀಕೃಷ್ಣನಾದರೂ ಸಾತ್ಯಕಿಂ = ಸಾತ್ಯಕಿಯನ್ನು ಕುರಿತಂ ವಚಃ=ಮಾತನ್ನು ಜಗಾದ=ಹೇಳಿದನು. ॥ ೨೩೪ ॥

ಪ್ರಯಾಹಿ ಸಾತ್ಯಕೇ ವಚೋ ಬ್ರವೀಹಿ ಮೇ ನೃಪಾಧಮೌ ।
ಸಮೇತ್ಯವಾಂವರಾಯುಧೈಃ ಕರಂ ದದಾಮ್ಯಸಂಶಯಮ್ ॥ ೨೩೫ ॥

ಹೇ ಸಾತ್ಯಕೇ=ಎಲೋ ಸಾತ್ಯಕಿಯೇ ಪ್ರಯಾಹಿ=ಹೋಗು ನೃಪಾಧಮೌ=ರಾಜರಲ್ಲಿ ನೀಚರಾದ ಹಂಸಡಿಭಿಕರನ್ನು ಕುರಿತಂ ಮೇ=ನನ್ನ ವಚಃ=ಮಾತನ್ನು ಬ್ರವೀಹಿ=ಹೇಳು ವಾಂ=ನಿಮ್ಮಿಬ್ಬರನ್ನು ಸಮೇತ್ಯ=ಹೊಂದಿ ವರಾಯುಧೈಃ=ಉತ್ತಮ ಆಯುಧಗಳಿಂದ ಅಸಂಶಯಂ=ನೀಃಸಂಶಯವಾಗಿ ಕರಂ= ಕಪ್ಪವನ್ನು ದದಾಮಿ = ಕೊಡುತ್ತೇನೆ. ॥ ೨೩೫ ॥

ಉಪೈತವಾಶು ಸಂಯುಗಾರ್ಥಿನೌಚ ಪುಷ್ಕರಂಪ್ರತಿ ।
ಇತೀರಿತಃಶಿನೇಃಸುತೋ ಜಗಾಮವಿಪ್ರಸಂಯುತಃ ॥ ೨೩೬ ॥

ಸಂಯುಗಾರ್ಥಿನೌ = ಯುದ್ಧವನ್ನು ಅಪೇಕ್ಷಿಸತಕ್ಕ ನೀವಿಬ್ಬರು ಪುಷ್ಕರಂಪ್ರತಿ = ಪುಷ್ಕರ ತೀರ್ಥವನ್ನು ಕುರಿತು ಉಪೈತಂ = ಬನ್ನಿರಿ ಇತಿ = ಈ ರೀತಿಯಾಗಿ ಈರಿತಃ = ಹೇಳಿಸಿಕೊಳ್ಳಲ್ಪಟ್ಟ ಶಿನೇಃ = ಶಿನಿಯ ಸುತಃ = ಮಗನಾದ ಸಾತ್ಯಕಿಯು ವಿಪ್ರಸಂಯುತಃ ಸನ್ = ಬ್ರಾಹ್ಮಣನಿಂದ ಕೂಡಿದವನಾಗಿ ಜಗಾಮ = ಹೋದನು. ॥ ೨೩೬ ॥

ಉಪೇತ್ಯ ತೌಹರೇರ್ವಚೋ ಜಗಾದಸಾತ್ಯಕಿರ್ಬಲೀ ।
ವಿಧಾಯತೌ ತೃಣೋಪಮೌ ಗಿರಿಜಗಾಮುಕೇಶವಂ ॥ ೨೩೭ ॥

ಬಲೀ=ಬಲವುಳ್ಳ ಸಾತ್ಯಕಿಃ=ಸಾತ್ಯಕಿಯು ತೌ=ಆ ಹಂಸಡಿಭಿಕರನ್ನು ಉಪೇತ್ಯ=ಹೊಂದಿ ಪರೇಃ=ಶ್ರೀಕೃಷ್ಣನ ವಚಃ=ಮಾತನ್ನು ಜಗಾದ=ಪೇಳಿದನು ಗಿರಾ=ಮಾತಿನಿಂದ ತೌ=ಅವರಿಬ್ಬರಂ ತೃಣೋಪಮೌ=ಹುಲ್ಲಿಗೆ ಸಮಂರಂ ಇತಿ= ಎಂಬ ಬುದ್ಧಿಂ=ತಿಳಿವಳಿಕೆಯನ್ನಂ ಲೋಕಾನಾಂ=ಜನರಿಗೆ ವಿಧಾಯ=ಉಂಟುಂಮಾಡಿ ಕೇಶವಂ=ಕೃಷ್ಣನನ್ನಂ ಪುರಿತಂ ಜಗಾಮ=ಹೋದನು. ॥ ೨೩೭ ॥

ತತಃಪುರೈವ ತಾವುಭೌದ್ವಿಜಂ ಹರಸ್ವರೂಪಿಣಂ ।
ಸುದುಃಖವಾಸನಾಮಕಂ ಪ್ರಚಕ್ರತುಸ್ತೃಣೋಪಮಂ ॥ ೨೩೮ ॥

ತತಃ=ಕೃಷ್ಣನ ಹತ್ತಿರ ದೂತನನ್ನು ಕಳುಹಿಸುವ ಪುರಾ = ಮೊದಲು ಉಭೌತಾವೇವ=ಇಬ್ಬರಾದ ಹಂಸ ಡಿಭಿಕರೇ ಹರಸ್ವರೂಪಿಣಂ=ರುದ್ರಾವತಾರರಾದ ಸುದುಃಖಿವಾಸನಾಮಕಂ=ದುರ್ವಾಸರೆಂದು ಹೆಸರುಳ್ಳ ದ್ವಿಜಂ=ಬ್ರಾಹ್ಮಣನ ತೃಣೋಪಮಂ=ಹುಲ್ಲಿಗೆ ಸದೃಶರನ್ನಾಗಿ ಪ್ರಚಕ್ರತುಃ=ಮಾಡಿದರು. ॥ ೨೩೮ ॥

ದಶತ್ರಿಕೈರ್ಶತೈರ್ವೃತೋ ಯತೀಶ್ವರೈಃಸಸರ್ವವಿತ್ ।
ವಿಪಾಟಿತಾತ್ಮಕೌಪಿನಾದಿ ಸರ್ವಮಾತ್ರಕೋಽಭವತ್ ॥ ೨೩೯ ॥

ದಶತ್ರಿಕೈಃಶತೈಃ=ಮೂವತ್ತುನೂರಂ ಅಂದರೆ ಮೂರು ಸಹಸ್ರ ಸಂಖ್ಯಾಕರಾದ ಯತೀಶ್ವರೈಃ=ಯತಿ ಪರಮಹಂಸರಿಂದ ವೃತಃ=ಕೂಡಿದ ಸರ್ವವಿತ್=ಸರ್ವಜ್ಞರಾದ ಸಃ=ಆ ದುರ್ವಾಸರಂ ವಿಪಾಟಿತಾತ್ಮಕೌಪಿನಾ ಮಾತ್ರಕಃ=ವಿಪಾಟಿತ=ಸೀಳಲ್ಪಟ್ಟ ಆತ್ಮ = ತನ್ನ ಕೌಪಿನ = ಕಟಿಸ್ಥಿತವಾದ ಗುಹ್ಯೇಂದ್ರಿಯದ ವಿಷಯದಲ್ಲಿ ಆ ಯಂನ್ನು ಪೊಂದಿಸಿಕೊಡುವ ವಸ್ತ್ರವೇ ಆದಿ = ಮೊದಲಾದ ಸರ್ವಮಾತ್ರಕಃ = ದಂಡ ಕಮಂಡಲ್ವಾದಿ ಎಲ್ಲಾ ಸನ್ಯಾಸ ವರಂ ಅಭವತ್ = ಆದರು. ॥ ೨೩೯ ॥

ವರಾತ್ ಸ್ವಸಂಭವಾದಸೌ ನ ಶಾಪಶಕ್ತಿಮಾನಭೂತ್ ।
ತತಃ ಸಮಸ್ತಭಂಜನೋರುಶಕ್ತಿಮಾಪ ಕೇಶವಂ ॥ ೨೪೦ ॥

ಅಸೌ=ಈ ದುರ್ವಾಸ ಋಷಿಗಳು ಸ್ವಸಂಭವಾತ್=ರುದ್ರಸ್ವರೂಪಿಯಾದ ತನ್ನಿಂದಲೇ ಉಂಟಾದ ವರಾತ್=ಅವ ಧೃತ್ವರೂಪವಾದ ವರದಾನ ನಿಮಿತ್ತದಿಂದ ಶಾಪಶಕ್ತಿಮಾನ್=ಶಾಪ ಕೊಡುವ ವಿಷಯದಲ್ಲಿ ಸಾಮರ್ಥ್ಯ ಉಳ್ಳವರು ನಾಭೂತ್=ಆಗಲಿಲ್ಲ, ತತಃ = ಆ ಕಾರಣದಿಂದ ಸಮಸ್ತಭಂಜನೋರುಶಕ್ತಿಂ=ಎಲ್ಲದನ್ನೂ ನಾಶಮಾಡುವ ವಿಷಯದಲ್ಲಿ ಉತ್ಕೃಷ್ಟಸಾಮರ್ಥ್ಯ ಉಳ್ಳ ಕೇಶವಂ=ಶ್ರೀಕೃಷ್ಣನನ್ನು ಆಪ=ಹೊಂದಿದರು ॥ ೨೪೦ ॥

ಸತಾನ್ ಸಮರ್ಚ್ಯಮಾಧವಃ ಪ್ರದಾಯಚೋರುಮಾತ್ರಕಾಃ ।
ಯಯೌ ಚ ತೈಃ ಸಮನ್ವಿತೋ ವಧಾಯ ಸಾಲ್ವಪುತ್ರಯೋ ॥ ೨೪೧॥

ಮಾಧವಃ ಸಃ = ಲಕ್ಷ್ಮೀಪತಿಯಾದ ಆ ಶ್ರೀಕೃಷ್ಣನು ತಾನ್ = ಆ ಯತೀಶ್ವರನನ್ನು ಸಮರ್ಚ್ಯ=ಪೂಜಿಸಿ ಉರು ಮಾತ್ರಕಾಃ = ಉತ್ತಮಳಾದ ದಂಡಕಮಂಡಲು ಮೊದಲಾದ ಸಾಧನೆಗಳನ್ನು ಪ್ರದಾಯ=ಕೊಟ್ಟು ತೈಃ=ಆ ಯತಿಶ್ರೇಷ್ಠ ರಾದ ಸಮನ್ವಿತಃಸನ್=ಕೂಡಿದವನಾಗಿ ಸಾಲ್ವಪುತ್ರಯೋಃ=ಸಾಲ್ವನ ಮಕ್ಕಳಾದ ಹಸಂಡಿಭಿಕರ ವಧಾಯ=ನಾಶಕ್ಕೋಸ್ಕರ ಯಯೌ=ಹೋದನಂ. ॥ ೨೪೧ ॥

ತಮುತ್ರಿಜಂ ಹರಾತ್ಮಕಂ ಯತೋಹಿವೇದ ಮಾಗಧಃ ।
ತತೋಽತ್ಯಜತ್ ಸ್ವಶಿಷ್ಯಕೌ ನಿಶಮ್ಯ ತತ್ಪ್ರತೀಪಕೌ ॥ ೨೪೨ ॥

ಮಾಗಧಃ=ಜರಾಸಂಧನಂ ಅತ್ರಿಜಂ=ಅತ್ರಿಪುತ್ರರಾದ ತಂ=ಆ ದುರ್ವಾಸರನ್ನು ಯಂತಃ=ಯಾವ ಕಾರಣದಿಂದ ಹರಾತ್ಮಕಂ=ರುದ್ರಾವತಾರಭೂತರನ್ನಾಗಿ ಹಿ=ನಿಶ್ಚಯವಾಗಿಯೇ ವೇದ=ತಿಳಿದಿರುತ್ತಾನೋ ತತಃ=ಆ ಕಾರಣದಿಂದ ಸ್ವಶಿಷ್ಯಕೌ=ತನ್ನ ಶಿಷ್ಯರಾದ ಹಂಸಡಿಭಿಕರನ್ನು ತತ್ಪ್ರತೀಪಕೌ=ಆ ದುರ್ವಾಸರ ದ್ವೇಷಿಗಳನ್ನಾಗಿ ನಿಶಮ್ಯ=ಕೇಳಿ ಅಸ್ಯಜತ್=ಬಿಟ್ಟನು॥ ೨೪೨ ॥

ಹರೌ ತು ಪುಷ್ಕರಂಗತೇ ಮುನೀಶ್ವರೈಃ ಸಮನ್ವಿತೇ ।
ಸಮೀಯತುಶ್ಚ ತಾ ವುಭಾವಥಾತ್ರ ಹಂಸಡೀಭಿಕೌ ॥ ೨೪೩ ॥

ಮುನೀಶ್ವರೈಃ=ಮುನಿಶ್ರೇಷ್ಠರಿಂದ ಸಮನ್ವಿತೇ=ಕೂಡಿದ ಹರೌತು=ಶ್ರೀಕೃಷ್ಣನಾದರೂ ಪುಷ್ಕರಂ=ಪುಷ್ಕರತೀರ್ಥವನ್ನು ಗತೇಸತಿ=ಹೋಗುತ್ತಿರಲು ಅತ್ರ=ಈ ಪುಷ್ಕರ ತೀರ್ಥದಲ್ಲಿ ಉಭೌ ಧೈರ್ಯಾದಿ ವಿಷಯದಲ್ಲಿ ಒಂದೇ ರೀತಿಯಾಗಿರುವ ತೌಹಂಸಡೀಭಿಕೌ=ಆ ಹಂಸಡಿಭಿಕರು ಸಮೀಯತುಃ=ಬಂದರು ಹಂಸಡೀಭಿಕೌ ಎಂಬಲ್ಲಿ ಅಪಿವಾಪಂ ಮಪಂ ಕುರ್ಯಾತ್ ಸ್ತೋಭಂಗಂನಕಾರಯೇತ್ ಎಂಬ ವಚನದಿಂದ ಡಿಭಿಕನೇ ಡೀಭಿಕನು ಇನ್ನು ಮುಂದೆ ಅವನ ನಾಮಕ್ಕೆ ನಾಶ ಬರುವುದು ಸೂಚಿಸುವುದಕ್ಕೋಸ್ಕರ ಡಿಭಿಕ ಎಂಬ ನಾಮಕ್ಕೇನೇ ಡೀಭಿಕ ಎಂದು ವಿಕಾರ ಮಾಡಿರುವರು. ॥ ೨೪೩ ॥

ಸ ಬ್ರಹ್ಮದತ್ತನಾಮಕೋಽತ್ರ ತತ್ಪಿತಾಪ್ಯುಪಾಯಯೌ ।
ಸಮಾಗತೌಚಭೂತಕೌ ಶಿವಸ್ಯಯೌಪುರಃಸರೌ ॥೨೪೪ ॥

ಅತ್ರ = ಈ ಪುಷ್ಕರ ತೀರ್ಥದಲ್ಲಿ ತತ್ಪಿತಾಪಿ = ಆ ಹಸಂಡಿಭಿಕರ ತಂದೆಯಾದ ಸಃ=ಪ್ರಸಿದ್ಧನಾದ ಬ್ರಹ್ಮದತ್ತೋಽಪಿ=ಬ್ರಹ್ಮದತ್ತನೆಂದು ಹೆಸರುಳ್ಳವನೂ ಕೂಡ ಅಯಂಯೌ=ಬಂದನು ಶಿವಸ್ಯ = ರುದ್ರನ ಪುರಃಸರೌ= ಗಳುಗಳಾದ ಯೌ = ಯಾವ ಭೂತಕೌ = ಭೂತಗಳೋ ತಾವಪಿ=ಆ ಭೂತಗಳೂ ಕೂಡ ಸಮಾಗತೌ=ಬಂದವು ~~ಈ=ಬ್ರಹ್ಮದತ್ತನಿಗೆ ಎರಡು ಹೆಂಡಂದಿರು ಅದರಲ್ಲಿ ಜೇಷ್ಠಪತ್ನಿಯ ಮಗನು ಸೌಭಾಧಿಪತಿಯು ಅವನಿಗೆ ಸಾಲ್ವದೇಶಾಧಿಪತ್ಯವಿರುವುದರಿಂದ ಸಾಲ್ವನೆಂದು ಹೆಸರು ಕನಿಷ್ಠ ಹೆಂಡತಿಯ ಮಕ್ಕಳು ಹಂಸಡಿಭಿಕರು ಅವರಿಗೆ ಸಾಲ್ವದೇಶದ ಆಧಿಪತ್ಯವಿಲ್ಲದಿರುವುದರಿಂದ ಸಾಲ್ವ ಎಂಬ ನಾಮ ಅವರಿಗಿಲ್ಲ.~~ ॥ ೨೪೪ ॥

ವಿಚಕ್ರನಾಮಕೋಽಸುಃ ಪುರಾವಿರಿಂಚತೋವರಂ ।
ಅವಧ್ಯತಾಮಜೇಯತಾಮವಾಪ್ಯ ಬಾಧತೇಸುರಾನ್ ॥ ೨೪೫ ॥

ವಿಚಕ್ರನಾಮಕಃ=ವಿಚಕ್ರನೆಂದು ಹೆಸರುಳ್ಳ ಅಸುರಃ=ಅಸುರನು ಪುರಾ=ಹಿಂದೆ ವಿರಿಂಚತಃ=ಬ್ರಹ್ಮನಿಂದ ಅವಧ್ಯತಾಂ=ವಧ್ಯತ್ವಾಭಾವ ರೂಪವಾದ ಅಜೇಯತಾಂ=ಪರಾಜಯರಾಹಿತ್ಯರೂಪವಾದ ವರಂ=ವರವನ್ನು ಅವಾಪ್ಯ=ಹೊಂದಿ ಸುರಾನ್=ದೇವತೆಗಳನ್ನು ಬಾಧತೇ=ಪೀಡಿಸುತ್ತಾನೆ. ॥ ೨೪೫ ॥

ಸಚಾಭವತ್ತಯೋಃ ಸಖಾ ಸಹಾಯಕಾಮ್ಯಯಾಗಮತ್ ।
ಹಿಡಿಂಬರಾಕ್ಷಸೋಽಪಿಯಃ ಪುರಾಪಶಂಕರಾದ್ವರಂ ॥ ೨೪೬ ॥

ನಜೀಯಸೇನ ವಧ್ಯಸೇ ಕುತಶ್ಚನೇತಿ ತೋಷಿತಾತ್ ।
ಸ ಚೈತಯೋಃ ಸಖಾಭವತ್ಯ ಮಾಜಗಾಮು ತತ್ರ ಚ ॥ ೨೪೭ ॥

ತಯೋಃ=ಆ ಹಂಸಡಿಭಿಕರಿಗೆ ಸಖಾ=ಗೆಳೆಯನಾದ ಸಚ=ಆ ವಿಚಕ್ರನಾಪರೂ ಸಹಾಯಕಾಮ್ಯಯಾ=ಅವರಿಗೆ ಸಹಾಯ ಮಾಡುವ ಇಚ್ಛೆಯಿಂದ ಆಗಮತ್=ಬಂದನು. ಯಃ=ಯಾವ ಹಿಡಿಂಬರಾಕ್ಷಸೋಽಪಿ=ಹಿಡಿಂಬನೆಂಬರಾಕ್ಷಸನಾದರೂ ಪುರಾ=ಹಿಂದೆ ತೋಷಿತಾತ್=ತಪಸ್ಸಿನಿಂದ ಸಂತೋಷಗೊಳಿಸಲ್ಪಟ್ಟ ಶಂಕರಾತ್=ರುದ್ರನಿಂದ ಕುತಶ್ಚನ=ಯಾರಿಂದಲೂ ನಜೀಯಸೇ=ಪರಾಜಯಿಸಲ್ಪಡುವುದಿಲ್ಲ ನವಧ್ಯಸೇ=ಕೊಲ್ಲಲ್ಪಡುವುದಿಲ್ಲ ಇತಿ=ಎಂಬುದಾಗಿ ವರಂ = ವರವನ್ನು

ಪೊಂದಿದನೋ ಸಚ = ಆ ಹಿಡಿಂಬ ರಾಕ್ಷಸನೂ ಕೂಡ ಏತಯೋಃ=ಈ ಹಂಸಡಿಭಿಕರಿಗೆ ಸಖಾ=ಮಿತ್ರನೂ ಅಭವತ್= ಆದನು. ತತ್ರ = ಹಂಸಡಿಭಿಕರಿದ್ದಲ್ಲಿಗೆ ಸಮಾಜಗಾಮ=ಬಂದನು, ॥ ೨೪೬ ॥ ೨೪೭ ॥

ಅಕ್ಷೌಹಿಣೀದಶಾತ್ಮಕಂ ಬಲಂತಯೋರ್ಬಭೂವಹ ।
ವಿಚಕ್ರಗಂ ಷಡಾತ್ಮಕಂ ತಥೈಕಮೇವ ರಾಕ್ಷಸಂ ॥ ೨೪೮ ॥

ತಯೋಃ=ಆ ಪಸಂಡಿಭಿಕರಿಗೆ ಅಕ್ಷೌಹಿಣೀದಶಾತ್ಮಕಂ=ಹತ್ತು ಅಕ್ಷೌಹಿಣೀ ಸಂಖ್ಯಾ=ರೂಪವಾದ ಬಲಂ=ಸೈನ್ಯವು ಬಭೂವ=ಇತ್ತು ವಿಚಕ್ರಗಂ=ವಿಚಕ್ರನಿಗೆ ಇರತಕ್ಕ ಸೈನ್ಯವು ಷಡಾತ್ಮಕಂ=ಆರು ಅಕ್ಷೌಹಿಣೀ ಸಂಖ್ಯಾರೂಪವಾದದ್ದು ತಥಾ= ಹಾಗೆಯೇ ರಾಕ್ಷಸ್ಸಂ=ಹಿಡಿಂಬ ರಕ್ಷಸ್ಸಂಬಂಧಿಯಾದದ್ದು ಏಕಮೇವ=ಒಂದೇ ಅಕ್ಷೌಹಿಣೀ ಸಂಖ್ಯಾತ್ಮಕವು ॥ ೨೪೯ ॥

ದ್ವಿರಷ್ಟಸೇನಯಾಯುತೌ ಸಹೈಕಯೈವ ತೌ ನೃಪೌ ।
ಸವೀಯತುರ್ಯುಧೇಹರಿಂ ಹರಿಶ್ಚ ತೌ ಸಸಾರಹ ॥ ೨೪೯ ॥

ಸಹೈಕಯಾ=ಒಂದು ಅಕ್ಷೌಹಿಣಿಯಿಂದ ಕೂಡಿದ ದ್ವಿರಷ್ಟಸೇನಯಾ=ಹದಿನಾರು ಅಕ್ಷೌಹಿಣೀಸೈನ್ಯ ಹದಿನೇಳು ಅಕ್ಷೌಹಿಣೀ ಸೈನ್ಯದಿಂದ ಯುತೌ = ಕೂಡಿದ ತೌ ನೃಪೌ = ಆ ಹಂಸಡಿಭಿಕರು ಹರಿಂ = ಯುದ್ಧೇ = ಯುದ್ಧಕ್ಕಾಗಿ ಸವಿಯಯತುಃ = ಹೊಂದಿದರು ಹರಿಶ್ಚ = ಶ್ರೀಕೃಷ್ಣನೂ ಕೂಡ ತೌ = ಆ ಹ ಸಸಾರಹ = ಹೊಂದಿದನು. ॥ ೨೪೯ ॥

ಅಥದ್ವಯೋರ್ದ್ವಯೋರಭೂದ್ರಣೋಭಯಾನಕೋಮಹಾನ್ ।
ಹರಿರ್ವಿಚಕ್ರಮೇಯಿವಾನ್ ಬಲಶ್ಚ ಹಂಸಮುದ್ಧತಂ ॥ ೨೫೦ ॥

ಅಥ = ಅನಂತರ ಭಯಾನಕಃ = ಭಯಂಕರನಷ್ಟುಮಾಡುವ ಮಹಾನ್ = ಶ್ರೇಷ್ಠವಾದ ರಣಃ = ಯುದ್ಧವು ದ್ವಯೋಃ ದ್ವಯೋಃ = ಇಬ್ಬಿಬ್ಬರಿಗೆ ಅಭೂತ್ = ಆಯಿತು ಹರಿಃ = ಶ್ರೀಕೃಷ್ಣನು ವಿಚಕ್ರಂ= ವಿಚಕ್ರನನ್ನು ಏಯಿವಾನ್= ಹೊಂದಿದನು. ಬಲಶ್ಚ ಬಲರಾಮನೂ ಕೂಡ ಉದ್ಧತಂ = ಮದಭರಿತನಾದ ಹಂಸಂ = ಹಂಸನೆಂಬ ಅಸುರನನ್ನು ಏಯಿವಾನ್ = ಹೊಂದಿದನು. ॥ ೨೫೦ ॥

ತದಾಸ್ಯ ಚಾನುಜಂ ಯಯೌ ಶಿನಿಪ್ರವೀರ ಆಯುಧೀ ।
ಗದಶ್ಚ ನಾಮತೋಽನುಜೋಹರೇಃ ಸರೋಹಿಣೀಸುತಃ ॥ ೨೫೧ ॥

ಶಿನಿಪ್ರವೀರಃ = ಸಾತ್ಯಕಿಯು ಆಯುಧೀಸನ್ = ಆಯುಧವುಳ್ಳವನಾಗಿ ತದಾ = ಆಗ ಅಸ್ಯ = ಈ ಹಂಸನ ಅನುಜಂ = ತಮ್ಮನಾದ ಡಿಭಿಕನನ್ನು ಯಯೌ = ಹೋದನು. ಹರೇಃ = ಶ್ರೀಕೃಷ್ಣನ ಅನುಜಃ = ತಮ್ಮನಾದ ನಾಮತಃ = ಹೆಸರಿನಿಂದ ಗದಶ್ಚ = ಗದನೆಂಬವನು ಯಃ = ಯಾವನೋ ಸಃ = ಅವನು ರೋಹಿಣೀಸುತಃ = ವಸುದೇವ ಪತ್ನಿಯಾದ ರೋಹಿಣಿಯ ಮಗನು. ॥ ೨೫೧ ॥

ಪುರಾ ಸ ಚಂಡಕೋ ಗಣೋ ಹರೇರ್ನಿವೇದಿತಾಶನಃ ।
ಸಮಾಹ್ವಯದ್ರಣಾಯ ವೈ ತಯೋಃ ಸ ತಾತಮೇವಹಿ ॥ ೨೫೨ ॥

ಪುರಾ = ಮೊದಲು ಸಃ = ಆ ಗದನು ಗಣಃ = ಚಂಡಪ್ರಚಂಡ ಜಯವಿಜಯಾದಿ ದ್ವಾರಪಾಲಕರಲ್ಲಿ "ಪ್ರಥಮಂ ಗಣ್ಯತೇ ಇತಿ ಗಣಃ = ಮೊದಲಿಗನಿಸಿಕೆ ಮಾಡಲ್ಪಡತಕ್ಕ ಚಂಡಕಃ = ಚಂಡನೆಂಬ ಹರಿಯೂ ಪಾರ್ಷದನು ಹರೇಃ=ವೈಕುಂಠ ದಿಂದ ಹೊರಗೆ ಬರುವಿರುವ ಕ್ರೀಡೆಯಿಂದ ಊಟ ಮಾಡಲು ಇಚ್ಛಿಸುವ ಪರಮಪುರುಷನಿಗೆ ನಿವೇದಿತಾಶನಃ = ಸಮರ್ಪಿಸಲ್ಪಟ್ಟ ವಧೂಓದನ ಉಳ್ಳವನು. ಸಃ = ಆ ಗದನು ತಯೋಃ=ಆ ಹಂಸಡಿಭಿಕರ ತಾತಮೇವ=ತಂದೆಯಾದ ಬೃಹ್ಮದತ್ತನನ್ನೇ ಯುದ್ಧಕ್ಕೋಸ್ಕರ ಸಮಾಹ್ವಯತ್ = ಕರೆದನು. ॥ ೨೫೨ ॥

ಅಕ್ಷೌಹಿಣೀತ್ರಯಾನ್ವಿತಾಃ ಸಮಸ್ತಯಾದವಾಸ್ತದಾ ।
ತ್ರಿಲೋಚನಾನುಗೌಚ ತೌನ್ಯವಾರಯನ್ಸರಾಕ್ಷಸೌ ॥ ೨೫೩ ॥

ಅಕ್ಷೌಹಿಣೀತ್ರಯಾನ್ವಿತಾಃ=ಮೂರು ಅಕ್ಷೌಹಿಣೀ ಸೈನ್ಯದಿಂದ ಕೂಡಿದ ಸಮಸ್ತ ಯಾದವಾಃ=ಎಲ್ಲಾ ಯಾದವರು ತದಾ=ಆ ದ್ವಂದ್ವಯುದ್ಧ ಸಮಯದಲ್ಲಿ ಸರಾಕ್ಷಸೌ=ಹಿಡಿಂಬ ರಾಕ್ಷಸನಿಂದ ಕೂಡಿದ ತ್ರಿಲೋಚನಾನುಗೌ=ರುದ್ರದೇವರ ಸೇವಕರಾದ ತೌ=ಆ ಭೂತಗಳನ್ನು ನ್ಯವಾರಯನ್=ತಡೆದರು. ॥ ೨೫೩ ॥

ಹರಿರ್ವಿಚಕ್ರಮೋಜಸಾ ಮಹಾಸ್ತ್ರಶಸ್ತ್ರವರ್ಷಿಣಂ ।
ವಿವಾಹನಂ ನಿರಾಯುಧಂ ಕ್ಷಣಾಚ್ಚಕಾರಸಾಯಕೈಃ ॥ ೨೫೪ ॥

ಹರಿಃ=ಶ್ರೀಕೃಷ್ಣನು ಓಜಸಾ=ಸಾಮರ್ಥ್ಯದಿಂದ ಮಹಾಸ್ತ್ರಶಸ್ತ್ರವರ್ಷಿಣಂ=ಶ್ರೇಷ್ಠ ಅಸ್ತ್ರ ಶಸ್ತ್ರಗಳನ್ನ ಸುರಿಸುತಕ್ಕ ವಿಚಕ್ರಂ=ವಿಚಕ್ರನನ್ನ ಕ್ಷಣಾತ್=ಕೂಡಲೇ ಸಾಯಕೈಃ=ಬಾಣಗಳಿಂದ ನಿರಾಯುಧಂ=ಆಯುಧವಿಲ್ಲದವನನ್ನಾಗಿಯೂ ವಾಹನವಿಲ್ಲದವನನ್ನಾಗಿಯೂ ಚಕಾರ=ಮಾಡಿದನು. ॥ ೨೫೪ ॥

ಪುನಶ್ಚ ಪಾದಪಾನ್ ಗಿರೀನ್ಪ್ರಮುಂಚತೋsರಿಣಾ ರಿಹಾ ।
ಶಿತೋ ಜಹಾರ ದೇವತಾ ವಿನೇದುರತ್ರ ಹರ್ಷಿತಾಃ ॥ ೨೫೫ ॥

ರಿಹಾ=ಶತ್ರುಗಳನ್ನು ಸಂಹರಿಸುವ ಶ್ರೀಕೃಷ್ಣನು ಗಿರೀನ್=ಪರ್ವತಗಳನ್ನೂ ಪಾದಪಾನ್=ವೃಕ್ಷಗಳನ್ನೂ ಪುನಶ್ಚ=ಕೂಡ ಪ್ರಮುಂಚತಃ=ಬಿಳಿಗಿರಿಸತಕ್ಕ ವಿಚಕ್ರನ ಶಿರಃ=ತಲೆಯನ್ನು ಅರಿಣಾ=ಚಕ್ರದಿಂದ ಜಹಾರ=ತಂಡರಿಸಿದನು. ಸಮಯದಲ್ಲಿ ಹರ್ಷಿತಾಃ=ಸಂತೋಷ್ಟರಾದ ದೇವತಾಃ=ದೇವತೆಗಳು ವಿನೇದುಃ=ಜಯ ಶಬ್ದವನ್ನು ಕರೆದರು. ॥ ೨೫೫ ॥

ಪ್ರಸೂನವರ್ಷಿಭಿಸ್ತುತಶ್ಚತುರ್ಮುಖಾದಿಭಿಃ ಪ್ರಭುಃ ।
ಸಸಾತ ತೌ ಹರಾನುಗೌ ಪ್ರಭಕ್ಷ್ಯಕೌ ಸ ಸಾತ್ವತಾಂ ॥ ೨೫೬ ॥

ಪ್ರಸೂನ ವರ್ಷಿಭಿಃ=ಪುಷ್ಪವೃಷ್ಟಿಯನ್ನು ಮಾಡುವ ಚತುರ್ಮುಖಾದಿಭಿಃ=ಬ್ರಹ್ಮನೇ ಮೊದಲಾಗಿ ಉಳ್ಳ ದೇವತೆಗಳಿಂದ ಸ್ತುತಃ=ಸ್ತೋತ್ರಮಾಡಿಸಿಕೊಳ್ಳಲ್ಪಟ್ಟ ಪ್ರಭುಃ=ಸರ್ವಾರ್ಥನಾದ ಸಃ=ಶ್ರೀಕೃಷ್ಣನು ಸಾತ್ವತಾಂ=ಯಾದವರ ಸಮೂಹಂ=ಗುಂಪನ್ನು ಪ್ರಭಕ್ಷಕೌ=ತಿನ್ನತಕ್ಕ ಹರಾನುಗೌ=ರುದ್ರನ ಭೃತ್ಯರಾದ ತೌ=ಆ ಭೂತಗಳನ್ನು ಸಸಾತ=ಹೊಂದಿದನು ॥ ೨೫೬ ॥

ಸಮಸ್ತಯಾದವಾನ್ರಣೇ ವಿಧೂಯ ತೌ ಜನಾರ್ದನಂ ।
ಉಪೇತ್ಯ ಚಾಂಸಗೌ ಹರೇರದಂಶತಾಂ ಸುಕರ್ಣಕೌ ॥ ೨೫೭ ॥

ತೌ=ಆ ಭೂತಗಳು ಸಮಸ್ತಯಾದವಾನ್=ಎಲ್ಲಾ ಯಾದವರನ್ನು ರಣೇ=ಯುದ್ಧದಲ್ಲಿ ವಿಧೂಯ=ಓಡಿಸಿ ಜನಾರ್ದನಂ=ಶ್ರೀಕೃಷ್ಣನನ್ನು ಉಪೇತ್ಯ=ಹೊಂದಿ ಹರೇಃ=ಶ್ರೀಕೃಷ್ಣನ ಅಂಸಗೌ=ಸಂತೌ=ಭುಜಗಳಲ್ಲಿದ್ದವರಾಗಿ ಸುಕರ್ಣಕೌ=ಭೇದಭೇದಾದಿಗಳಿಲ್ಲದಿರುವುದರಿಂದ ಸಪೂಚೀನಗಳಾದ ಕಪಿಗಳನ್ನು ಅದಂಶತಾಂ=ಕಚ್ಚಿದವು. ॥ ೨೫೭ ॥

ಸ ತೌ ಭುಜಪ್ರವೇಗತೋ ವಿಧಾಯ ಶಂಕರಾಲಯೇ ।
ನ್ಯಪಾತಯದ್ಬಲಾರ್ಣವೋsಮಿತಸ್ಯ ಕಿಂತದುಚ್ಯತೇ ॥ ೨೫೮ ॥

ಬಲಾರ್ಣವಃ=ಸಾಮರ್ಥ್ಯದಿಂದ ಸಮುದ್ರದಂತಿರುವ ಸಃ=ಆ ಶ್ರೀಕೃಷ್ಣನು ಭುಜಪ್ರವೇಗತಃ=ಭುಜಗಳ ಚಲನದ ವೇಗದಿಂದ ತೌ=ಆ ಭೂತಗಳನ್ನು ವಿಧೂಯ=ಭುಜದಿಂದ ಎಬ್ಬಿಸಿ ಶಂಕರಾಲಯೇ=ರುದ್ರನ ಮಂದಿರವಾದ ಕೈಲಾಸದಲ್ಲಿ

ಸ್ಮಾಪಾತಯತ್=ಬಿಸಾಡಿದನು. ಅಮಿತಸ್ಯ=ಬಲಾದಿಗಳಿಂದ ಅಪರಿಮಿತನಾದ ಶ್ರೀಕೃಷ್ಣನಿಗೆ ತತಃ=ಕೈಲಾಸದಲ್ಲಿ ಆ ಭೂತಗಳನ್ನು ಬಿಸಾಡುವುದು ಕಿಮುಚ್ಯತೇ=ಆಶ್ಚರ್ಯವೆಂದು ಏನು ಹೇಳಲ್ಪಡುತ್ತದೆ? ಆಶ್ಚರ್ಯವೆಂದು ಹೇಳಲ್ಪಡುವುದಿಲ್ಲ ॥೨೫೮॥

ಪ್ರಭಕ್ಷಯಂತಮೋಜಸಾ ಹಿಡಿಂಬಮುದ್ಧತಂ ಬಲಂ ।
ಸಹೋಗ್ರಸೇನಕೋ ಯಯೌ ಪಿತಾ ಹರೇಃ ಶರಾನ್ ಕ್ಷಿಪನ್ ॥ ೨೫೯ ॥

ಸಹೋಗ್ರಸೇನಕಃ=ಉಗ್ರಸೇನನಿಂದ ಕೂಡಿದ ಹರೇಃ=ಶ್ರೀಕೃಷ್ಣನ ಪಿತಾಃ=ತಂದೆಯಾದ ವಸುದೇವನು ಬಲಂ=ಯಾದವರ ಸೈನ್ಯವನ್ನು ಓಜಸಾ=ಸಾಮರ್ಥ್ಯದಿಂದ ಪ್ರಭಕ್ಷಯಂತಂ=ತಿನ್ನತಕ್ಕ ಉದ್ಧತಂ=ಮತ್ತನಾದ ಹಿಡಿಂಬಂ=ಹಿಡಿಂಬನನ್ನು ಶರಾನ್ = ಬಾಣಗಳನ್ನು ಕ್ಷಿಪನ್ಸನ್ = ಬಿಡತಕ್ಕವನಾಗಿ ಯಯೌ=ಹೋದನು. ॥ ೨೫೯ ॥

ತಯೋರಥೌ ಸಹಾಯುದೌ ಪ್ರಭಕ್ಷ್ಯರಾಕ್ಷಸೋಬಲೀ ।
ಪ್ರಗೃಹ್ಯ ತಾವಭಾಷತ ಪ್ರಯಾತಮಾಶು ಮೇ ಮುಖಂ ॥ ೨೬೦ ॥

ಬಲೀ=ಬಲಿಷ್ಠನಾದ ರಾಕ್ಷಸಃ=ಹಿಡಿಂಬನು ತಯೋಃ=ಆ ಉಗ್ರಸೇನ ವಸುದೇವರ ಸಹಾಯಂದಗಳಿಂದ ಕೂಡಿರುವ ರಥೌ=ರಥಗಳನ್ನು ಪ್ರಭಕ್ಷ್ಯ=ನುಂಗಿ ತೌ=ಆ ಉಗ್ರಸ್ತೇನ ವಸುದೇವರನ್ನು ಪ್ರಗೃಹ್ಯ=ಕೈಕೊಂಡು ಮೇ=ನನ್ನ ಮುಖಂ=ವದನವನ್ನು ಆಶು=ಬೇಗನೇ ಪ್ರಯಾತಂ = ಪ್ರವೇಶಿಸಿರಿ ಇತಿ=ಎಂದು ಹೇಳಿದನು. ॥ ೨೬೦ ॥

ತದಾಗದಾವರಾಯುಧಃ ಸಹೈವ ಹಂಸಭೂಭೃತಾ ।
ಪ್ರಯುಧ್ಯಮಾನ ಆಯಯೌ ವಿಹಾಯ ತಂ ಹಲಾಯುಧಃ ॥ ೨೬೧ ॥

ತದಾ=ಹಿಡಿಂಬನು ವಸುದೇವ ಉಗ್ರಸೇನರನ್ನು ಹರಿತು ಹೇಳುವ ಸಮಯದಲ್ಲಿ ಗದಾವರಾಯಂದಃ = ಗಧಾಯೇ ಉತ್ಕೃಷ್ಟ ಆಯಂಧವಾಗಿ ಉಳ್ಳ ಹಂಸಭೂಭೃತಾ=ಹಂಸ ರಾಜನಿಂದ ಸಹೈವ = ಕೂಡಿಕೊಂಡೇ ಪ್ರಯುಂಧ್ಯಮಾನಃ = ಚೆನ್ನಾಗಿ ಯುದ್ಧ ಮಾಡತಕ್ಕ ಹಲಾಯುಧಃ=ಬಲರಾಮನು ತಂ=ಆ ಹಂಸವನ್ನು ವಿಹಾಯಂ=ಬಿಟ್ಟು ಆಯಂಯೌ=ಹಿಡಿಂಬನ ಸಮೀಪಕ್ಕೆ ಬ ದನು ॥ ೨೬೧ ॥

ತಮಾಗತಂ ಸಮೀಕ್ಷ್ಯ ತೌ ವಿಹಾಯ ರಾಕ್ಷಸಾಧಿಪಃ ।
ಉಪೇತ್ಯ ಮುಷ್ಟಿನಾಹನದ್ಬಲಂ ಸ ವಕ್ಷಸಿ ಕ್ರುಧಾ ॥ ೨೬೨ ॥

ರಾಕ್ಷಸಾಧಿಪಃ=ರಾಕ್ಷಸರಿಗೆ ರಾಜನಾದ ಹಿಡಿಂಬನು ಆಗತಂ=ಬಂದಿರುವ ತಂ=ಆ ಬಲರಾಮನನ್ನು ಸಮೀಕ್ಷ್ಯ=ನೋಡಿ ತೌ=ಆ ಉಗ್ರಸೇನ ವಸುದೇವರನ್ನು ವಿಹಾಯಂ = ಬಿಟ್ಟು ಬಲಂ=ಬಲರಾಮನನ್ನು ಉಪೇತ್ಯ=ಹೊಂದಿ ಮುಷ್ಟಿನಾ=ಮುಷ್ಟಿಯಿಂದ ಅಹನತ್=ಹೊಡೆದನು. ಸಃ=ಆ ಬಲರಾಮನು ತಂ=ಆ ರಾಕ್ಷಸನನ್ನು ಕ್ರುಧಾ = ಕೋಪದಿಂದ ವಕ್ಷಸಿ=ಎದೆಯಲ್ಲಿ ಅಹನತ-=ಹೊಡೆದನು. ॥ ೨೬೨ ॥

ಉಭೌ ಹಿ ಬಾಹುಶಾಲಿನಾವಯುಧ್ಯತಾಂ ಚ ಮುಷ್ಟಿಭಿಃ ।
ಚಿರಂ ಪ್ರಯುಧ್ಯ ತಂ ಬಲೋಗ್ರಹಿತ್ಸ ಜಂಘಯೋರ್ವಿಭುಃ ॥ ೨೬೩ ॥

ಬಾಹುಶಾಲಿನೌ=ಭುಜಗಳಿಂದ ಶೋಭಿಸುವ ಉಭೌ=ಇಬ್ಬರಾದ ರಾಮ ಹಿಡಿಂಬರು ಮುಷ್ಟಿಭಿಃ=ಮುಷ್ಟಿಗಳಿಂದ ಆಯುಂಧ್ಯತಾಂ=ಯುದ್ಧ ಮಾಡಿದರು. ವಿಭುಃ=ಸಮರ್ಥನಾದ ಸ ಬಲಃ=ಆ ಬಲರಾಮನು ಚಿರಂ=ಬಹುಕಾಲ ಪ್ರಯುಂಧ್ಯ=ಯುದ್ಧ ಮಾಡಿ ತಂ=ಆ ಹಿಡಿಂಬನನ್ನು ಜಂಘಯೋಃ=ಮೊಣಕಾಲುಗಳಲ್ಲಿ ಅಗ್ರಹೀತ್=ಹಿಡಿದನು. ॥ ೨೬೩ ॥

ಅಥೈನಮುದ್ಧತಂ ಬಲಾದ್ಬಲಃ ಸದೂರ ಆಕ್ಷಿಪತ್ ।
ಪಪಾತಪಾಡಯೋಜನೇ ಸನಾಜಗಾಮು ತಂ ಪುನಃ ॥ ೨೬೪ ॥

ಅಥ=ಅನಂತರ ಸ ಬಲಃ =ಆ ಬಲರಾಮನು ಉದ್ಧತಂ=ಗವಿಷ್ಠನಾದ ಏನಂ=ಈ ಹಿಡಿಂಬನನ್ನು ಬಲಾತ್= ಸಾಮರ್ಥ್ಯದಿಂದ ದೂರೇ = ದೂರ ಪ್ರದೇಶದಲ್ಲಿ ಆಕ್ಷಿಪತ್=ಬಿಸಾಡಿದನು. ಸಃ=ಆ ಹಿಡಿಂಬಾಸುರನು ಪಾದಯೋಜನೇ= ಪಾದದಿಂದ ಕೂಡಿದ ಒಂದು ಯೋಜನದಲ್ಲಿ ಅಂದರೆ ಪುಷ್ಕರ ಪ್ರದೇಶದಿಂದ ಐದು ಕೋಶದಲ್ಲಿ ಪಪಾತ=ಬಿದ್ದನು. ಸಃ=ಆ ಹಿಡಿಂಬನು ಪುನಃ=ತಿರುಗಿ, ತಂ=ಆ ಬಲರಾಮನನ್ನು ನಾಜಗಾಮ =ಹೋಗಲಿಲ್ಲ. ॥ ೬೪ ॥

ವಿಹಾಯಸೈನಿಕಾಂಶ್ಚತೌ ನೃಪೌಯಯೌವನಾಯಸಃ ।
ನಿಹತ್ಯತಸ್ಯರಾಕ್ಷಸಾನ್ ಹಲಾಯುಧೋನನಾದಹ ॥ ೨೬೫ ॥

ಸಃ=ಆಹಿಡಿಂಬಾಸುರನು ಸೈನಿಕಾನ್=ತನ್ನ ಸೈನಿಕರನ್ನು ತೌನೃಪೌಚ=ಆ ಹಂಸಡಿಭಿಕರನ್ನೂ ಕೂಡ ವಿಹಾಯಃ= [illegible]ಟಿಂ ವನಾಯು=ಕಾಡಿಗೆ ಯಯೌ=ಹೋದನು ಹಲಾಯುಧಃ=ಬಲರಾಮನು ತಸ್ಯ=ಆ ಹಿಡಿಂಬನ ರಾಕ್ಷಸಾನ್=ರಾಕ್ಷಸ [illegible]—ಕೊಂದು ನನಾದ=ಗರ್ಜಿಸಿದನು ಹ=ಪ್ರಸಿದ್ಧ. ॥ ೨೬೫ ॥

ಗದಸ್ತುಸಾಲ್ವಭೂಭೃತಾ ವಯೋಗತೇನಯೋಧಯನ್ ।
ವಿಪಾಹನಂ ನಿರಾಯುಧಂ ಚಕಾರಸೋऽಪ್ಯಪಾದ್ರವತ್ ॥ ೨೬೬ ॥

[illegible]ದಸ್ತು=ಗದನಾದರೂ ವಯೋಗತೇನ=ವಯಂಕನಾದ ಸಾಲ್ವಭೂಭೃತಾ=ಸಾಲ್ವ ದೇಶಕ್ಕೆ ಅಧಿಪತಿಯಾದ [illegible]ನಿಂದ ಯೋಧಯನ್ಸನ್=ಯುದ್ಧ ಮಾಡತಕ್ಕವನಾಗಿ ತಂ=ಅವನನ್ನು ವಿವಾಹನಂ=ವಾಹನರಹಿತನನ್ನಾಗಿ [illegible]ಧಂ = ಆಯುಧವಿಲ್ಲದವನನ್ನಾಗಿ ಚಕಾರ=ಮಾಡಿದನು ಸೋऽಪಿ=ಆ ಬ್ರಹ್ಮದತ್ತನಾದರೂ ಅಪಾದ್ರವತ್=ಓಡಿ [illegible]ನು. ॥ ೨೬೬ ॥

ಸುತೇನತಸ್ಯಕನ್ಯಸಾ ಯುಯೋಧಸಾತ್ಯಕೀರಥೀ ।
ವರಾಸ್ತ್ರಶಸ್ತ್ರಯೋಧಿನೌ ವಿಜಹ್ರತುಶ್ಚತಾವುಭೌ ॥ ೨೬೭ ॥

ರಥೀ=ರಥಿಕನಾದ ಸಾತ್ಯಕಿಃ = ಸಾತ್ಯಕಿಯು ತಸ್ಯ=ಆ ಬಹ್ಮದತ್ತನ ಕನ್ಯಸಾ=ಕನಿಷ್ಠನಾದ ಡಿಭಿಕನಿಂದ ಯುಯೋಧ=ಯುದ್ಧ ಮಾಡಿದನು ಉಭೌ=ಇಬ್ಬರಾದ ತೌ=ಆ ಸಾತ್ಯಕಿ ಮತ್ತು ಡಿಭಿಕರು ವರಾಸ್ತ್ರಶಸ್ತ್ರಯೋಧಿನೌಸಂತೌ= ಉತ್ತಮ ಅಸ್ತ್ರಶಸ್ತ್ರಗಳಿಂದ ಯುದ್ಧಮಾಡತಕ್ಕವರಾಗಿ ವಿಜಹ್ರತುಃ = ಕ್ರೀಡಿಸಿದರು. ॥ ೨೬೭ ॥

ಚಿರಂಪ್ರಯುಧ್ಯಸಾತ್ಯಕಿಃ ಸಹಂಸಕನ್ಯಸಾಬಲೀ ।
ಶತಂಸಪಂಚಕಂರಣೇ ಚಕರ್ತತಸ್ಯಧನ್ವಿನಾಂ ॥ ೨೬೮ ॥

ಬಲೀ = ಬಲಿಷ್ಠನಾದ ಸಸಾತ್ಯಕಿಃ = ಆ ಸಾತ್ಯಕಿಯು ಹಂಸಕನ್ಯಸಾ = ಹಂಸನ ತಮ್ಮನಾದ ಡಿಭಿಕನಿಂದ ಚಿರಂ= ಬಹುಕಾಲ ಪ್ರಯುಧ್ಯ = ಯುದ್ಧಮಾಡಿ ತಸ್ಯ = ಆ ಡಿಭಿಕನ ಧನ್ವಿನಾಂ = ಧನುರ್ಧಾರಿಗಳ ಸಪಂಚಕಂ = ಐದರಿಂದ ಕೂಡಿದ ಶತಂ = ನೂರನ್ನು ಚಕರ್ತ = ಕತ್ತರಿಸಿದನು. ॥ ೨೬೮ ॥

ಸಖಡ್ಗಚರ್ಮಭೃದ್ರಣೇऽಭ್ಯಯಾತ್ತು ತ್ಸುತಾತ್ಮಜಂ ಶಿನೇಃ ।
ಸಚೈನಮಭ್ಯಯಾತ್ತಥಾ ವರಾಸಿಚರ್ಮಭೃದ್ವಿಭೀಃ ॥ ೨೬೯ ॥

ಖಡ್ಗಚರ್ಮಭೃತ್ = ಖಡ್ಗಚರ್ಮಗಳನ್ನು ಧರಿಸಿದ ಸಃ = ಆ ಡಿಭಿಕನು ಶಿನೇ=ಶಿನಿಯ ಮತ್ತು ಸುತಾತ್ಮಜಂ = ಮಗ ನಾದ ಸತ್ಯಕನ ಮಗನಾದ ಸಾತ್ಯಕಿಯನ್ನು ಅಭ್ಯಯಾತ್ = ಹೊಡೆದಿದನು ತಥಾ = ಹಾಗೆಯೇ ವರಾಸಿಚರ್ಮಭೃತ್=

ಪ್ರಭುಃ = ಸಮರ್ಥನಾದ ಶ್ರೀಕೃಷ್ಣನು ಪರೇದಿನೇ=ಮರುದಿನದಲ್ಲಿ ಪ್ರವಿದ್ರುತೌ = ಓಡಿ ಹೋದ ನೃಪಾತ್ಮಜೌ= ರಾಜ ಪುತ್ರರಾದ ಹಂಸ ಡಿಭಿಕರನ್ನು ಯಮುಸ್ಪಸುಃ=ಯಮುನ ತಂಗಿಯಾದ ಯವಂಯನಾ ನದಿಯ ತಟೇ=ದಡದಲ್ಲಿ ಪೃಷ್ಠತಃ= ಹಿಂಬದಿಯಿಂದ ಸಮಾಸಸಾದ=ಹೊಂದಿದನು. ॥ ೨೭೫ ॥

ಸರೌಹಿಣೇಯ ಸಂಯುತಃ ಸಮನ್ವಿತಶ್ಚ ಸೇನಯಾ ।
ಸ್ವಶಿಷ್ಟಸೇನಯಾ ವೃತೌ ಪಲಾಯಿನಾ ವವಾರಯತ್ ॥ ೨೭೬ ॥

ರೌಹಿಣೇಯಃಸಂಯುತಃ=ಬಲರಾಮನಿಂದ ಕೂಡಿದ ಸೇನಯಾಚ=ತನ್ನ ಸೈನ್ಯದಿಂದಲೂ ಸಮನ್ವಿತಃ= ಕೂಡಿದ ಸಃ=ಆ ಶ್ರೀಕೃಷ್ಣನು ಸ್ವಶಿಷ್ಟಸೇನಯಾ = ತಮ್ಮ ಉಳಿದ ಸೇನೆಯಿಂದ ವೃತೌ=ಕೂಡಿರುವ ಪಲಾಯಿನೌ=ಓಡಿ ಹೋಗುವ ಹಂಸಡಿಭಿಕರನ್ನು ಅವಾರಯತ್=ತಡೆದನು. ॥ ೨೭೬ ॥

ನಿವೃತ್ಯತೌ ಸ್ವಸೇನಯಾ ಶರೋತ್ತಮೈರ್ವವರ್ಷತುಃ ।
ಸುಕೋಪಿತೌ ಸಮಸ್ತಶೋ ಯದೂನವಾರ್ಯಪೌರುಷೌ ॥ ೨೭೭ ॥

ವಾರ್ಯಪೌರುಷೌ=ತಡೆಯಲು ಅಶಕ್ಯವಾದ ಪರಾಕ್ರಮ ಉಳ್ಳ ಸುಕೋಪಿತೌ=ಅತಿ ಕೋಪದಿಂದ ಕೂಡಿದ ಡಿಭಿಕರು ಸ್ವಸೇನಯಾ ನಿವೃತ್ಯ=ತಮ್ಮ ಸೇನೆಯಿಂದ ಕೂಡಿಕೊಂಡು ಹಿಂತಿರುಗಿ ಶರೋತ್ತಮೈಃ=ಶ್ರೇಷ್ಠ ಸಮಸ್ತಶಃ=ಎಲ್ಲಾ ಯದೂನ್=ಯಾವವರನ್ನು ಅವಾರ್ಯ=ತಡೆದು ವವರ್ಷತುಃ=ಮಳೆಗರಿಸಿದರು. ॥೨೭೭॥

ಅಥಾ ಸಸಾದ ಹಂಸ ಕೋ ಹಲಾಯುಧಂ ಮಹಾಧನುಃ ।
ಅನಂತರೋಽಸ್ಯ ಸಾತ್ಯಕಿಂ ಗದಂಚ ಸರ್ವಸೈನಿಕಾನ್ ॥ ೨೭೮ ॥

ಅಥ=ಅನಂತರ ಮಹಾಧನುಃ=ಶ್ರೇಷ್ಠಧನುಸ್ಸುಳ್ಳ ಹಂಸಕಃ=ಹಂಸನು ಹಲಾಯುಧಂ=ಬಲರಾಮನನ್ನು ಸ = ಹೊಂದಿದನು. ಅಸ್ಯ=ಈ ಹಂಸನ ಅನಂತರಃ=ತಮ್ಮನಾದ ಡಿಭಿಕನು ಸಾತ್ಯಕಿಂ=ಸಾತ್ಯಕಿಯನ್ನು ಗದಂ ಚ= ಗದನನ್ನು ಸರ್ವಸೈನಿಕಾನ್=ಎಲ್ಲಾ ಯಾದವರನ್ನೂ ಕೂಡ ಅಸಸಾದ=ಹೊಂದಿದನು. ॥ ೨೭೮ ॥

ಸ ಸಾತ್ಯಕಿಂ ನಿರಾಯುಧಂ ವಿವಾಹನಂ ವಿವರ್ಮಕಂ ।
ವ್ಯಧಾದ್ಗದಂ ಚ ತೌ ರಣಂ ವಿಹಾಯ ಹಾಪ ಜಗ್ಮತುಃ ॥ ೨೭೯ ॥

ಸಃ=ಆ ಡಿಭಿಕನು ಸಾತ್ಯಕಿಂ=ಸಾತ್ಯಕಿಯನ್ನು ಗದಂಚ=ಗದನನ್ನೂ ಕೂಡ ನಿರಾಯುಧಂ=ಆಯುಧವಿಲ್ಲದವನನ್ನಾಗಿ ವಿವಾಹನಂ=ವಾಹನರಹಿತನನ್ನಾಗಿ ವಿವರ್ಮಕಂ=ಕವಚಹೀನನನ್ನಾಗಿಯೂ ವ್ಯಧಾತ್=ಮಾಡಿದನು, ತೌ=ಆ ಸಾತ್ಯಕಿ, ಗದರಿಬ್ಬರು ರಣಂ=ಯುದ್ಧವನ್ನು ವಿಹಾಯ=ಬಿಟ್ಟು ಅಪಜಗ್ಮತುಃ=ಹೋದರು. ॥ ೨೭೯ ॥

ವಿಧೂಯ ಸೈನಿಕಾಂಶ್ಚ ಸಃ ಪ್ರಗೃಹ್ಯ ಚಾಪಮಾತತಂ ।
ಹರಿಂಜಗಾಮಚೋನ್ನದನ್ ಮಹಾಸ್ತ್ರಶಸ್ತ್ರ ವರ್ಷಣಃ ॥ ೨೮೦ ॥

ಸಃ=ಆ ಡಿಭಿಕನು ಸೈನಿಕಾನ್=ಯಾದವರನ್ನು ವಿಧೂಯ=ಓಡಿಸಿ ಆತತಂ=ಹಗ್ಗದಿಂದ ಕಟ್ಟಲ್ಪಟ್ಟ ಚಾಪಂ= ಧನುಸ್ಸನ್ನು ಪ್ರಗೃಹ್ಯ = ಹಿಡಿದುಕೊಂಡು ಉನ್ನದನ್=ಜೋರಾಗಿ ಗರ್ಜಿಸುತ್ತಾ ಮಹಾಸ್ತ್ರಶಸ್ತ್ರ ವರ್ಷಣಃಸನ್=ಶ್ರೇಷ್ಠ ಅಸ್ತ್ರ ಶಸ್ತ್ರಗಳನ್ನು ಸುರಿಸುವವನಾಗಿ ಹರಿಂ = ಶ್ರೀಕೃಷ್ಣನನ್ನು ಜಗಾಮ=ಹೊಂದಿದನು. ॥ ೨೮೦ ॥

ತಮಾಶು ಕೇಶವೋಽರಿಹಾ ಸಮಸ್ತ ಸಾಧನೋಜ್ಝಿತಂ ।
ಕ್ಷಣಾಚ್ಚಕಾರ ಸೋಽಪ್ಯಗಾದ್ವಿ ಸೃಜ್ಯ ತಂ ಹಲಾಯುಧಂ ॥ ೨೮೧ ॥

ತ್ರೇಷ್ಠಳಾದ ಖಡ್ಗ ಚರ್ಮಗಳನ್ನು ಧರಿಸಿದ ವಿಭೀಃ=ಭಯರಹಿತನಾದ ಸಃ=ಆ ಸಾತ್ಯಕಿಯು ಏನಂ=ಈ ಡಿಭಿಕನನ್ನು ಅಭ್ಯಯಾತ್=ಹೊಂದಿದನಂ. ॥ ೨೬ ॥

ದ್ವಿಷೋಡಶ ಪ್ರಭೇದಕಂ ವರಾಸಿಯುದ್ಧ ಮಶ್ರಮೌ ।
ಪ್ರದರ್ಶ್ಯ ನಿರ್ವಿಶೇಷಕಾವುಭೌ ವ್ಯವಸ್ಥಿತೌ ಚಿರಂ ॥ ೨೭೦ ॥

ಅಶ್ರಮೌ=ಆಯಾಸ ಇಲ್ಲದ ಉಭೌ=ಇಬ್ಬರಾದ ಸಾತ್ಯಕಿ ಡಿಭಿಕರು ದ್ವಿಷೋಡಶಪ್ರಭೇದಕಂ = ಮೂವತ್ತೆರಡು ಪ್ರಭೇದವುಳ್ಳ ವರಾಸಿಯುದ್ಧಂ = ಉತ್ತಮವಾದ ಖಡ್ಗ ಯುದ್ಧವನ್ನು ಪ್ರದರ್ಶ್ಯ = ತೋರಿಸಿ ನಿರ್ವಿಶೇಷಕೌಸಂತೌ = ಒಬ್ಬರಿಂದ ಇನ್ನೊಬ್ಬರಲ್ಲಿ ಯಾವ ವಿಶೇಷವೂ ಇಲ್ಲದವರಾಗಿ ಚಿರಂ = ಬಹು ಕಾಲದವರೆಗೆ ವ್ಯವಸ್ಥಿತೌ = ನಿಂತರು. ॥ ೭೦ ॥

ಪರಸ್ಪರಾಂತರೇಷಿಣೌ ನ ಚಾಂತರಂ ವ್ಯಪಶ್ಯತಾಂ ।
ತತೋ ವಿಹಾಯ ಸಂಗರಂ ಗತೌ ನಿರರ್ಥಕಂತ್ಪಿತಿ ॥ ೨೭೧ ॥

ಪರಸ್ಪರಾಂತರೇಷಿಣೌ = ಅನ್ಯೋನ್ಯ ಸದೆಬಡಿಯಲು ಅವಕಾಶವನ್ನು ಇಚ್ಛಿಸತಕ್ಕ ಡಿಭಿಕ ಸಾತ್ಯಕಿರಿಬ್ಬರೂ ಅಂತರಂ = ಅವಕಾಶವನ್ನು ನ ವ್ಯಪಶ್ಯತಾಂ = ನೋಡಲಿಲ್ಲ. ತತಃ = ಅನಂತರ ನಿರರ್ಥಕಂ = ಯಂದ್ದವು ಪ್ರಯೋಜನವಿಲ್ಲದ್ದು ಇತಿ = ಎಂದು ಸಂಗರಂ = ಯುದ್ಧವನ್ನು ವಿಹಾಯ = ಬಿಟ್ಟು ಗತೌ = ಹೋದರು. ॥ ೨೭೧ ॥

ತತಃ ಸ ಹಂಸ ಸಂಯುತೋ ಜಗಾಮ ಯೋದ್ಧು ಮಚ್ಯುತಂ ।
ಕ್ಷಣೇನ ತೌ ನಿರಾಯುಧೌ ಚಕಾರ ಕೇಶವಃ ಶರೈಃ ॥ ೨೭೨ ॥

ತತಃ = ಅನಂತರ ಹಂಸಸಂಯುತಃ = ಹಂಸನಿಂದ ಕೂಡಿದ ಸಃ=ಆ ಡಿಭಿಕನು ಅಚ್ಯುತಂ=ಶ್ರೀಕೃಷ್ಣನನ್ನು ಯುದ್ಧಂ=ಯುದ್ಧವಾಡಲು ಜಗಾಮ=ಹೋದನಂ. ಕೇಶವಃ=ಶ್ರೀಕೃಷ್ಣನು ಶರೈಃ=ಬಾಣಗಳಿಂದ ಕ್ಷಣೇನ=ಕೂಡಲೆ ಆ ಹಂಸ ಡಿಭಿಕರನ್ನು ನಿರಾಯುಧೌ=ಆಯುಧರಹಿತರನ್ನಾಗಿ ಚಕಾರ=ಮಾಡಿದನಂ. ॥ ೨೭೨ ॥

ಹತಂಚ ಸೈನ್ಯಮೇತಯೋ ಶ್ಚತುರ್ಥಭಾಗಶೇಷಿತಂ ।
ಕ್ಷಣೇನ ಕೇಶವೇನ ತದ್ಭಯಾದಪೇಯು ತುಶ್ಚ ತೌ ॥ ೨೭೩ ॥

ಚತುರ್ಥಭಾಗಶೇಷಿತಂ=ನಾಲ್ಕನೇ ಒಂದು ಭಾಗವು ಉಳಿಸಲ್ಪಟ್ಟದ್ದು ಹೇಗೋ ಹಾಗೆ ಏತಯೋಃ=ಈ ಪಂ ಡಿಭಿಕರ ಸೈನ್ಯಂ=ಸೈನ್ಯವು ಕೇಶವೇನ=ಶ್ರೀಕೃಷ್ಣನಿಂದ ಕ್ಷಣೇನ=ಕೂಡಲೇ ಹತಂ=ಕೊಲ್ಲಲ್ಪಟ್ಟಿತಂ. ತೌ=ಆ ಹಂಸಡಿಭಿಕ ತದ್ಭಯಾತ್=ಆ ಶ್ರೀಕೃಷ್ಣನ ಹೆದರಿಕೆಯಿಂದ ಅಪೇಯತುಃ=ಹೊರಟು ಹೋದರು. ॥ ೨೭೩ ॥

ಸ ಪುಷ್ಕರೇಕ್ಷಣಸ್ತದಾ ಸುರೈರ್ನುತೋಥ ಪುಷ್ಕರೇ ।
ಉವಾಸ ತಾಂ ನಿಶಾಂ ಪ್ರಭುಃ ಸಯಾದವೋsಮಿತ ಪ್ರಭುಃ ॥ ೨೭೪ ॥

ತದಾ=ಆಗ ಪುಷ್ಕರೇಕ್ಷಣಃ=ಕಮಲದಂತೆ ಕಣ್ಣುಗಳುಳ್ಳ ಸಃ=ಆ ಶ್ರೀಕೃಷ್ಣನಂ ಸುರೈಃ=ದೇವತೆಗಳಿಂದ ನುತ ಸ್ತೋತ್ರ ಮಾಡಿಸಿಕೊಳ್ಳಲ್ಪಟ್ಟನು. ಅಥ=ಅನಂತರ ಅಮಿತಪ್ರಭಃ = ಅಪರಿಮಿತ ಕಾಂತಿಯಂಳ್ಳ ಯಾದವಃ=ಯದುಕುಲೆ ತ್ಪನ್ನನಾದ ಪ್ರಭುಃ=ಸಮರ್ಥನಾದ ಸಃ=ಆ ಶ್ರೀಕೃಷ್ಣನು ಪುಷ್ಕರೇ=ಪುಷ್ಕರದಲ್ಲಿ ತಾಂನಿಶಾಂ=ಆ ರಾತ್ರಿಯಲ್ಲಿ ಉವಾ ವಾಸ ಮಾಡಿದನು. ॥ ೨೭೪ ॥

ಪರೇದಿನೇಜನಾರ್ದನೋ ನೃಪಾತ್ಮಜೌ ಪ್ರವಿದ್ಯುತೌ ।
ಯಮುಸ್ಸಸುಸ್ತಟೇ ಪ್ರಭುಃ ಸಮಾಸಸಾದ ಪೃಷ್ಠತಃ ॥ ೨೭೫ ॥

ಅರಿಹಾ = ಶತ್ರುಗಳನ್ನು ಸಂಹರಿಸುವ ಕೇಶವಃ=ಶ್ರೀಕೃಷ್ಣನು ತಂ=ಆ ಡಿಭಿಕನನ್ನು ಆಶು=ಕೂಡಲೇ ಸಮಸ್ತ ಸಾಧನೋಜ್ಝಿತಂ=ಎಲ್ಲಾ ಯುದ್ಧಸನ್ನಾಹರಹಿತನನ್ನಾಗಿ ಚಕಾರ=ಮಾಡಿದನು. ಸೋಪಿ=ಆ ಡಿಭಿಕನಾದರೂ ಕ್ಷಣಾತ್=ಕೂಡಲೇ ತಂ=ಆ ಕೃಷ್ಣನನ್ನು ವಿಸೃಜ್ಯ=ಬಿಟ್ಟು ಹಲಾಯುಧಂ=ಬಲರಾಮನನ್ನು ಕುರಿತು ಆಗಾತ್=ಹೋದನು. ॥ ೨೮೧ ॥

ಹಲಾಯುಧೋ ನಿರಾಯುಧಂ ವಿಧಾಯ ಹಂಸ ಮೋಜಸಾ ।
ವಿಕೃಷ್ಟ ಚಾಪಮಾಗತಂ ದದರ್ಶ ತಸ್ಯಚಾನುಜಂ ॥ ೨೮೨ ॥

ಹಲಾಯುಧಃ=ಬಲರಾಮನು ಓಜಸಾ=ಸಾಮರ್ಥ್ಯದಿಂದ ಹಂಸಂ=ಹಂಸನನ್ನು ನಿರಾಯುಧಂ=ಆಯುಧವಿಲ್ಲದವನನ್ನಾಗಿ ವಿಧಾಯ=ಮಾಡಿ ವಿಕೃಷ್ಟಚಾಪಂ=ಶೆಳೆಯಲ್ಪಟ್ಟ ಧನುಸ್ಸುಳ್ಳ ಆಗತಂ=ಬಂದಿರುವ ತಸ್ಯ=ಆ ಹಂಸನ ಅನುಜಂ=ತಮ್ಮನಾದ ಡಿಭಿಕನನ್ನು ದದರ್ಶ=ನೋಡಿದನು. ॥ ೨೮೨ ॥

ಸಹಂಸ ಆಶು ಕಾರ್ಮುಕಂ ಪುನಃ ಪ್ರಗೃಹ್ಯ ತಂಬಲಂ ।
ಯದಾಸಸಾದ ಕೇಶವೋ ನ್ಯವಾರಯತ್ತಮೋಜಸಾ ॥ ೨೮೩ ॥

ಸಹಂಸಃ=ಹಿಂದೊಮ್ಮೆ ಬಲರಾಮನಿಂದ ಆಯುಧರಹಿತನಾಗಿ ಮಾಡಲ್ಪಟ್ಟ ಹಂಸನು ಪುನಃ=ಮತ್ತೆ ಕೂಡಲೇ ಕಾರ್ಮುಕಂ=ಧನುಸ್ಸನ್ನು ಪ್ರಗೃಹ್ಯ=ಹಿಡಿದುಕೊಂಡು ತಂಬಲಂ=ಆ ಬಲರಾಮನನ್ನು ಯದಾ ಅಸಸಾದ=ಹೊಂದಿದನೋ ತದಾ=ಆಗ ಕೇಶವಃ=ಶ್ರೀಕೃಷ್ಣನು ಓಜಸಾ=ಸಾಮರ್ಥ್ಯದಿಂದ ತಂ=ಆ ಹಂಸ ನ್ಯವಾರಯತ್=ತಡೆದನು. ॥ ೨೮೩ ॥

ಶಿನೇಃ ಸುತಾತ್ಮಜೋಽಪ್ಯಸೌ ವಿಹಾಯ ಹಂಸಕಾನುಜಂ ।
ರಥಾಂತರಂ ಸಮಾಸ್ಥಿತೋ ಜಗಾಮತಾತಮಸ್ಯ ಚ ॥ ೨೮೪ ॥

ಶಿನೇಃ =ಶಿನಿಯ ಸುತಾತ್ಮಜಃ = ಮೊಮ್ಮಗನಾದ ಅಸಾವಪಿ = ಹಿಂದೆ ಡಿಭಿಕನಿಂದ ರಥರಹಿತನಾಗಿ ಮಾಡಲ್ಪಟ್ಟ ಈ ಸಾತ್ಯಕಿಯೂ ಕೂಡ ಹಂಸಕಾನುಜಂ= ಹಂಸನ ತಮ್ಮನಾದ ಡಿಭಿಕನನ್ನು ವಿಹಾಯ= ಬಿಟ್ಟು ರಥಾಂತರಂ = ಇನ್ನೊಂದು ರಥವನ್ನು ಸಮಾಸ್ಥಿತಃಸನ್ = ಏರಿದವನಾಗಿ ಅಸ್ಯ = ಈ ಡಿಭಿಕನ ತಾತಂ = ತಂದೆಯಾದ ಬ್ರಹ್ಮದತ್ತನನ್ನು ಜಗಾಮ = ಹೊಂದಿದನು. ॥ ೨೮೪ ॥

ತಯೋರ್ಮಹತಃ ಪಿತಾ ತಯೋರ್ಯುಯೋಧ ತೇನ ವೃಷ್ಣಿನಾ ।
ಶರಂ ಚ ಕಂಠಕೂಬರೇ ವ್ಯಸರ್ಜಯತ್ಯಸಾತ್ಯಕೇಃ ॥ ೨೮೫ ॥

ತಯೋರ್ಮಹತಃ= ಮುದುಕನಾದ ತಯೋಃ= ಆ ಹಂಸಡಿಭಿಕರ ಪಿತಾ= ತಂದೆಯಾದ ಬ್ರಹ್ಮದತ್ತನು ತೇನವೃಷ್ಣಿನಾ = ಆ ಸಾತ್ಯಕಿಯಿಂದ ಯುಯೋಧ = ಯುದ್ಧಮಾಡಿದನು. ಸಃ = ಆ ಬ್ರಹ್ಮದತ್ತನು ಸಾತ್ಯಕೇಃ = ಸಾತ್ಯಕಿಯ ಕಂಠಕೂಬರೇ = ಕುತ್ತಿಗೆ ಮತ್ತು ಎದೆ ಇವುಗಳ ಮಧ್ಯದಲ್ಲಿರುವ ತಗ್ಗು ಪ್ರದೇಶದಲ್ಲಿ ಶರಂ = ಬಾಣವನ್ನು ವ್ಯಸರ್ಜಯತ್ = ಬಿಟ್ಟನು. ॥ ೨೮೫ ॥

ಸ ಸಾತ್ಯಕಿರ್ದೃಢಾಹತೋ ಜಗಾಮ ಮೋಹ ಮಾಶು ಚ ।
ಸುಲಬ್ಧಸಂಜ್ಞ ಉತ್ಥಿತಃ ಸಮಾದದೇಽರ್ಧಚಂದ್ರಕಂ ॥ ೨೮೬ ॥

ದೃಢಾಹತಃ = ಚೆನ್ನಾಗಿ ತಾಡಿತನಾದ ಸಸಾತ್ಯಕಿಃ = ಆ ಸಾತ್ಯಕಿಯು ಆಶು = ಕೂಡಲೇ ಮೋಹಂ = ಮೂರ್ಛೆಯನ್ನು ಜಗಾಮ = ಹೊಂದಿದನು. ಸುಲಬ್ಧಸಂಜ್ಞಃ = ಚೆನ್ನಾಗಿ ಹೊಂದಲ್ಪಟ್ಟ ಪ್ರಜ್ಞೆ ಉಳ್ಳ ಉತ್ಥಿತಃ = ಎದ್ದಿರತಕ್ಕ ಸಾತ್ಯಕಿಯು ಅರ್ಧಚಂದ್ರಕಂ = ಅರ್ಧಚಂದ್ರಾಕಾರವಾದ ಬಾಣ ವಿಶೇಷವನ್ನು ಸಮಾದದೇ = ಬತ್ತಳಿಗೆಯಿಂದ ತೆಗೆದನು. ॥ ೨೮೬ ॥

ಸ ತೇನ ತಚ್ಛಿರೋಬಲೀ ಚಕರ್ತಶುಕ್ಲಮೂರ್ಧಜಂ ।
ಯದಂ ಬಯಾಭಿಕಾಮಿತಂ ಪುರಾಪಪಾತ ತತ್ಕ್ಷಿತೌ ॥ ೨೪೭ ॥

ಬಲೀ=ಬಲಿಷ್ಠನಾದ ಸಃ=ಆ ಸಾತ್ಯಕಿಯು ತೇನ=ಆ ಅರ್ಧಚಂದ್ರಾಕಾರ ಬಾಣದಿಂದ ಶುಕ್ಲಮೂರ್ಧಜಂ=ಬೆಳ್ಳಗಾದ ತಲೆಕೂದಲುಗಳುಳ್ಳ ತಚ್ಛಿರಃ=ಆ ಬ್ರಹ್ಮದತ್ತನ ತಲೆಯನ್ನು ಚಕರ್ತ=ಕತ್ತರಿಸಿದನು ಪುರಾ=ಹಿಂದೆ ಅಂಬಯಾ=ಅಂಬೆಯಿಂದ ಯತ್=ಯಾವಶಿರಸ್ಸು ಅಭಿಕಾಮಿತಂ=ಅಪೇಕ್ಷಿಸಲ್ಪಟ್ಟಿದ್ದೋ ತತ್=ಅಂತಹ ಶಿರಸ್ಸು ಕ್ಷಿತೌ=ಭೂಮಿಯಲ್ಲಿ ಪಪಾತ=ಬಿದ್ದಿತು. ॥ ೨೪೭ ॥

ನಂದಶ್ಚ ಸಾತ್ಯಕಿರ್ಹರೇರ್ಜಗಾಮ ಪಾರ್ಶ್ವಮುದ್ಧತಃ ।
ಬಲೋಽಪಿ ಹಂಸಕಾನುಜಂ ಯುಯೋಧ ಸೇನಯಾಯುತಂ ॥ ೨೪೪ ॥

ಉದ್ಧತಃ=ದೃಪ್ತನಾದ ಸಾತ್ಯಕಿಃ=ಸಾತ್ಯಕಿಯು ನದನ್ಸನ್=ಸಿಂಹನಾದ ಮಾಡತಕ್ಕವನಾಗಿ ಹರೇಃ=ಶ್ರೀಕೃಷ್ಣನ ಪಾರ್ಶ್ವಂ=ಸಮೀಪವನ್ನು ಜಗಾಮ=ಹೋದನು. ಬಲೋಽಪಿ=ಬಲರಾಮನೂ ಕೂಡ ಸೇನಯಾ=ಸೇನೆಯಿಂದ ಯುತಂ=ಕಾನುಜಂ=ಹಂಸನ ತಮ್ಮನಾದ ಡಿಭಿಕನನ್ನು ಯುಯೋಧ=ಯುದ್ಧ ಮಾಡಿದನು. ॥ ೨೪೪ ॥

ಹರಿಸ್ತು ಹಂಸಮುಲ್ಬಣೈಃ ಶರೈಃ ಸಮರ್ದಯನ್ಬಲಂ ।
ಜಘಾನ ತಸ್ಯ ಸರ್ವಶೋ ನ ಕಶ್ಚಿದತ್ರ ಶೇಷಿತಃ ॥ ೨೪೯ ॥

ಹರಿಸ್ತು=ಶ್ರೀಕೃಷ್ಣನಾದರೂ ಉಲ್ಬಣೈಃ=ನಿಶಿತಗಳಾದ ಶರೈಃ=ಬಾಣಗಳಿಂದ ಹಂಸಂ=ಹಂಸನನ್ನು ಸಮರ್ದಯನ್=ಪೀಡಿಸತಕ್ಕವನಾಗಿ ತಸ್ಯ=ಆ ಹಂಸನ ಸರ್ವಶಃ=ಎಲ್ಲಾ ಬಲಂ=ಸೈನ್ಯವನ್ನು ಜಘಾನ=ಕೊಂದನು. ಅತ್ರ=ಅಲ್ಲಿ ಕಶ್ಚಿತ್=ಯಾವನೊಬ್ಬ ಅಸುರನೂ ನಶೇಷಿತಃ=ಉಳಿಯಲಿಲ್ಲ ॥ ೨೪೯ ॥

ಸ ಏಕ ಏವ ಕೇಶವಂ ಮಹಾಸ್ತ್ರ ಮುಕ್ಸಾರಹ ।
ನಿವಾರ್ಯತಾನಿ ಸರ್ವಶೋ ಹರಿರ್ನಿಜಾಸ್ತ್ರಮಾದದೇ ॥ ೨೯೦ ॥

ಸ ಏಕ ಏವ=ಆ ಹಂಸನೊಬ್ಬನೇ ಮಹಾಸ್ತ್ರ ಮುತ್ಕೃಸನ್=ಶ್ರೇಷ್ಠ ಅಸ್ತ್ರಗಳನ್ನು ಬಿಡತಕ್ಕವನಾಗಿ ಕೇಶವಂ=ಶ್ರೀಕೃಷ್ಣನನ್ನು ಸಸಾರಹ=ಹೊಂದಿದನು. ಹರಿಃ=ಶ್ರೀಕೃಷ್ಣನು ತಾನಿ ಸರ್ವಶಃ=ಹಂಸನು ಬಿಟ್ಟ ಎಲ್ಲಾ ಅಸ್ತ್ರಗಳನ್ನು ನಿವಾರ್ಯ=ತಡೆದು ನಿಜಾಸ್ತ್ರಂ=ತನ್ನ ವೈಷ್ಣವಾಸ್ತ್ರವನ್ನು ಆದದೇ=ಹಿಡಿದನು. ॥ ೨೯೦ ॥

ಸ ವೈಷ್ಣವಾಸ್ತ್ರ ಮುದ್ಯತಂ ನಿರೀಕ್ಷ್ಯಯಾನತೋ ಮಹೀಂ ।
ಗತಃ ಪರಾದ್ರವದ್ಭಯಾತ್ಪಪಾತ ಯಾಮುನೋದಕೇ ॥ ೨೯೧ ॥

ಸಃ=ಆ ಹಂಸನು ಉದ್ಯತಂ=ಎತ್ತಲ್ಪಟ್ಟ ವೈಷ್ಣವಾಸ್ತ್ರಂ=ವಿಷ್ಣುದೇವತಾಕವಾದ ಅಸ್ತ್ರವನ್ನು ನಿರೀಕ್ಷ್ಯ=ನೋಡಿ ಯಾನತಃ=ರಥದಿಂದ ಮಹೀಂ=ಭೂಮಿಯನ್ನು ಗತಃಸನ್=ಹೊಂದಿದವನಾಗಿ ಭಯಾತ್=ಹೆದರಿಕೆಯಿಂದ ಪರಾದ್ರವತ್=ಓಡಿದನು. ಯಾಮುನೋದಕೇ=ಯಮುನಾ ನದಿಯ ಸಂಬಂಧಿಯಾದ ನೀರಿನಲ್ಲಿ ಪಪಾತ=ಬಿದ್ದನು. ॥ ೨೯೧ ॥

ವರಾಸ್ತ್ರಪಾಣೀರೀಶ್ವರಃ ಪದಾಹನಚ್ಛಿರಸ್ಯಮುಂ ।
ಸ ಮೂರ್ಛಿತೋ ಮುಖೇಽಪತನ್ಮಹಾಭುಜಂಗಮಸ್ಯಹಿ ॥ ೨೯೨ ॥

ವರಾಸ್ತ್ರಪಾಣಿಃ=ಉತ್ತಮ ಅಸ್ತ್ರವು ಕೈಯಲ್ಲಿರುವ ಈಶ್ವರಃ=ಶ್ರೀಕೃಷ್ಣನು ಅಮುಂ=ಈ ಹಂಸನನ್ನು ಶಿರಸಿ=ತಲೆಯಲ್ಲಿ ಪದಾ=ಕಾಲಿನಿಂದ ಆಹನತ್=ಹೊಡೆದನು. ಸಃ=ಆ ಹಂಸನು ಮೂರ್ಛಿತಃಸನ್=ಮೂರ್ಛಿತನಾಗಿ ಮಹಾ ಭುಜಂಗಮಸ್ಯ=ಯಮುನೆಯಲ್ಲಿರುವ ದೊಡ್ಡ ಸರ್ಪದ ಮುಖೇ=ಬಾಯಿಯಲ್ಲಿ ಅಪತತ್=ಬಿದ್ದನು. ॥ ೨೯೨ ॥

ಸ ಧಾರ್ತರಾಷ್ಟ್ರಕೋದರೇ ಯಥಾತಮೋಂಽಧಮೇಯಿವಾನ್ ।
ತಥಾ ಸುದುಃಖ ಸಂಯುತೋ ವ ಸನ್ಮನೋಃ ಪರಂವ್ರಿಯೇತ್ ॥ ೨೯೩ ॥

ಅಂಧಂತಮಃ=ಅಂಧಂತಮಂಸ್ಸನ್ನು ಏಯಿವಾನ್=ಹೊಂದಿದವನು ಯಥಾ=ಹೇಗೆ ದುಃಖಿವನ್ನು ಅನುಭವಿಸುವನೋ ತಥಾ=ಹಾಗೆಯೇ ಸಃ=ಆ ಹಂಸನು ಸುದುಃಖ ಸಂಯುತಃ ಸನ್=ಆತಿದುಃಖದಿಂದ ಕೂಡಿದವನಾಗಿ ಧಾರ್ತರಾಷ್ಟ್ರಕೋದರೇ=ಧೃತರಾಷ್ಟ್ರನೆಂಬ ಸರ್ಪದ ಹೊಟ್ಟೆಯಲ್ಲಿ ಅವಸತ್=ವಾಸಿಸಿದನು. ಮನೋಃ=ವೈವಸ್ವತ ಮನುವಿನ ಪರಂ=ಅನಂತರ ವ್ರಿಯೇತ್=ಸಾಯುವನು. ॥ ೨೯೩ ॥

ತತೋಂಧ ಮೇವ ತತ್ತಮೋ ಹರೇರ್ದ್ವಿಡೇತಿ ನಿಶ್ಚಯಾತ್ ।
ತದಾಸ್ಯ ಚಾನುಚೋಽಗ್ರಜಂ ವಿಮಾರ್ಗಯನ್ಜಲೇಽಪತತ್ ॥ ೨೯೪ ॥
ವಿಹಾಯ ರೋಹಿಣೇಸುತಂ ಜಲೇನಿಮಜ್ಯ ಮಾರ್ಗಯನ್ ।
ಅಪಶ್ಯಮಾನ ಆತ್ಮನೋ ವ್ಯಪಾಟಯಚ್ಚ ಕಾಕುದಂ ॥ ೨೯೫ ॥

ತತಃ=ಮರಣಾನಂತರ ಹರೇಃ=ಪರಮಾತ್ಮನ ದ್ವಿಟ್=ದ್ವೇಷಿಯಾದ ಹಂಸನು ನಿಶ್ಚಯಾತ್=ನಿಶ್ಚಯದಿಂದ ತತ್=ಆ ಪ್ರಸಿದ್ಧವಾದ ಅಂಧಂತಮಏವ=ಅಂಧಂತಮನಸ್ಸನೇ ಏತಿ=ಹೊಂದುವನು. ತದಾ=ಹಂಸನ ಸಮಯದಲ್ಲಿ ಅಸ್ಯ=ಈ ಹಂಸನ ಅನುಜಃ=ತಮ್ಮನಾದ ಡಿಭಿಕನು ರೋಹಿಣೇಸುತಂ=ರೋಹಿಣಿಯ ಮಗನನ್ನು ವಿಹಾಯ=ಬಿಟ್ಟು ಅಗ್ರಜಂ=ಅಣ್ಣನಾದ ಹಂಸನನ್ನು ವಿಮಾರ್ಗಯನ್ಸನ್=ಹುಡುಕುತಕ್ಕವನಾಗಿ ಜಲೇ ಅಪತತ್=ಬಿದ್ದನು. ಜಲೇ=ನೀರಿನಲ್ಲಿ ನಿಮಜ್ಯ=ಮುಳುಗಿ ಮಾರ್ಗಯನ್ಸನ್=ಹುಡುಕುವವನಾಗಿ ಅಪಶ್ಯನ್=ನೀರಿನಲ್ಲಿ ಅಣ್ಣನನ್ನು ನೋಡದವನಾಗಿ ಆತ್ಮನಃ=ತನ್ನ ಕಾಕುದಂ=ನಾಲಿಗೆಯ ಬುಡದಲ್ಲಿರುವ ಕಿರು ನಾ ವ್ಯಪಾಟಯತ್=ಕಿತ್ತೊಗೆದನು. ॥ ೨೯೪ ॥ ೨೯೫ ॥

ವಿಹಾಯ ದೇಹಮುಲ್ಬಣಂ ತಮೋವತೀರ್ಯ ಚಾಗ್ರಜಂ ।
ಪ್ರತೀಕ್ಷ್ಯಮಾಣ ಉಲ್ಬಣಂ ಸಮುತ್ತಿ ತತ್ಸುಖೇತರಂ ॥ ೨೯೬ ॥

ಸಃ=ಆ ಡಿಭಿಕನು ದೇಹಂ=ಶರೀರವನ್ನು ವಿಹಾಯ=ಬಿಟ್ಟು ಉಲ್ಬಣಂ=ಕ್ರೂರವಾದ ತಮಃ=ತಮಂಸ್ಸನ್ನು ಅವತೀರ್ಯ=ಹೊಂದಿ ಅಗ್ರಜಂ=ಅಣ್ಣನಾದ ಹಂಸನನ್ನು ಪ್ರತೀಕ್ಷ್ಯಮಾಣಃಸನ್=ತಮಸ್ಸಿನಲ್ಲಿ ನಿರೀಕ್ಷಿಸುವವನಾಗಿ ಉಲ್ಬಣಂ=ಸಹಿಸಲಶಕ್ಯವಾದ ತತ್=ಆ ಸ್ವರೂಪಭೂತವೆಂದು ಪ್ರಸಿದ್ಧವಾದ ಸುಖೇತರಂ=ಸುಖದಿಂದ ಇತರವಾದ ದುಃಖವನ್ನು ಸಮುತ್ತಿ=ಚೆನ್ನಾಗಿ ಅನುಭವಿಸುತ್ತಾನೆ. ॥ ೨೯೬ ॥

ತತೋ ಹರಿರ್ಬಲೈರ್ಯುತೋ ಬಲಾನ್ವಿತೋಮುನೀಶ್ವರೈಃ ।
ಸಮಂ ಕುಶಸ್ಥಲೀಯಯೌ ಸ್ತುತಃ ಕಶಂಕರಾದಿಭಿಃ ॥ ೨೯೭ ॥

ತತಃ=ಅನಂತರ ಬಲೈಃ=ಯಾದವ ಸೈನ್ಯದಿಂದ ಯುತಃ=ಕೂಡಿದ ಬಲಾನ್ವಿತಃ=ಬಲರಾಮನಿಂದ ಕೂಡಿದ ಕಶಂಕರಾದಿಭಿಃ=ಬ್ರಹ್ಮ, ರುದ್ರ ಮೊದಲಾದವರಿಂದ ಸ್ತುತ=ಸ್ತೋತ್ರಮಾಡಿಸಿಕೊಳ್ಳಲ್ಪಟ್ಟ ಹರಿಃ=ಶ್ರೀಕೃಷ್ಣನು ಮುನೀಶ್ವರೈಃ=ಯತಿಶ್ರೇಷ್ಠರಿಂದ ಸಮಂ=ಕೂಡಿಕೊಂಡು ಕುಶಸ್ಥಲೀಂ=ದ್ವಾರಕಾ ಪಟ್ಟಣವನ್ನು ಕುರಿತು ಯಯೌ=ಹೊರಟನು. ॥ ೨೯೭ ॥

ಸ್ವಕೀಯಪಾದಪಲ್ಲವಾಶ್ರಯಂ ಜನಂ ಪ್ರಹರ್ಷಯನ್ ।
ಉವಾಸ ನಿತ್ಯಸತ್ಸುಖಾರ್ಣವೋ ರಮಾಪತಿರ್ಗೃಹೇ ॥ ೨೯೮ ॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ
ಶ್ರೀಕೃಷ್ಣಚರಿತೇ ಕೃಷ್ಣ ವಿಜಯೋ
ನಾಮ ಸಪ್ತದಶೋಧ್ಯಾಯಃ ॥ ೧೭ ॥
॥ ಶ್ರೀ ಕೃಷ್ಣಾರ್ಪಣಮಸ್ತು ॥

ನಿತ್ಯಸತ್ಯಾನಂದವಃ=ನಿತ್ಯವಾದ ನಿರ್ದುಷ್ಟವಾದ ಆನಂದದಿಂದ ಸಮಂದ್ರದಂತಿರುವ ರಮಾಪತಿಃ=ಲಕ್ಷ್ಮೀಪತಿಯಾದ ಶ್ರೀಕೃಷ್ಣನು ಸ್ವಕೀಯಪಾದಪಲ್ಲವಾಶ್ರಯಂ=ತನ್ನದ್ದಾದ ಚಿಗುರೆಲೆಯಂತಿರುವ ಪಾದವೇ ಆಶ್ರಯವಾಗಿ ಉಳ್ಳ ಜನರನ್ನು ಪ್ರಹರ್ಷಯಂನ್‌ಸನ್=ಸಂತೋಷಪಡಿಸುವವನಾಗಿ ಗೃಹೇ=ತನ್ನ ಮಂದಿರದಲ್ಲಿ ಉವಾಸ=ವಾಸ ॥ ೨೯೮ ॥

ರೀತಿಯಾಗಿ ಶ್ರೀಮದಾನಂದತೀರ್ಥಭಗವತ್ಪಾಚಾರ್ಯರಿಂದ ರಚಿಸಲ್ಪಟ್ಟ ಶ್ರೀಮನ್ಮಹಾಭಾರತತಾತ್ಪರ್ಯ ಕೃಷ್ಣಚರಿತ್ರೆಯಲ್ಲಿ ಕೃಷ್ಣವಿಜಯವನ್ನು ಪ್ರತಿಪಾದಿಸುವ ಹದಿನೇಳನೇ ಅಧ್ಯಾಯವು ಸಮಾಪ್ತವಾಯಿತು. ಶ್ರೀಕೃಷ್ಣನಿಗೆ ಅರ್ಪಿತವಾಗಲಿ.

ತಿದುಪಡಿ

ಸಾಲು	ತಪ್ಪು	ಸರಿ
5	ನಿರ್ಣಯೆ ದುಂಷ್ಟನಿಗ್ರಯುನಾಮುಕೊ	ನಿರ್ಣಯೋ ದುಂಷ್ಟನಿಗ್ರಹ ನಾಮುಕೋ ನಾಮ
8	ಕೃಷೊಣ	ಕೃಷೊಣೀ
8	ಪಿತರಾವಭಿವಂರ್ದ	ಪಿತರಾವಭಿವಂದ್ಯಃ
9	ಚೋಗ್ರಸೇನೆ ದ್ವಿಜತ್ವ	ಚೋಗ್ರಸೇನೇ ದ್ವಿಜತ್ವ
13	ಉಗ್ರಸೇನೆ	ಉಗ್ರಸೇನೇ
23	ಸಬಾರ್ಯಃಸನ್	ಸಭಾರ್ಯಃಸನ್
24	ಧ್ಯಾನ ಮಾಡಿದನು	ವಾಸ ಮಾಡಿದನು
25	ಸಹ	ಸಹಿ
2 1		ಸಹಬಲಃಸನ್=ಬಲರಾಮನಿಂದ ಕೂಡಿದವನಾಗಿ
5	ವತ್ತಿಃ	ವೃತ್ತಿಃ
6	ಜ್ಞಾನಾದಿಗೂಹನ	ಜ್ಞಾನಾದಿಗೂಹವ
6	ಮುಂತಾಧ್ಯನಾಯು ನಾಧಿತ್ರ	ಮುಂತಾಧ್ಯನಾಯಃ ನಾದಿರತ್ರ
10	ತತ್=ಆದ್ದರಿಂದ ಜ್ಞಾಪನಾರ್ಥಂ	ತತ್ ಜ್ಞಾಪನಾರ್ಥಂ=
11	ರಿಗೆ ಧರ್ಮವನ್ನು	ರಿಗೆ ಆ ಧರ್ಮವನ್ನು
15	ಅದಾಧ್ಯತ್	ಆದಾತ್
17	ಸಜಾನ್‌ಪದ	ಸಃ = ಆ ಕೃಷ್ಣನ
21	ಹರಿಪುರಾಹಿ	ಹರಿಂ ಪುರಾಹಿ

ಪುಟ	ಸಾಲು	ತಪ್ಪು	ಸರಿ
2	21	ವಂವಂದರ್ನಿ	ವಂವಂದಂರ್ನಿ
	28	ಏನಂ ಕಿಂವಾಚ್ಯಂ	ಕಿಂವಾಚ್ಯಂ
	29	ಬವೇತ್	ಭವೇತ್
	29	ರ್ನಿವಾಸ	ರ್ನಿವಾಸೇ
	30	ಯುಂದಧಿವಾತರ್	ಯಂಬದಧಿ ವಾತತಃ
3	3	ಪ್ರಯರ್ಯಾಂ	ಪುಯರ್ಯಾಂ
	5	ವಿಧತ್ತೆ	ವಿಧತ್ತೇ
	12	ಸರ್ವಾಸ್ಯದೂನ್	ಸರ್ವಾನ್ ಯದೂನ್
	14	ಈ ಈ	ಈ
	16	ಪಾಸ್ತಿ=ಅಸ್ತಿ ಪಾಸ್ತೀ	ಪ್ರಾಸ್ತೀ=ಅಸ್ತಿ ಪ್ರಾಸ್ತೀ
	19	ಉರಂಪುರೂಢ	ಉರಂ ಪ್ರರೂಢ
	20	ಜಗತಶ್ಚ	ಜಗತಶ್ಚ
	27	ಸ	ಸ್ವ
	32	ಗದಾಂ=ಆ ಗದೆಯಂನ್ನ	ಸ್ವಗದಾಂ=ಆ ತನ್ನ ಗದೆಯಂನ್ನ
4	2	ಯಾರ್ಥೇಂ	ಯಾರ್ಥೇ
	13	ವಿಷ್ಣೋ=ಶ್ರೀಕೃಷ್ಣನ ಶಂಶ್ರಾವಣಂ	ವಿಷ್ಣೋಃ ಶ್ರೀಕೃಷ್ಣನ ಶಂಶ್ರಾವಣಂ
	17	ಭಗವತೋಧ	ಭಗವತೋಧ
	18	ಸದನಂನಾ	ಸದನಂ
	19	ಅರ್ಥ = ಶ್ರೀಹರಿಯಂ ಕಾರಣದಿಂದಾಗಿ	ಶ್ರೀಹರಿಗೋಸ್ಕರ
	23	ಸದನಂ=ಯಾತಾರುದ್ರ	ಸದನಂ ಯಾತಾ=
	24	ಸವಾತೃತ	ಸ್ವವಾತೃತ
	25	ಹೀನ	ಹೀನಃ
	31	ಕುವಂತಿ	ಕುವಂತಿಃ
	32	ಊಚತಂ	ತಾವೂಚತಂ
5	2	ವಿಂದ ವಿಂದಾನುಜೌ	ವಿಂದ ವಿಂದಾನಂಜೌ
	2	ಅನಂವಿಂದರನ್ನು	ಅನುವಿಂದನೆಂಬ
	2	ದೂತೇ	ದೂತೌ
	18	ಹೋಗುತ್ತೇನೆ	ಹೋಗುವೆನು
	27	ತ್ರಿಷ್ಟಭ್ಯುದೀರ್ಯಂ	ತ್ರಿಷ್ಟಭ್ಯುದೀರ್ಯ
	29	ಪಟ್ಟಣದಲ್ಲಿ	ಪಟ್ಟಣದ ಬಾಗಿಲುಗಳಲ್ಲಿ
6	2	ಜಗ್ಯಾಹಧಾರಂಕ	ಜಗ್ರಾಹದಾರಂಕ
	4	ಸಂಬಾಸ್ವರಾಣಿ	ಸಂಭಾಸ್ವರಾಣಿ
	9	ಶಾರ್ಜ್ಞಂಶ	ಶಾರ್ಙ್ಗಂಶ
	9	ವಂಗವಾದಿ ರಾಜ	ವಂಗಧಾಧಿರಾಜ
	9	ಪ್ರಯಂಯಸ್	ಪ್ರಯಂಯಸೌ
	12	ಕಟ್ಟಲ್ಪಟ್ಟ ಧನುಃ=	ಕಟ್ಟಲ್ಪಟ್ಟ ಶಾರ್ಙ್ಗಂ=ಶಾರ್ಙ್ಗವೆಂಬ ಧನುಃ=
	15	ಯಾನವಾಸ್ಥಾಯಂಕ	ಯಾನವಶಾಸ್ಥಾಯಂಸಾಯಂಕ
	16	ಭಲ್ಲೈರದೃಷ್ಯಃ	ಬಲ್ಲೈರಧೃಷ್ಯಃ